Expiry of office of the Taluk Development Boards

ಶ್ರೀ ಸಿ. ಬೈರೇಗೌಡ (ವೇಮಗಲ್).—ನೆನ್ನೆ ದಿವಸಕ್ಕೆ ರಾಜ್ಯದ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಅವಧಿಯು ಮುಗಿಯಿತು. ಇದುವರೆಗೂ ಕೂಡ ಸರ್ಕಾರ ಯಾವ ವಿಧವಾದ ಏರ್ಪಾಡನ್ನು ಮಾಡಿದ ಹಾಗೆ ಗೊತ್ತಾಗಲಿಲ್ಲ. ಆದ್ದರಿಂದ ಅವಕ್ಕೆ ಯಾವ ಏರ್ಪಾಡು ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು.

ಉಪಾಧ್ಯಕ್ಷರು.—ನನಗೆ ನೀವು ಹೇಳಿದ್ದು ಮೊದಲನೆ ಎರಡು ವಾಕ್ಯಗಳಲ್ಲಿ ತಿಳಿಯಿತು.

BUDGET ESTIMATES FOR 1975-76 DEMANDS FOR GRANTS

Demand No. 18, 19, 27, 53, 54 and 40.

SRI H. M. CHANNABASAPPA.—Sir, on the recommendation of the Governor, I beg to move:

"That a sum not exceeding Rs. 22,43,75,000 be granted to the Government to defray the charges which will come in the course of payment during the financial year ending 31st day of March 1976 in respect of Demand No. 18 "Public Works Excluding Construction"

"That a sum not exceeding Rs. 6,95,95,000 be granted to the Government to defray the charges which will come in the course of payment during the financial year ending 31st day of March 1976 in repect of Demand No. 19 "Buildings".

"That a sum not exceeding Rs. 11, 29, 50,000 be granted to the Government to defray the charges which will come in course of payment during the financial year ending 31st day of March 1976 in respect of Demand No. 27 'Public Health Engineering".

"That a sum not exceeding Rs. 1,07,73,000 be granted to the Government to defray the charges which will come in course of payment during the financial year ending 31st day of March 1976 in respect of Demand No. 53 "Ports and Water Transport Services".

"That a sum not exceeding Rs. 16,21,00,000 be granted to the Government to defray the charges which will come in course of payment during the financial year ending 31st day of March 1976 in respect of Demand No. 54 "Roads and Bridges".

"That a sum not exceeding 10,71,00,006 be granted to the Government to defray the charges which will come in course of payment during the financial year ending 31st day of March 1976 in respect of Demand No. 40 'Minor Irrigation".

MR. DEPUTY SPEAKER.—Motion moved. "That a sum not exceeding Rs. 22,43,75,000 be granted to the Government to defray the charges which will come in the course of payment during the financial year ending 31st day of March 1976 in respect of Demand No. 18 "Public Works (Excluding Construction)".

All the demands viz. Nos. 18, 19, 27, 53, 54 and 40 are deemed to have been moved. All these demands are before the House for discussion.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ಏನು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳು ಇವೆ, ಲೋಕೋಪಯೋಗಿ ಇಲಾಖೆ ಮತ್ತು ಮೈನರ್ ಇರಿಗೇಶನ್‌ಗೆ ಸಂಬಂಧಪಟ್ಟ ಬೇಡಿಕೆಗಳು ಇವುಗಳ ಬಗ್ಗೆ ಸಭೆಯು ಅಂಗೀಕಾರ ಕೊಡುವುದಕ್ಕೆ ಮುಂಚೆ ಈ ಒಂದು ಇಲಾಖೆ ಕಳೆದ ವರ್ಷ ಎಷ್ಟರಮಟ್ಟಿಗೆ ತನ್ನ ಕರ್ತವ್ಯವನ್ನು ಮಾಡಿದೆ ಎಂದು ಸ್ಥೂಲವಾದ ಸಮೀಕ್ಷೆ ಕೊಟ್ಟಿದ್ದರೆ ಚೆನ್ನಾಗಿತ್ತು

ಉಪಾಧ್ಯಕ್ಷರು.—ನೆನ್ನೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ನೆನ್ನೆ ಕಳುಹಿಸಿದ್ದರೆ ಅದು ನನಗೆ ತಲುಪಿಲ್ಲ. ತುಮಕೂರಿಗೆ ಹೋಗಿ ಇವತ್ತು ೧೨ ಗಂಟೆಗೆ ಬಂದೆ ಸ್ವಲ್ಪ ತಡವಾಯಿತು. ಸ್ವಲ್ಪ ಮುಂಚಿತವಾಗಿ ಕಳುಹಿಸಿದ್ದರೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅನುಕೂಲವಾಗುತ್ತಿತ್ತು ಎಂದು ಹೇಳುತ್ತೇನೆ.

ಮಾನ್ಯ ಸಭಾಪತಿಗಳೇ, ಪ್ರತಿಯೊಂದು ಡಿಮ್ಯಾಂಡ್ ಬಗ್ಗೆ ನಾನು ಪ್ರತಿವರ್ಷ ಹಲವಾರು ಉಪಯುಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದೇನೆ. ನನ್ನ ಅನುಭವದ ರೀತ್ಯ ನಾನು ಕೊಟ್ಟಿರುವ ಯಾವ ಸಲಹೆಗಳನ್ನೂ ಕೂಡ ಕಾರ್ಯರೂಪಕ್ಕೆ ತಂದಿಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ, ಕಾರಣವಾದರೂ ಇಷ್ಟೇ. ಈ ಇಲಾಖೆಯಲ್ಲಿ ಇದು ಒಂದು ಬಹಳ ಜನೋಪಯುಕ್ತ ಇಲಾಖೆ ಎನ್ನಿಸಿಕೊಳ್ಳುವ ರೀತಿಯಲ್ಲಿ ಕೆಲಸಮಾಡುವುದಕ್ಕೆ ಈವತ್ತು ಸರ್ಕಾರ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲವೆಂದು ಹೇಳಿದರೆ ಅದು ತಪ್ಪಾಗಲಾರದು.

ಈ ಲೋಕೋಪಯೋಗಿ ಇಲಾಖೆಗೆ ಒಂದು ಉಜ್ವಲ ಹೆಸರು ಕರ್ನಾಟಕದಲ್ಲಿತ್ತು. ಮೈಸೂರು ಇಂಜನಿಯರ್ಸ್ ಎಂದರೆ ಇಡೀ ಪ್ರಪಂಚದಲ್ಲೆ ಹೆಸರನ್ನುಗಳಿಸಿತ್ತು. ಆದರೆ ದುರ್ದೈವದಿಂದ ಈ ಹೊತ್ತು ಈ ಇಲಾಖೆ ಒಂದು ಗ್ರಹಚಾರ ಪೀಡಿತ ಇಲಾಖೆ ಆಗಿದೆ ಎಂದರೆ ತಪ್ಪಾಗಲಾರದು. ಈ ಇಲಾಖೆಯಲ್ಲಿ ದಕ್ಷಅಧಿಕಾರಿಗಳನ್ನು ಪೋಷಿಸಿಕೊಂಡು ಹೋಗತಕ್ಕ ರೀತಿಯಲ್ಲಿ ಸರ್ಕಾರ ನಡೆದುಕೊಂಡಿಲ್ಲ ಎನ್ನುವುದನ್ನು ಪ್ರಥಮದಲ್ಲಿ ಹೇಳಬೇಕಾಗುತ್ತದೆ.

ಮಾನ್ಯ ಸಭಾಪತಿಗಳೇ, ಸರ್ಕಾರ ಕಳೆದ ಮೂರು ವರ್ಷಗಳಿಂದ ಕೊಟ್ಟಿರತಕ್ಕ ಉತ್ತರಗಳನ್ನು ತೆಗೆದು ನೋಡಿದ್ದೇನೆ. ಒಂದು ಮಾತನ್ನು ಸರ್ವೇಸಾಮಾನ್ಯವಾಗಿ ಮಂತ್ರಿಗಳು ಹೇಳುತ್ತಾರೆ, ಏನೆಂದರೆ ಉಪಯುಕ್ತವಾದ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. ಕೆಲವು ಕಟುವಾದ ಟೀಕೆ ಮಾಡಿರುವುದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ. ಹೀಗೆ ಮಾನ್ಯ ಶ್ರೀ ಚನ್ನಬಸಪ್ಪನವರು ಅವರದೇ ಆದ ಧಾಟಿಯಲ್ಲಿ ಉತ್ತರವನ್ನು ಹೇಳಿಕೊಂಡು ಬರುತ್ತಿದ್ದಾರೆ. ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಕೊಟ್ಟಂಥ ಒಂದು ಸಲಹೆಯನ್ನು ಮಾತ್ರ ಕಾರ್ಯರೂಪಕ್ಕೆ ತಂದಿದ್ದಾರೆ. ವಿಜಿಲೆನ್ಸ್ ಕಮಿಷನ್ನಿಗೆ ಒಬ್ಬ ಚೀಫ್ ಇಂಜಿನಿಯರನ್ನು ನೇಮಕ ಮಾಡಬೇಕು ಎಂದು ಮಾಡಿದ ಸಲಹೆಯನ್ನು ಕಾರ್ಯರೂಪಕ್ಕೆ ತಂದಿರುವುದನ್ನು ಬಿಟ್ಟರೆ ನಾವು ಏನೇನು ಸಲಹೆಗಳನ್ನು ಈ ಸಭೆಯಲ್ಲಿ ಕೊಟ್ಟಿದ್ದೇವೆಯೋ. ಅವುಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಸರ್ಕಾರ ಇದುವರೆಗೂ ಕೂಡ ಪ್ರಯತ್ನಮಾಡಿಲ್ಲ ಎಂದು ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಈ ಸಭೆಯಲ್ಲಿ ಹಿಂದೆ ಹೇಳಿದುದನ್ನೆಲ್ಲ ಪುನರುಚ್ಚಾರ ಮಾಡುವುದಕ್ಕೆ ನನಗೆ ಮನಸ್ಸಿಲ್ಲ. ಇಲಾಖೆಯನ್ನು ಪುನರ್ರಚನೆ ಮಾಡಿ ಎಂದು ಹಲವಾರು ಸಾರಿ ಹೇಳಿದ್ದೇವೆ. ಬಹುಶಃ ಈ ಮನೆಯ ಸದಸ್ಯನಾಗಿ ೧೩ ವರ್ಷಗಳ ಅನುಭವದಲ್ಲಿ ಹಲವಾರು ಸಾರಿ ಸಲಹೆಗಳನ್ನು ಕೊಟ್ಟಿದ್ದೇನೆ. ಆದರೆ ಈ ಹೊತ್ತಿನವರೆಗೂ ಕಾರ್ಯರೂಪಕ್ಕೆ ಬಂದಿಲ್ಲ. ಅದರ ಜೊತೆಗೆ ಮಾನ್ಯ ಶ್ರೀ ಚನ್ನಬಸಪ್ಪನವರು ಕಳೆದ ಮೂರೇ ವರ್ಷಗಳಲ್ಲಿ ಬೇಡಿಕೆಗಳಿಗೆ ಉತ್ತರ ಕೊಡತಕ್ಕ ಕಾಲದಲ್ಲಿ ಕೊಟ್ಟ ಉತ್ತರಗಳು ಉತ್ತರಗಳಾಗಿ ಉಳಿದಿವೆಯೇ ಹೊರತು ಕಾರ್ಯರೂಪಕ್ಕೆ ಬಂದಿಲ್ಲ ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಲಾಖೆಯನ್ನು ಪುನರ್ರಚನೆ ಮಾಡಬೇಕೆಂಬ ಕಾಲದಲ್ಲಿ ಯಾವ ಯಾವ ಜೋನ್‌ನಲ್ಲಿ ಎಷ್ಟೆಷ್ಟು ವರ್ಕ್‌ಲೋಡ್ ಇದೆ ಎನ್ನುವುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಇನ್‌ವೆಸ್ಟಿಗೇಷನ್, ಡಿಸೈನ್ ಇವುಗಳಿಗೆ ಸಂಬಂಧಪಟ್ಟಂತೆ ಏನೊಂದು ಅಂಗವಿದೆಯೊ ಅದನ್ನು ಹೆಚ್ಚು ಶಕ್ತಿಯುತವಾಗಿ ಮಾಡಬೇಕು ಮತ್ತು ಅದಕ್ಕೆ ದಕ್ಷರಾದ, ತಾಂತ್ರಿಕ ಪರಿಜ್ಞಾನವನ್ನು ಹೆಚ್ಚು ಹೊಂದಿರತಕ್ಕ ಅಧಿಕಾರಿಗಳನ್ನು ನೇಮಕ ಮಾಡಬೇಕು ಮುಂತಾದ ಅನೇಕ ಸಲಹೆಗಳನ್ನು ಕೊಟ್ಟಿದ್ದೇನೆ. ಯಾವುದೇ ಸಲಹೆಯೂ ಕೂಡ ಈಹೊತ್ತಿನವರೆಗೂ ಕಾರ್ಯರೂಪಕ್ಕೆ ಬರಲಿಲ್ಲ. ಇದರ

ಬಗ್ಗೆ ಚರ್ಚೆ ಮಾಡತಕ್ಕದ್ದು ನಿರುಪಯುಕ್ತ, ನಾವು ಹೇಳಿದ್ದೇ ಹೇಳುವುದು. ಸರ್ಕಾರದಲ್ಲಿ ಅದರ ಬಗ್ಗೆ ಯಾವುದೇ ಒಂದು ಕಾರ್ಯಕ್ರಮ ಇದುವರೆಗೂ ಆಗದೆ ಹೋದ ಮೇಲೆ ಸುಮ್ಮನೆ ಈ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಚರ್ಚೆ ಮಾಡದೆ ಹಾಗೆಯೇ ಒಪ್ಪಿಕೊಳ್ಳುವುದು ಒಳ್ಳೆಯದೇನೋ ಎನ್ನುವ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಒಬೊಬ್ಬ ಚೀಫ್ ಇಂಜಿನಿಯರಿಗೆ ಎಷ್ಟೆಷ್ಟು ವರ್ಕ್‌ಲೋಡ್ ಇದೆ ಎನ್ನುವುದನ್ನು ದಯುಮಾಡಿ ತಿಳಿಸಬೇಕು. ನನಗೆ ಗೊತ್ತಿರುವ ಪ್ರಕಾರ ಈ ಹೊತ್ತು ನಮ್ಮಲ್ಲಿ ಹಣವಿಲ್ಲ. ಲೋಕೋಪಯೋಗಿ ಇಲಾಖೆ ನಮ್ಮ ರಾಜ್ಯದಲ್ಲಿ ಇರಬೇಕೇ ಅಥವಾ ಬೇಡವೇ ಎನ್ನುವ ಪ್ರಶ್ನೆ ಮೂಡಿದೆ. ಸ್ವಲ್ಪ ಕಾಲ ಲೋಕೋಪಯೋಗಿ ಇಲಾಖೆಯನ್ನು ರದ್ದು ಮಾಡಿ ತಾಲ್ಲೂಕು ಮಟ್ಟದಲ್ಲಿ ಬಿ.ಡಿ.ಒ. ಅವರಿಗೆ ಸ್ವಲ್ಪ ಹಣವನ್ನು ಕೊಟ್ಟರೆ ಅವರು ನಡೆಸಿಕೊಂಡು ಹೋಗುತ್ತಾರೆ. ಮೇಜರ್ ಇರಿಗೇಷನ್, ಮೈನರ್ ಇರಿಗೇಷನ್ ಬಿಟ್ಟರೆ ಲೋಕೋಪಯೋಗಿ ಇಲಾಖೆಯ ಕೆಲಸ ಈ ಹೊತ್ತು ಸ್ಥಗಿತವಾಗಿದೆ. ಇದು ನಿರ್ವಿವಾದ. ಆದುದರಿಂದ ಕೆಲವು ಕಾಲ ಈ ಇಲಾಖೆಯನ್ನು ಮುಚ್ಚಿ, ಬೇರೆ ಬೇರೆ ಇಲಾಖೆಯ ಕೆಲವು ಅಧಿಕಾರಿಗಳನ್ನು ಮತ್ತು ಬಿ.ಡಿ.ಒ.ಗಳನ್ನು ಇಂಜಿನಿಯರ್ಸ್ ಆಗಿ ಏಕೆ ಮಾಡಬಾರದು ಎನ್ನುವ ಪ್ರಪೋಸಲ್ ಹಿಂದೆ ಇತ್ತು. ಕಟ್ಟಡ ಮತ್ತು ರಸ್ತೆಗಳಿಗೆ ಖರ್ಚು ಮಾಡಲು ಹಣವಿಲ್ಲ, ಹಣವೆಲ್ಲ ಸಿಬ್ಬಂದಿ ವೆಚ್ಚಕ್ಕೆ ಖರ್ಚಾಗುತ್ತಿದೆ. ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲ. ಇದನ್ನೆಲ್ಲಾ ನೋಡಿ ಇಂದು ನಡೆದಿರತಕ್ಕ ಕೆಲಸಗಳ ಆಧಾರದ ಮೇಲಿನಿಂದ ನಾನು ಆ ಅಭಿಪ್ರಾಯಕ್ಕೆ ಬರುತ್ತಿದ್ದೇನೆ. ಆದ್ದರಿಂದ ಲೋಕೋಪಯೋಗಿ ಇಲಾಖೆ ಈ ರಾಜ್ಯದಲ್ಲಿ ಅನಾವಶ್ಯಕ ಎನ್ನುವ ನಿರ್ಣಯಕ್ಕೆ ಬಂದರೆ ಯಾವುದೇ ತಪ್ಪು ತಿಳಿದುಕೊಳ್ಳಬಾರದು.

ಇಲಾಖೆಯನ್ನು ಪುನರ್ರಚನೆ ಮಾಡಬೇಕು ಎನ್ನುವ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದೇನೆ. ಈಗ ೧೮ ಜನ ಚೀಫ್ ಇಂಜಿನಿಯರುಗಳಿದ್ದಾರೆ. ಇವರು ಅಧಿಕಾರಕ್ಕೆ ಬಂದ ಮೇಲೆ ಸುಮಾರು ಆರು ಜನ ಚೀಫ್ ಇಂಜಿನಿಯರುಗಳನ್ನು ಹೆಚ್ಚು ಮಾಡಿದರು. ಹಿಂದೆ ಇದ್ದುದೇ ಬಹಳ ಜಾಸ್ತಿ ಎಂದು ಈ ಸಭೆಯಲ್ಲಿ ಸಾಕಷ್ಟು ಕಟುವಾದ ಟೀಕೆಗಳು ಕೂಡ ಬಂದಿವೆ ಆದರೆ ಇವರು ಅಧಿಕಾರಕ್ಕೆ ಬಂದ ಮೇಲೆ ಇನ್ನೂ ಆರು ಜನರನ್ನು ಜಾಸ್ತಿ ಮಾಡಿದರು. ಬಹುಶಃ ನನಗೆ ಗೊತ್ತಿರುವ ಹಾಗೆ ಒಬ್ಬರನ್ನು ಕಡಿಮೆ ಮಾಡಿದ್ದಾರೆ. ನ್ಯಾಷನಲ್ ಹೈವೇಗೆ ಕೇಂದ್ರದಿಂದ ಹಣವನ್ನು ಕೊಡುವುದಿಲ್ಲವೆಂದು ಗೊತ್ತಾದ ಮೇಲೆ, ಆ ಹುದ್ದೆಯಲ್ಲಿದ್ದವರು ಅಧಿಕಾರದಿಂದ ನಿವೃತ್ತರಾದ ಮೇಲೆ ಅದನ್ನು ಭರ್ತಿಮಾಡದೆ ಬಿಟ್ಟಿದ್ದಾರೆ. ಉಳಿದೆಲ್ಲ ಚೀಫ್ ಇಂಜಿನಿಯರುಗಳೂ ಹಾಗೆಯೇ ಇದ್ದಾರೆ ಈ ಇಲಾಖೆಯನ್ನು ಪುನರ್ರಚನೆ ಮಾಡುವುದಕ್ಕೆ ಮಾನ್ಯ ಶ್ರೀ ಚನ್ನಬಸಪ್ಪನವರು ಕೈಯಲ್ಲಿ ಆಗಲಿಲ್ಲವೆಂದರು it is a sad state of affairs ಇವರಿಗೆ ಈ ಕೆಲಸವನ್ನು ಮಾಡುವುದಕ್ಕೆ ಶಕ್ಯವಾಗದೆ ಹೋದರೆ ಅದು ಬಹಳ ವಿಷಾದಕರವಾದ ವಿಚಾರ, ಯಾವ ಕಾರಣಕ್ಕೆ ಆಗಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ.

ಕಳೆದಸಾರಿ ಮೆಕ್ಯಾನಿಕಲ್ ಚೀಫ್ ಇಂಜಿನಿಯರ್ ಒಬ್ಬರನ್ನು ನೇಮಕ ಮಾಡಬೇಕು ಎಂದು ತಿಳಿಸಿದ್ದೆ. ಈಗ ಇರುವವರ ಪೈಕಿ ಒಬ್ಬರನ್ನು ಮೆಕ್ಯಾನಿಕಲ್ ಚೀಫ್ ಇಂಜಿನಿಯರ್ ಆಗಿ ಮಾಡಬಹುದು. ಪ್ರತಿವರ್ಷ ಸಾರ್ವಜನಿಕ ಲೆಕ್ಕಪತ್ರಸಮಿತಿಯಲ್ಲಿ ಕಟುವಾಗಿ ವಿಮರ್ಶೆ ಮಾಡುತ್ತೇವೆ. ನಮ್ಮ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಎಲ್ಲಾ ಜೋನ್‌ಗಳಲ್ಲಿಯೂ ಮೆಷಿನರಿ ಇದೆ, ಇದರ ಬಗ್ಗೆ ಲೆಕ್ಕಪತ್ರ ಕೂಡ ಇಲ್ಲ/ಲಾರಿಗಳು/ಟ್ರ್ಯಾಕ್ಟರ್‌ಗಳು/ಬುಲ್‌ಡೋಜರ್‌ಗಳು ಎಲ್ಲಕಡೆಯೂ ಇದ್ದು ಒಂದು ಸೆಂಟ್ರಲ್ ಮೆಕ್ಯಾನಿಕಲ್ ಆರ್ಗನೈಸೇಷನ್ ಇದ್ದು ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಅದರ ಕಾರ್ಯವ್ಯಾಪ್ತಿಯನ್ನು ನೋಡಿಕೊಳ್ಳುತ್ತಾರೆ. ಅವರು ನೇರವಾಗಿ ಇಂಜಿನಿಯರ್ ಇನ್ ಚೀಫ್ ಅವರ ಕೈಕೆಳಗೆ ಕೆಲಸ ಮಾಡಬೇಕಾಗುತ್ತದೆ. ಇಂಜಿನಿಯರ್ ಇನ್ ಚೀಫ್ ಅವರಿಗೆ ದೊಡ್ಡ ಹೊರೆ ಇದೆ. ಅವರ ವ್ಯಾಪ್ತಿ ದೊಡ್ಡದು. ಅವರು ಈ ಕೆಲಸಕ್ಕೆ ಹೆಚ್ಚು ಗಮನ ಕೊಡುವುದಕ್ಕಾಗುವುದಿಲ್ಲ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಕೆಲವು ವಿವರಣೆಯನ್ನು ಕೇಳಿದರೆ ಆ ಮಾಹಿತಿಯನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲ. ರಿಜಿಸ್ಟರ್ ಕೂಡ ಮೇನ್‌ಟೇನ್ ಮಾಡಿಲ್ಲ, ಯಾವ ಮೆಷಿನರಿ ಬಂತು, ಏನು ಉತ್ಪತ್ತಿ ಬಂತು, ಹಾಕಿರುವ ವೆಚ ವೆಷ್ಟು, ರಿಟರ್ನ್ ಏನು, ಇವೇನೇನೂ ಇಲ್ಲ. ಮೆಷಿನರಿ ಎಲ್ಲಿಂದ ಎಲ್ಲಿಗೆ ಹೋಯಿತು ಎಂದು ಹೇಳುವುದೇ ಕಷ್ಟವಾಗುತ್ತದೆ. ಹೀಗೆ ಹೇಳತಕ್ಕ, ಕೇಳತಕ್ಕ ವ್ಯವಸ್ಥೆ ಇಲ್ಲ ಎನ್ನುವುದನ್ನು ಮನಗಂಡು ಒಬ್ಬ ಮೆಕ್ಯಾನಿಕಲ್ ಚೀಫ್ ಈ ಕೆಲಸಕ್ಕಾಗಿಯೇ ಇರಬೇಕು ಎಂದು ನಾನು ಹೇಳಿದ್ದೇನೆ ನಾವು ಕೋಟ್ಯಾಂತರ ರೂಪಾಯಿ ಇದರ ಮೇಲೆ ಹಾಕಿದ್ದೇವೆ. ಇದರಲ್ಲಿ ಎಷ್ಟು ಮೂಲಧನವನ್ನು ತೊಡಗಿಸಿದ್ದೇವೆ ಎನ್ನುವ ವಿವರ ಇನ್ನೂ ಸಿಕ್ಕಿಲ್ಲ, ರೂಪಾಯಿ ಲೆಕ್ಕದಲ್ಲಿ ಎಷ್ಟು ಹಣವನ್ನು ಇದರಲ್ಲಿ ತೊಡಗಿಸಿದ್ದೇವೆ ಎಂದು ಹೇಳಲಿಕ್ಕೆ ಕಷ್ಟವಾಗುತ್ತದೆ. ಎಷ್ಟು ಹಣವನ್ನು ತೊಡಗಿಸಲಾಗಿದೆ, ಎಷ್ಟು ರಿಟರ್ನ್ ಬರುತ್ತಿದೆ ಎನ್ನುವ ಮಾಹಿತಿ ನಮ್ಮ ಅಧಿಕಾರಿಗಳ ಹತ್ತಿರ ಇಲ್ಲ ಎನ್ನುವ ವಿಷಯವನ್ನು ತಿಳಿದುಕೊಂಡರೆ ನಾವು ಕೊಟ್ಟಿರತಕ್ಕ ಸಲಹೆಯನ್ನು ಸರ್ಕಾರ ಒಪ್ಪಿಕೊಳ್ಳುವುದರಲ್ಲಿಯಾವ ತೊಂದರೆಯೂ ಇಲ್ಲ. ಇದಕ್ಕಾಗಿ

ಹೆಚ್ಚು ಚೀಫ್ ಇಂಜಿನಿಯರುಗಳನ್ನು ನೇಮಕ ಮಾಡಬೇಕಾಗಿಲ್ಲ. ಇರುವವರಲ್ಲಿ ಒಬ್ಬರನ್ನು ಮೆಕ್ಯಾನಿಕಲ್ ಚೀಫ್ ಇಂಜಿನಿಯರ್ ಮಾಡಿ ಅದರ ಹೊಣೆಯನ್ನು ಪೂರ್ಣವಾಗಿ ಅವರಿಗೆ ವಹಿಸಿ ಯಾವ ಡಿವಿಜನ್‌ನಲ್ಲಿ ಯಾವ ಮೆಷಿನರಿ ಇದೆ, ಎಲ್ಲಿ ಹೆಚ್ಚಾಗಿದೆ, ಎಲ್ಲಿ ಕಡಿಮೆಯಾಗಿದೆ ಎಂದು ಇದರ ಬಗ್ಗೆ ಎಲ್ಲ ಲೆಕ್ಕವನ್ನೂ ಕೇಳಿದ ಕೂಡಲೇ ಹೇಳುವ ಶಕ್ತಿ ಇರಬೇಕು. ಓವರಾಲ್ ಪೊಸಿಷನ್ ನೋಡಿಕೊಂಡು ಇಲ್ಲಿ ಕುಳಿತುಕೊಂಡು ಒಂದು ನಿರ್ಣಯ ತೆಗೆದುಕೊಳ್ಳುವಂತೆ ಇರಬೇಕು. ಲಾರಿಗಳನ್ನು ತೆಗೆದುಕೊಂಡು ಹೋದರೆ ಎಂಟು ಹತ್ತು ದಿವಸ ಉಪಯೋಗಿಸಿ ಕೇವಲ ನಾಲ್ಕು ದಿವಸ ಎಂದು ಲಾಗ್ ಬುಕ್‌ನಲ್ಲಿ ಬರೆದುಕೊಳ್ಳುತ್ತಾರೆ. ಎಲ್ಲವನ್ನೂ ವಿವರವಾಗಿ ಹೇಳಬೇಕಾದ ಅವಶ್ಯಕತೆ ಇಲ್ಲ. ಏನು ತೊಂದರೆ ಇದೆ ಎಂದು ಪದೇ ಪದೇ ಹೇಳಿದ್ದೇವೆ. ಇನ್ನೂ ಪುರಸ್ಕಾರ ಕೊಡುತ್ತಾರೆಯೋ ಇಲ್ಲವೋ ಗೊತ್ತಿಲ್ಲ ಈ ಇಲಾಖೆಯ ಬಗ್ಗೆ ಮತ್ತೊಂದು ಮುಖ್ಯವಾದ ವಿಷಯವನ್ನು ಹೇಳಬೇಕೆಂದರೆ ಇಂದು ಈ ಇಲಾಖೆಯು ಬಹಳ ಒಂದು ದೊಡ್ಡ ರಾಜಕೀಯದ ಗೊಂದಲಕ್ಕೆ ಒಳಗಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. There is a regular was going on between the Engineer in Chief and Additional Secretary or so; ವಿಧಾನಸೌಧದ ಮಟ್ಟದಲ್ಲಿ ಇಂಜಿನಿಯರ್ ಇನ್ ಚೀಫ್ ಎಂದು ಒಬ್ಬರು ಇದ್ದಾರೆ, ಮೇಜರ್ ಇರಿಗೇಷನ್ ಮೈನರ್ ಇರಿಗೇಷನ್ ಮತ್ತು ಪವರ್ ಎಲ್ಲದಕ್ಕೂ ಅವರನ್ನೇ ಮುಖ್ಯಸ್ಥರನ್ನಾಗಿ ಮಾಡುವ ವಿಚಾರ ತೀವ್ರ ಪರ್ಯಾಲೋಚನೆಯಲ್ಲಿದೆ ಎಂದು ಕೇಳಿದ್ದೇನೆ. ಈ ಎಲ್ಲದರ ಎಷ್ಟಾಬ್ಲಿಷ್ ಮೆಂಟಿಗೂ ಇವರನ್ನೇ ಮುಖ್ಯಾಧಿಕಾರಿಗಳನ್ನಾಗಿ ಮಾಡಿ ವಿಧಾನಸೌಧದ ಮಟ್ಟದಲ್ಲೆ ಎಲ್ಲ ಅಧಿಕಾರಿಗಳನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳುವುದಕ್ಕೆ ಹೊರಟರೆ ಮತ್ತು ಅವರು ತಪ್ಪು ಮಾಡಿದವರನ್ನು ಸಸ್ಪೆಂಡ್ ಮಾಡಿದರೆ ಅದು ಸರಿಯಾದ ಕ್ರಮವಾಗುವುದಿಲ್ಲವೆಂದು ಹೇಳುತ್ತೇನೆ. ರೀ ಆರ್ಗನೈಸೇಷನ್ ಯಾವ ರೀತಿ ಇರಬೇಕೆಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. ಈಗ ಒಂದು ಸಬ್ ಡಿವಿಜನ್ ತೆಗೆದುಕೊಂಡರೆ ಅದರ ಒಂದು ವ್ಯಾಪ್ತಿಯಲ್ಲಿ ೩-೪ ತಾಲ್ಲೂಕುಗಳು ಬರುತ್ತಿವೆ ಮತ್ತು ಆ ಒಂದು ಸಬ್ ಡಿವಿಜನ್ ವ್ಯಾಪ್ತಿ ಯಲ್ಲಿ ಲಿಫ್ಟ್ ಇರಿಗೇಷನ್ಸ್, ಮೈನರ್ ಇರಿಗೇಷನ್ಸ್, ಪಿ.ಎಚ್.ಇ. ಎಲ್ಲವೂ ಬರಬೇಕು. ಆಗ ಎಲ್ಲಿಯಾದರೂ ಒಂದು ಪಂಪ್‌ಸೆಟ್ಟು ಕೆಟ್ಟುಹೋದರೆ ಕೂಡಲೇ ಹೋಗಿ ರಿಪೇರಿ ಮಾಡುವುದು ಸಾಧ್ಯವಾಗುತ್ತದೆ. ಈ ರೀತಿ ಮಾಡದೆ ಎಲ್ಲ ಅಧಿಕಾರಗಳನ್ನೂ ವಿಧಾನಸೌಧದ ಮಟ್ಟದಲ್ಲಿ ಇಟ್ಟುಕೊಳ್ಳುತ್ತೇನೆ, ಸಸ್ಪೆಂಡ್ ಮಾಡುತ್ತೇವೆ, ದುಡ್ಡು ಹೊಡೆಯುತ್ತೇವೆ ಎಂದು ಹೇಳುವುದು ಬೇಡ. ಎಲ್ಲ ಇಂಜಿನಿಯರ್‌ಗಳೂ ಸಹ ಬಿ.ಇ. ಪಾಸ್ ಮಾಡಿರುತ್ತಾರೆ. ಆದಕಾರಣ ಸಬ್ ಡಿವಿಜನ್ ಮಟ್ಟದಲ್ಲಿರುವ ಅಧಿಕಾರಿಗಳಿಗೆ ಕೆಲವೊಂದು ಅಧಿಕಾರ ಕೊಡಬೇಕು. ಅದೇರೀತಿ ಡಿಜೈನ್ಸ್ ಅಂಡ್ ಇನ್‌ವೆಸ್ಟಿಗೇಷನ್‌ಗೆ ಹೆಚ್ಚು ತಾಂತ್ರಿಕ ಪರಿಣತೆ ಇರುವವರನ್ನು ಸ್ಪೆಷಲ್ ಪೇ ಕೊಟ್ಟು ನೇಮಕ ಮಾಡಬೇಕು. ಇಲ್ಲದಿದ್ದರೆ ಹೆಚ್ಚು ತಾಂತ್ರಿಕ ಪರಿಣತೆ ಇರುವವರು ಆ ಜಾಗಕ್ಕೆ ಹೋಗುವುದಿಲ್ಲ. ಇಂದು ಏನಾಗಿದೆಯೆಂದರೆ ಸಾಮಾನ್ಯವಾಗಿ ಯಾರಿಗೆ ರಾಜಕೀಯ ಪ್ರಭಾವ ಇರುವುದಿಲ್ಲವೋ ಮತ್ತು ಸರ್ಕಾರಕ್ಕೆ ಬೇಡದವರು ಯಾರು ಇರುತ್ತಾರೋ ಅಂತಹವರನ್ನು ಅಲ್ಲಿಗೆ ಹಾಕುತ್ತೀರಿ. ಮುಖ್ಯವಾಗಿ ಸರ್ಕಾರಕ್ಕೆ ಹೊಂದಾಣಿಕೆ ಆಗದವರನ್ನು ಅಲ್ಲಿಗೆ ಹಾಕುತ್ತೀರಿ. ಅದು ಸರಿಯಲ್ಲ. ಹೆಚ್ಚಿನ ತಾಂತ್ರಿಕ ಪರಿಣತೆಯಿರುವವರನ್ನು ಆ ಜಾಗಕ್ಕೆ ನೇಮಕ ಮಾಡಬೇಕೆಂದು ನಾನು ಪದೇ ಪದೇ ಹೇಳುತ್ತಿದ್ದೇನೆ ಆದರೆ ಆ ಕೆಲಸ ಮಾಡಿಲ್ಲ. ಒಬ್ಬರು ಇಂಜಿನಿಯರನ್ನು ಇಂದು ಜಿಲ್ಲಾಧಿಕಾರಿಯನ್ನಾಗಿ ನೇಮಕ ಮಾಡಿದ್ದೀರಿ, ಏತಕ್ಕೆಂದು ಕೇಳಿದರೆ ಅವರಿಗೆ ಪ್ರೋತ್ಸಾಹ ಕೊಡುವುದಕ್ಕೆ ಮಾಡಿದ್ದೇವೆಂದು ಹೇಳುತ್ತೀರಿ. ಆದರೆ ಅದರ ಒಳರಹಸ್ಯವಾದರೂ ಏನು? ಪವರ್ ಕಾರ್ಪೊರೇಷನ್‌ನಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಅಡ್ಡಿ ಆತಂಕಗಳು ಬರಬಾರದೆಂದು ಅಲ್ಲಿದ್ದವರನ್ನು ತೆಗೆದು ಜಿಲ್ಲಾಧಿಕಾರಿಯನ್ನಾಗಿ ನೇಮಕ ಮಾಡುತ್ತೀರಿ. ಅದೇ ರೀತಿ ಇಂಡಸ್ಟ್ರಿ ಡಿಪಾರ್ಟ್‌ಮೆಂಟಿನಲ್ಲಿ ಒಬ್ಬರು ಐ.ಪಿ.ಎಸ್. ಅಧಿಕಾರಿ ಇದ್ದರೆ ಅದರ ಅಧೀನದಲ್ಲಿರುವ ಸ್ಮಾಲ್-ಸ್ಕೇಲ್ ಇಂಡಸ್ಟ್ರಿ ಡಿಪಾರ್ಟ್‌ಮೆಂಟಿನ ಕೆಲಸಮಾಡಲು ಸೂಪರ್‌ಸ್ಕೇಲ್ ಐ.ಎ.ಎಸ್. ಆಫೀಸರನ್ನು ನೇಮಕ ಮಾಡಿದ್ದೀರಿ. ತಮ್ಮ ಒಂದು ಅಧಿಕಾರದಲ್ಲಿ ಯಾರನ್ನು ಎಲ್ಲಿಬೇಕಾದರೂ ತೆಗೆದುಕೊಂಡು ಹೋಗಿ ಹಾಕಬಹುದು, ಅದಕ್ಕೆ ಒಂದು ನಾರಮ್ಸ್ ಇಲ್ಲ. ಹೆಚ್ಚಿನ ಅನುಭವ ಮತ್ತು ಪರಿಣತೆಯಿರುವ ಇಂಜಿನಿಯರುಗಳನ್ನು ಎಲ್ಲಿಗೋ ತೆಗೆದುಕೊಂಡು ಹೋಗಿ ಹಾಕುತ್ತೀರಿ, ಇದೇ ರೀತಿ ಕೆಲಸಮಾಡಿಕೊಂಡು ಹೋಗುವುದಾದರೆ ನಿಮಗೆ ಖಂಡಿತವಾಗಿಯೂ ಒಳ್ಳೆಯ ಹೆಸರು ಬರುವುದಿಲ್ಲ. ಅದು ಬರುವುದಕ್ಕೆ ಸಾಧ್ಯವೂ ಇಲ್ಲ. ಈ ಒಂದು ಪದ್ಧತಿ ಯೋಗ್ಯವಲ್ಲ ಎಂದು ಪ್ರಥಮದಲ್ಲಿಯೇ ತಿಳಿಸುತ್ತೇನೆ. ಕಳೆದ ೩ ವರ್ಷಗಳಲ್ಲಿ ಇವರು ಏನೇನು ಕೆಲಸ ಮಾಡಿದ್ದಾರೆಂಬುದನ್ನು ನೋಡಬೇಕಾಗಿದೆ. ೧೯೭೨ ರಲ್ಲಿ ಇದೇ ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಏನು ಹೇಳಿದ್ದಾರೆಂದರೆ.—

"ಆಡಳಿತ ವರ್ಗ ಕೂಡ ಪ್ರಾಮಾಣಿಕತೆಯಿಂದ, ನಿಷ್ಠೆಯಿಂದ ದಕ್ಷತೆಯಿಂದ ಮತ್ತು ದೇಶಪ್ರೇಮದಿಂದ ಕೆಲಸಮಾಡುವಂತೆ ವ್ಯವಸ್ಥೆ ಮಾಡಲೇ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಮುಂದೆ ೧೯೭೩ ರಲ್ಲಿ ಏನು ಹೇಳಿದ್ದಾರೆಂದರೆ, ನಿಷ್ಠೆಯಿಂದ ಕೆಲಸಮಾಡುವ ಪ್ರಾಮಾಣಿಕರನ್ನು ರಕ್ಷಿಸ

ಬೇಕಾಗುತ್ತದೆ. ಅಪ್ರಮಾಣಿಕರನ್ನು ಶಿಕ್ಷಿಸಬೇಕಾಗುತ್ತದೆ ಎಂಬ ವಿಚಾರದಲ್ಲಿ ಒಂದು ಪುಟದಷ್ಟು ವಿವರವಾಗಿ ಹೇಳಿದ್ದಾರೆ. ಅದು ೪೭ನೇ ಪೇಜ್‌ನಲ್ಲಿದೆ. ಪ್ರಾಮಾಣಿಕರನ್ನು ರಕ್ಷಣೆ ಮಾಡುವುದು, ಅಪ್ರಾಮಾಣಿಕರನ್ನು ಶಿಕ್ಷೆಗೆ ಗುರಿಮಾಡುವುದು ಎಂದು ಏನು ಹೇಳಿದ್ದಾರೋ ಅದು ಇಂದು ತಿರುಗ ಮುರುಗವಾಗಿದೆ. ಅಂದರೆ ಅಪ್ರಾಮಾಣಿಕರಿಗೆ ಯಾವರೀತಿ ರಕ್ಷಣೆ ಕೊಡುವುದು, ಪ್ರಾಮಾಣಿಕರಿಗೆ ಯಾವ ರೀತಿ ಶಿಕ್ಷೆ ಮಾಡಬೇಕು ಎಂಬುದೇ ಇವೊತ್ತಿನ ಮೂಲ ಮಂತ್ರವಾಗಿದೆ. ಇದು ಬಿಟ್ಟು ಬೇರೆ ಏನೂ ಇಲ್ಲ. ಈ ಮಾತನ್ನು ನಾನು ಹಾರಿಕೆಯಿಂದ ಹೇಳಬೇಕಾಗಿಲ್ಲ, ಅದಕ್ಕೆ ನಿದರ್ಶನ ಕೊಟ್ಟು ಹೇಳುತ್ತೇನೆ. ಯಾವನು ರಾಜಕೀಯ ಶಕ್ತಿಯನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲದೇ ಇರುತ್ತಾನೋ ಅವನಿಗೆ ಶಿಕ್ಷೆ ಕೊಡುವುದು ಬಹಳ ಸುಲಭ. ಮೊಟ್ಟಮೊದಲನೆಯದಾಗಿ ನಿಮಗೆ ಕೇಳುತ್ತೇನೆ, ಏನೆಂದರೆ ಚಿಕ್ಕಹೊಳೆ ಪ್ರಾಜೆಕ್ಟ್ ಒಡೆದ ವಿಚಾರದಲ್ಲಿ ಯಾವ ಆಫೀಸರ್ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಉತ್ತರ ಕೊಡಬೇಕು. ಇದರಲ್ಲಿ ಯಾವ ಯಾವ ಇಂಜಿನಿಯರ್ಸ್ ಇನ್‌ವಾಲ್ವ್ ಆಗಿದ್ದಾರೆಂಬುದನ್ನು ತಿಳಿಸಬೇಕು.

10-30 A. M.

ಒಂದೂವರೆ ಕೋಟಿ ರೂಪಾಯಿಗಿಂತ ಹೆಚ್ಚು ಲುಕ್ಸಾನಾಗಿದೆ. ಇದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಮಹಾರಾಷ್ಟ್ರದ ಒಬ್ಬ ಯೋಗ್ಯ ಇಂಜಿನಿಯರನ್ನು ನೇಮಕ ಮಾಡಿದ್ದಾರೆ. ಇದರ ಬಗ್ಗೆ ಏನು ಕ್ರಮ ಸರ್ಕಾರದವರು ತೆಗೆದುಕೊಂಡಿದ್ದಾರೆ ಎಂಬುದನ್ನು ದಯಮಾಡಿ ತಾವು ಈ ಸಭೆಗೆ ತಿಳಿಸಬೇಕು. ಷೋಕಾಸ್ ನೋಟೀಸ್ ಕೊಟ್ಟಿದ್ದೇವೆ. ಎಕ್ಸ್‌ಪ್ಲನೇಷನ್ ಕೇಳಿದ್ದೇವೆ, ಅದೆಲ್ಲಾ ಮಾತು ಬೇಕಾಗಿಲ್ಲ. ಈ ಮಾತು ಹೇಳುವುದಾದರೆ ಅಧಿಕಾರಿಗಳಿಂದ ವಿವರಣೆ ಕೇಳಿದ್ದೇವೆ ಎಂದು ಹೇಳುವುದಾದರೆ ಪ್ರತಿಯೊಬ್ಬ ಸಸ್ಪೆಂಡ್ ಆಗಿರತಕ್ಕ ಇಂಜಿನಿಯರನ್ನು ರೀ ಇನ್‌ಸ್ಟೇಟ್ ಮಾಡಬೇಕು ನಾನು ಕೇಳುತ್ತೇನೆ. ಅವರು ಏನು ತಪ್ಪು ಮಾಡಿದ್ದಾರೆ ಎಂದು. ಒಂದೂವರೆ ಕೋಟಿ ರೂಪಾಯಿಗಿಂತ ಹೆಚ್ಚು ಲುಕ್ಸಾನು ಆಗಿರತಕ್ಕ ವಿಷಯದಲ್ಲಿ ಯಾವ ಇಂಜಿನಿಯರ್ ಇದ್ದಾರೆ, ಅವರನ್ನು ಸರಕಾರದವರು ಸಸ್ಪೆಂಡ್ ಮಾಡದೆ ಒಬ್ಬ ತಾಂತ್ರಿಕ ಪರಿಜ್ಞಾನ ಉಳ್ಳ ಬೇರೆ ರಾಜ್ಯದ ಅಧಿಕಾರಿಯನ್ನು ನೇಮಕ ಮಾಡಿ ಅವರು ವರದಿ ಕೊಟ್ಟಮೇಲೆ ಅದರ ಆಧಾರದ ಮೇಲೆ ಈ ಲುಕ್ಸಾನಿಗೆ ಯಾರು ಜವಾಬ್ದಾರಿಯಾಗಿರುತ್ತಾರೆ, ಅವರನ್ನು ಸಸ್‌ಪೆಂಡ್ ಮಾಡುವುದಕ್ಕೆ ಶಕ್ತಿ ಇಲ್ಲದೆ ಈ ಸಣ್ಣ ಜೂನಿಯರ್ ಇಂಜಿನಿಯರ್, ಎಕ್ಸಿಕ್ಯುಟೀವ್ ಇಂಜಿನಿಯರುಗಳನ್ನು ಸಸ್ಪೆಂಡ್ ಮಾಡಿದ್ದು ಏಕೆ? ನಾನು ಹೇಳುತ್ತೇನೆ, ನಿಜವಾಗಿಯೂ ಈ ಒಂದು ಕರ್ತವ್ಯದಲ್ಲಿ ತಾವು ಪ್ರಾಮಾಣಿಕವಾಗಿ ನಡೆದುಕೊಂಡಿದ್ದೀರಾ? ತಮಗೆ ಬೇಕಾದವರನ್ನು ಯಾವುದೇ ತಪ್ಪು ಮಾಡಿರಲಿ, ಏನೇ ತಪ್ಪು ಮಾಡಿರಲಿ ಅವರನ್ನು ಮುಟ್ಟುವಹಾಗಿಲ್ಲ. ಆದರೆ ಯಾರು ಬೇಡವಾಗಿರುತ್ತಾರೆ, ತಮ್ಮ ಒತ್ತಡಕ್ಕೆ ತಮ್ಮ ಆಶೆ ಆಕಾಂಕ್ಷೆಗಳಿಗೆ ಯಾರು ಈಡಾಗುವುದಿಲ್ಲವೋ ಅಂತಹ ಅಧಿಕಾರಿಗಳನ್ನು ಮುಟ್ಟುತ್ತೀರಿ. ತಾವು ಇದನ್ನು ಬಹುಶಃ ಒಪ್ಪಿಕೊಳ್ಳುತ್ತೀರೆಂದು ತಿಳಿದುಕೊಂಡಿದ್ದೇನೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಇಂತಹ ಒಂದು ವಾತಾವರಣ ನಿರ್ಮಾಣವಾಗುವುದಕ್ಕೆ ಕಾರಣ ಯಾರು? ತಾವು ಅಧಿಕಾರಕ್ಕೆ ಬಂದಮೇಲೆ ೧೫ ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಿ, ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರ್‌ನ್ನು ಸಸ್ಪೆಂಡ್ ಮಾಡಿದ್ದೀರಿ ಆಮೇಲೆ ಏನಾಯಿತು? ಅದನ್ನೆಲ್ಲಾ ಈಗ ಇಲ್ಲಿ ಹೇಳುವುದಿಲ್ಲ. ನನ್ನ ಹತ್ತು ಚಾರ್ಜ್‌ಗಳ ಪೈಕಿ ಇದೂ ಒಂದು ಚಾರ್ಜ್. ಇದರ ಬಗ್ಗೆ ಚರ್ಚೆ ಬಂದಾಗ ಮಾತನಾಡುತ್ತೇನೆ. ಚಿಕ್ಕಹೊಳೆ ಪ್ರಾಜೆಕ್ಟ್‌ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಏತಕ್ಕೆ ಸಸ್ಪೆಂಡ್ ಮಾಡಲಿಲ್ಲ? ಬಳ್ಳಾರಿ ಹತ್ತಿರ ಮಾನ್ಯ ಶ್ರೀ ಘೋರ್ಪಡೆಯವರ ಕ್ಷೇತ್ರದ ನಾರಿಹಳ್ಳ ಪ್ರಾಜೆಕ್ಟ್ ಒಡೆದು ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಅದೂ ಇನ್ನೂ ಕನ್‌ಸ್ಟ್ರಕ್ಷನ್ ಆಗುತ್ತಾ ಇರುವ ಸಂದರ್ಭದಲ್ಲಿ ಇದರ ಬಗ್ಗೆ ಏತಕ್ಕೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿಲ್ಲ.? ತಾವು ಎಷ್ಟುದೂರ ಹೋಗಿದ್ದೀರಿ ಎಂದರೆ ತಮಗೆ ಬೇಕಾದ ಅಧಿಕಾರಿಗಳನ್ನು ರಕ್ಷಿಸುವುದಕ್ಕೆ ನೀತಿ–ನಿಯಮಗಳು ಯಾವುದೂ ಇಲ್ಲ. ತಮಗೆ ಬೇಕಾದವರಿಗೆ ಏನು ಬೇಕಾದರೂ ಸಹಾಯ ಮಾಡುತ್ತೀರಿ. ಯಾರು ತಮಗೆ ಬೇಕಾಗಿಲ್ಲ ಅವನನ್ನು ಸಸ್ಪೆಂಡ್ ಮಾಡುತ್ತೀರಿ. ಈ ರಾಜ್ಯದಲ್ಲಿ ಏನಾದರೂ ಲೋಕೋಪಯೋಗಿ ಇಲಾಖೆ ನಿಮ್ಮ ಅಧಿಕಾರದಲ್ಲಿ ಜನ ಮೆಚ್ಚುಗೆಯನ್ನು ಪಡೆಯತಕ್ಕ ರೀತಿಯಲ್ಲಿ ನಡೆಯುತ್ತಾ ಇದೆಯೋ? ತಾವು ದಯವಿಟ್ಟು ಇದನ್ನು ತಿಳಿಸಬೇಕು.

ಹಾಸನ ವಿಭಾಗದ ವಿಚಾರವಾಗಿ ಕಳೆದ ಸಾರಿಯೂ ನಾನು ಪ್ರಸ್ತಾಪ ಮಾಡಿದ್ದೆ. ಈ ಸಭೆಯಲ್ಲಿನ ಹಲವಾರು ಮಿತ್ರರೂ ಕೂಡ ಆಸಕ್ತಿಯನ್ನು ಇದರ ಬಗ್ಗೆ ವಹಿಸಿದ್ದರು. ನಾನು ಅಂದು ತಮ್ಮನ್ನು ಯಾವ ಅಧಿಕಾರಿಯನ್ನೂ ಸಸ್ಪೆಂಡ್‌ಮಾಡಿ ಎಂದು ಹೇಳಲಿಲ್ಲ. ಬೇಕಾದರೆ ನನ್ನ ಭಾಷಣವನ್ನು ನೋಡಿರಿ. ಆ ಪ್ರಕರಣದ ಹಿನ್ನೆಲೆಯನ್ನು ಜನತೆ ತಿಳಿದುಕೊಳ್ಳಬೇಕು ಆದ್ದರಿಂದ ವಿಚಾರಣೆ ಮಾಡಬೇಕೆಂದು ಹೇಳಿದೆ

ತಾವು ಸಸ್ಪೆಂಡ್ ಮಾಡಿದಿರಿ. ಇಂದು ನಾನು ಅವರ ಪರವಾಗಿ ವಕಾಲತ್ತು ತೆಗೆದುಕೊಂಡುಬಂದಿಲ್ಲ. ತಾವು ಏನು ಸಸ್ಪೆಂಡ್ ಮಾಡಿದಿರಿ ಆ ಒಂದು ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಇದ್ದ ಹಿರಿಯ ಅಧಿಕಾರಿಯನ್ನು ತಾವು ಮುಟ್ಟಲಿಕ್ಕೆ ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ಏನು? ೫೦೦-೧೦೦೦ ರೂಪಾಯಿಗಳು ಲೆಕ್ಕದಲ್ಲಿ ವ್ಯತ್ಯಾಸವಾಗಿದೆ ಎಂಬ ಕಾರಣಕ್ಕಾಗಿ ಜೂನಿಯರ್ ಇಂಜಿನಿಯರುಗಳನ್ನು ಸಸ್ಪೆಂಡ್ ಮಾಡಿದ್ದೀರಿ ಆದರೆ ಈ ದುರಂತ ವ್ಯವಹಾರಕ್ಕೆ ಸಂಬಂಧಪಟ್ಟ ಹಿರಿಯ ಅಧಿಕಾರಿಯನ್ನು ಮುಟ್ಟಿಲ್ಲ. ಇದರ ಕಾರಣವನ್ನು ದಯವಿಟ್ಟು ಈ ಸಭೆಗೆ ತಿಳಿಸುತ್ತೀರಾ? ಕಾರಣ ಏನು ಎಂದು ನಾನು ಆಮೇಲೆ ಹೇಳುತ್ತೇನೆ. ಇದರ ಬಗ್ಗೆ ತಾವು ಪ್ರಾಮಾಣಿಕವಾಗಿ ಉತ್ತರ ಕೊಡುವುದಾದರೆ ಮುಂದಕ್ಕೆ ನಾನು ಟೀಕೆ ಮಾಡುವುದಿಲ್ಲ. ನನ್ನ ತೃಪ್ತಿಪಟ್ಟುಕೊಳ್ಳುವಷ್ಟು ಕೊಡದಿದ್ದರೂ ಬೇಡ ದೇಶದ ಜನತೆ ತೃಪ್ತಿಪಟ್ಟುಕೊಳ್ಳುವಷ್ಟು ಕೊಡಿ. ಮೂರು ದಿವಸದಲ್ಲಿ ಸುಮಾರು ೨೦-೨೮ ಲಕ್ಷ ರೂಪಾಯಿ ಪೇಮೆಂಟ್ ಆಗಿದೆ ಬಿಲ್ ಇಲ್ಲ ಕಾಗದ ಪತ್ರಗಳಿಲ್ಲ ಎಂದು ಚನ್ನಬಸಪ್ಪನವರು ಈ ಸಭೆಯಲ್ಲೇ ಹೇಳಿದ್ದಾರೆ. ಅದನ್ನು ನಾನು ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಹೀಗೆ ೪೨ ಜನ ಚಿಕ್ಕ ಚಿಕ್ಕ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದಂತಹವರು ಆ ಹಿರಿಯ ಅಧಿಕಾರಿಯನ್ನು ಏತಕ್ಕೆ ಸಸ್ಪೆಂಡ್ ಮಾಡಲಿಲ್ಲ? ಮಾಡಿದ್ದರೆ ಎಲ್ಲರಿಗೂ ಒಂದೇ ಸಮ ಮಾಡಬೇಕಾಗಿತ್ತು. I would l ke to charge the vigilance Commissioner why that Executive Engineer should not have been suspended. I question the bonafides of the vigilance Commissioner : I question the propriety of the Vigilance Commissioner. If he has got any self respect he ought not to have recommended in such a fashion. Is he fit to continue in that office? ಮುಖ ನೋಡಿ ಮಣೆ ಹಾಕುವುದಕ್ಕೆ ರಾಜ್ಯದ ವಿಜಿಲೆನ್ಸ್ ಕಮಿಷನರವರು ಬರೆಯುತ್ತಾರೆ. ೫೦೦-೧,೦೦೦ ಲೆಕ್ಕದಲ್ಲಿ ವ್ಯತ್ಯಾಸ ಬಂದಿತೆಂದು ಕೆಲವರು ಜೂನಿಯರ್ ಇಂಜಿನಿಯರುಗಳನ್ನು ತಾವು ಏನು ಸಸ್ಪೆಂಡ್ ಮಾಡಿದ್ದೀರಿ ಅವರಲ್ಲಿ ಒಬ್ಬ ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಹೋಗಿದ್ದಾನೆ. ಇದರ ಬಗ್ಗೆ ಜವಾಬ್ದಾರರು ಯಾರು? ನೋಡಿದರೆ ಬಹಳ ದೊಡ್ಡ ದೊಡ್ಡಸ್ತಿಕೆ ಮಾತನಾಡತಕ್ಕ ಜನ. ವಿಜಿಲೆನ್ಸ್ ಕಮಿಷನ್ನಿನವರು ಏನು ಶಿಫಾರಸು ಮಾಡಿದ್ದಾರೆ ಈ ಸಭೆಯಲ್ಲಿ ಇಡಬೇಕು. ಈ ಸಭೆಯ ಮುಂದಿಡುವುದಕ್ಕೆ ಅಡ್ಡಿ ಏನೂ ಇಲ್ಲ ಅದೇನು ಕಾನ್‌ಫಿಡೆನ್ಸಿಯಲ್ ವಿಷಯವೇನಲ್ಲ. ಇನ್ನು ಕಬಿನಿಯೋಗೆ ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದಿರಿ, ನಾಚಿಕೆಪಟ್ಟುಕೊಳ್ಳಬೇಕು ಯಾವ ಪಕ್ಷವೇ ಆಗಲೀ ಯಾವುದೇ ಆಗಲೀ ರಾಜಕೀಯದಲ್ಲಿ ತಲೆ ಎತ್ತಬಾರದು. ಒಂದು ಪ್ರಕರಣದಲ್ಲಿ ಸಂಬಂಧಪಟ್ಟ ಅಸಿಸ್ಟೆಂಟ್ ಇಂಜಿನಿಯರ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಜೂನಿಯರ್ ಇಂಜಿನಿಯರುಗಳನ್ನು ಸಸ್ಪೆಂಡ್ ಮಾಡಿದರು. ಆದರೆ ಆರ್ಡರ್ ಜಾರಿಗೆ ಕೊಡುವಾಗ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಮುಖ್ಯ ಮಂತ್ರಿಗಳು ಎಲ್ಲೋ ಕುಳಿತುಕೊಂಡು ಟೆಲಿಗ್ರಾಂ ಮಾಡಿದರು ಏನೆಂದು not to give effect to the suspension order ಎಂದು.

ಇನ್ನು Bettanna Gowdas case. Please bring that file and see. I do not know whether he is honest or dis honest. Why the Government has not implemented that order of suspension? You have suspended the Assistant Engineer. Executive Engineer and Junior Engineer, as per the order. But why the order was given effect to only in the case of Assistent Engineer and Junior Engineer? why it was not given effect to in the case of theExecutive Engineer? ನಾನು ಕೇಳುತ್ತೇನೆ ಇದನ್ನು ಹಣ ಹೊಡೆಯುಲಿಕ್ಕೆ ಮಾಡಿದ್ದಾರೆಯೋ ಅಥವಾ ರಾಜಕೀಯ ಒತ್ತಡಕ್ಕೆ ಮಣಿದು ಮಾಡಿದ್ದಾರೆಯೋ ಎಂದು? ತಾವು ದಯವಿಟ್ಟು ಇದನ್ನು ಸಭೆಗೆ ತಿಳಿಸಬೇಕು.

Is there any sanctity for your own orders? why the suspension order was not implemented or given effect to ? Before the suspension order was issued, the Government has not thought over the mater In other words Government has not properly exercised its discretion. ಇಷ್ಟೊತ್ತು ಮಾನ ಮರ್ಯಾದೆ ಈ ಸರ್ಕಾರಕ್ಕೆ ಇದ್ದರೆ.....

SRI D. B. KALMANKAR.—If you repeat the same words, or repeat the same sentence, it loses its value.

SRI H. D. DEVEGOWDA. Sri Digamber rao will agree to sit on this side. He is there since he is made the whip of the party.

ಶ್ರೀ ಬಿ ಬಸವಲಿಂಗಪ್ಪ.—ಈ ಭಾಷೆ ಸರಿಯೇ?

ಶ್ರೀ ಹೆಚ್ ಡಿ ದೇವೇಗೌಡ:—ಮಾನ್ಯ ಬಸವಲಿಂಗಪ್ಪನವರು ನನ್ನ ಭಾಷೆ ಕಟುವಾಗಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕಿಂತ ಕಡಿಮೆ ಭಾಷೆ ಉಪಯೋಗಿಸುವುದಕ್ಕೆ ಕಷ್ಟವಾಗುತ್ತದೆ, ಅದನ್ನು ಪುಟ್ಟಸ್ವಾಮಿಯವರು ಇದ್ದರೆ ಅವರಿಗೆ ಹೇಳುತ್ತೇನೆ. ಆದುದರಿಂದ ಸ್ವಾಮಿ ಈ ರೀತಿ ಆಗಬಾರದು ಏತಕ್ಕೆ ಎಂದು ಹೇಳಿದರೆ ಪ್ರಾಮಾಣಿಕವಾದ ಅಧಿಕಾರಿಗಳನ್ನು ರಕ್ಷಣೆ ಮಾಡಬೇಕು ಒಪ್ಪಿಕೊಳ್ಳುತ್ತೇನೆ ಆದರೆ ಸರ್ಕಾರ ಒಂದು ನಿರ್ಣಯ ತೆಗೆದುಕೊಂಡಾಗ ಕಾನೂನು ಚೌಕಟ್ಟಿನಲ್ಲಿ ಅದು ಎಲ್ಲರಿಗೂ ಒಂದೇ ಆಗಬೇಕು ಚಂದ್ರಶೇಖರ ಅವರನ್ನು ಸಸ್ಪೆಂಡ್ ಮಾಡಿದಿರಿ ಮಂತ್ರಿಗಳ ಮನೆಯಿಂದ ಸಸ್ಪೆನ್ಷನ್ ಫೈಲು ಇಲ್ಲಿಗೆ ಬಂತು. ಅದರ ಹಿಂದುಗಡೆ ಮತ್ತೆ It had not been given effect to, ಫೈಲು ಇಲ್ಲಿಗೆ ಬಂದೇ ಇಲ್ಲ. ಮತ್ತೆ ಒಂದು ಚೀಟಿ. ದೇವೇಗೌಡರು ನಿರಾಧಾರ ಅಪಾದನೆ ಮಾಡುತ್ತಾರೆ ಮಗುಂ ಅಪಾದನೆ ತಗುಂ ಉತ್ತರ ಎಂದು ಪುಟ್ಟಸ್ವಾಮಿಯವರು ಇಲ್ಲಿ ಹೇಳುತ್ತಿರುತ್ತಾರೆ. ಈಗ ಅದರ ಬದಲು ಮಗುಂ ಅಪಾದನೆ ರಖುಮ್ ಉತ್ತರ ಎಂದು ಹೇಳುತ್ತೇನೆ. ಇವೊತ್ತು, ಸ್ವಾಮಿ ಈ ಒಂದು ಸಂದರ್ಭದಲ್ಲಿ ಕಳಕಳಿಯಿಂದ ಕೇಳುತ್ತೇನೆ ನಿಮಗೆ ಹಿರಿಯ ಅಧಿಕಾರಿಗಳನ್ನು ಮುಟ್ಟಲಿಕ್ಕೆ ಶಕ್ತಿ ಇಲ್ಲದಿದ್ದರೆ ಈಗ ಸಸ್ಪೆಂಡ್ ಮಾಡಿರತಕ್ಕ ಎಲ್ಲಾ ಅಧಿಕಾರಿಗಳನ್ನು ರೀ ಇನ್‌ಸ್ಟೇಟ್ ಮಾಡಿ ಪನಿಷಮೆಂಟ್ ಕೊಡುವಾಗ ನಿಮ್ಮ ಎನ್‌ಕ್ವಯರಿ ಮಾಡಿಕೊಳ್ಳಿ ಆ ಪಾಪದ ಹೊರೆ ನೀವು ಹೊತ್ತುಕೊಂಡು ಹೋಗಿ ನಾನು ಅದಕ್ಕೆ ಬರುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ. ಸಸ್ಪೆನ್‌ಷನ್ ಮಾಡುವುದಕ್ಕೆ ಒಂದು ನೀತಿ ಇಟ್ಟುಕೊಳ್ಳಿ. ದಯಮಾಡಿ ಸಸ್ಪೆಂಡ್ ಮಾಡಿರತಕ್ಕ ೭೨ ಅಧಿಕಾರಿಗಳನ್ನು ರೀ ಇನ್‌ಸ್ಟೇಟ್ ಮಾಡಿ ನೀವು ಗೌರವ ತಂದುಕೊಳ್ಳಿ. ಅದು ಇಲ್ಲದಿದ್ದರೆ ಚಿಕ್ಕ ಹೊಳೆಒಡೆಯಿತು ಅದಕ್ಕೆ ಸಂಬಂದಪಟ್ಟ ಇಂಜಿನಿಯರ್ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರನ್ನು ಹಿಡಿಗು ಸಸ್ಪೆಂಡ್ ಮಾಡಿ We have dealt with the mater severely ಎಂದು ಹೇಳಿ ಅದನ್ನು ಹೇಳುವುದಕ್ಕೆ ಯೋಗ್ಯತೆ ಇಲ್ಲದೇ ಇದ್ದರೆ ಹೇಳಿ ಬಡವರು ೫೦೦ರೂಪಾಯಿ ೧೦೦೦ರೂಪಾಯಿ ಖರ್ಚು ಮಾಡಿಕೊಂಡು ಸ್ವಾಮಿ ಏನಾದರೂ ಮಾಡಿ ಎಂದು ಹೇಳಿಕೊಂಡು ಸುತ್ತುತ್ತಾರೆ. ಅವರು ಸುಮ್ಮನೆ ಏತಕ್ಕೆ ಈ ರೀತಿ ಕಂಬ ಸುತ್ತಬೇಕು. ಇದರ ಬಗ್ಗೆ ಇಷ್ಟುಮಾತ್ರ ಈ ಸಂದರ್ಭದಲ್ಲಿ ತಿಳಿಸುತ್ತೇನೆ. ದಯಮಾಡಿ ಚನ್ನಬಸಪ್ಪನವರು ಉತ್ತರ ಕೊಡುವಾಗ ತಿಳಿಸಬೇಕು. ನಿಮಗೆ ಹೇಳಿದಂಥ ಎಲ್ಲಾ ಪದಗಳು ಪ್ರಾಯೋಗಿಕವಾಗುತ್ತದೆ ಎಂದು ಇಟ್ಟುಕೊಳ್ಳಬೇಡಿ ಇವೊತ್ತು ಎಸ್ಟಾಬ್ಲಿಷ್‌ಮೆಂಟ್ ನಿಮಗೆ ಸಂಬಂಧಪಟ್ಟಿದ್ದರೆ ಇದರಲ್ಲಿ ಬೇರೆ ಯಾರು ತಲೆ ಹಾಕಬಾರದು. including chief miniester. ಇವೊತ್ತು ಮುಖ್ಯಮಂತ್ರಿಯಾಗಿರತಕ್ಕವರ ಕೂಡ ಅವರು ಮೇಲ್ವಿಚಾರಕರಾಗಿರ ಬೇಕು. ಪ್ರತಿಯೊಂದು ಹಂತದಲ್ಲೂ ವ್ಯವಹಾರದಲ್ಲೂಅವರು ಕೈ ಹಾಕಿದರೆ ಇಡೀ ರಾಜ್ಯ ಸಂಪುಟಕ್ಕೆ ಕೆಟ್ಟ ಹೆಸರು ಬರುತ್ತದೆ ಯಾವ ಯಾವ ಹಂತದಲ್ಲಿ ಏನು ಏನು ಆಗಿದೆ ಎನ್ನುವುದು ನನಗೆ ಗೊತ್ತಿದೆ. ಈ ಒಂದು ವ್ಯವಹಾರದಲ್ಲಿ ಆತ್ಮಸಂತೋಷದಿಂದ ಕೆಲಸ ಮಾಡುವುದಕ್ಕೆ ಸಿದ್ಧ ಇಲ್ಲದಿದ್ದರೆ ಗೌರವದಿಂದ ನಿವೃತ್ತಿಯಾಗಬೇಕು. ಈಗ ಮಾನ್ಯ ಚನ್ನಬಸಪ್ಪನವರು ನ್ಯಾಯಕ್ಕೆ ದಕ್ಷತೆಗೆ ಹೆಸರಾಗಿದ್ದಂಥವರು ಕೆಳಮಟ್ಟಕ್ಕೆ ಇಳಿದಂಥ ಆಡಳಿತ ಕೊಡುತ್ತಾರೆ ಎನ್ನುವ ಮಾತು ಜನಜನಿತವಾಗುತ್ತದೆ. ಇದಕ್ಕೆ ಅವರು ಜವಾಬು ಕೊಡಬೇಕು. You must yourself take a decision. If you connot touch the senior officers you please reinstate the Junior officers. ಆದುದರಿಂದ ಈ ಮಾತನ್ನು ತಿಳಿಸಿ, ಇವೊತ್ತು ಈ ಇಲಾಖೆಯಲ್ಲಿ ಒಂದು ಡಿಸಿಪ್ಲಿನ್ ಇಲ್ಲ, ಪ್ರಾಮಾಣಿಕವಾದಂಥ ಆಸಕ್ತಿ ಇಲ್ಲ ಈ ನಿದರ್ಶನಗಳನ್ನು ಅರ್ಥಮಾಡಿಕೊಳ್ಳಬೇಕು ಎಂದು ನಾನು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಮತ್ತೊಂದು ವಿಷಯ ಇನ್ನೂ ಹಲವಾರು ಅಂಕಿ ಅಂಶಗಳು ನನ್ನ ಹತ್ತಿರ ಇವೆ. ನನ್ನ ಮಿತ್ರರು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಕೆಲಸ ಮಾಡತಕ್ಕವರು ಇದ್ದಾರೆ. ಹೇಗೆ ನಿರ್ಣಯವಾಗಿದೆ ಯಾವ ಸಂದರ್ಭದಲ್ಲಿ ಮಾಡಿದ್ದಾರೆ ಗೊತ್ತಿದೆ, ಫೈಲು ತರಿಸಿ ನೋಡಿದ್ದೇನೆ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ನಮ್ಮ ಸ್ನೇಹಿತರು ದಿಗಂಬರ್ ರಾವ್ ಪಾಟೀಲರು ಕುಳಿತಿದ್ದಾರೆ, ಅವರಿಗೆ ಗೊತ್ತಿದೆ. ಈಗ ನಾನು ಸಭೆಯ ಮುಂದೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ ಈಗ ೦ ಚಾರ್ಜ್‌ಷೀಟುಗಳನ್ನು ಸಭೆಯ ಮುಂದೆ ಇಡಬೇಕಾದರೆ ಅದರ ಎಲ್ಲಾ ಹಿನ್ನೆಲೆಯನ್ನು ಇಟ್ಟುಕೊಂಡಿದ್ದೇನೆ. ಇವುಗಳನ್ನು ಚರ್ಚೆಮಾಡಲಿಕ್ಕೆ ಈ ಸಭೆಯಲ್ಲಿ ಪುನಃ ಕೆಟ್ಟ ಸಂಪ್ರದಾಯವನ್ನು ಹಾಕಲಿಕ್ಕೆ ಹೋಗುವುದಿಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮೈನ್‌ಟೆನೆನ್ಸ್ ಎಸ್ಟಾಬ್ಲಿಷ್‌ಮೆಂಟ್ ಬಗ್ಗೆ ಕೂಡ ಪದೇ ಪದೇ ಹೇಳಿದ್ದೇನೆ. ಇದರಲ್ಲಿ ಹಂತಹಂತವಾಗಿ ಕೆಲವರನ್ನು ಖಾಯಂ ಮಾಡತಕ್ಕಂಥ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದಿರಿ. ಆದರೆ ಆ ದಿಸೆಯಲ್ಲಿ ಯಾವುದೇ ಪ್ರೋಗ್ರೆಸ್ ಆಗಿಲ್ಲ ಎಂದು ತಿಳಿದು ಕೊಂಡಿದ್ದೇನೆ: ಅವರು ಕೂಡ ಕಳೆದ ಸಾರಿ ಸ್ಪೀಚ್‌ನಲ್ಲಿ ಹೇಳಿದ್ದಾರೆ. ಎಷ್ಟು ಸಾವಿರ ಅಂದರೆ ೧,೪೦೦ ಅಧಿಕಾರಿಗಳು ಇದ್ದರೆ, ಮೈನ್‌ಟೆನೆನ್ಸ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ ಇರತಕ್ಕವರು ೭,೦೦೦ ಜನರು, ಅದರಲ್ಲಿ ೧,೦೦೦ ಜನರ ಕೇಸುಗಳನ್ನು ಖಾಯಂ ಮಾಡತಕ್ಕದ್ದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದರು. ಈಗ ವರ್ಕ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಇರತಕ್ಕ ಅಧಿಕಾರಿಗಳ ಬಗ್ಗೆ ೧೦–೩೦ ವರ್ಷ ಸರ್ವೀಸ್ ಆಗಿದ್ದರೂ ಅವರ ಸನ್ನಿವೇಶ ಏನು ಇದೆ ಅದನ್ನು ತೊಡೆದುಹಾಕಬೇಕು. ಈ ಒಂದು ಸಿಬ್ಬಂಧಿವರ್ಗ ಏನು ಇದೆ ಅವರನ್ನು ಖಾಯಂ ಮಾಡುವುದಕ್ಕೆ ಹಂತಹಂತವಾಗಿ ಅವರ ಒಂದು ಸೇವಾ ನಿಯಮವನ್ನು ಇವೊತ್ತು ಮಾರ್ಪಾಡು ಮಾಡಿ ಖಾಯಂಗೊಳಿಸುವುದಕ್ಕೆ ಮತ್ತು ಅವರಿಗೆ ಏನು ಏನು ಬೆನಿಫಿಟ್ಸ್ ಸಿಕ್ಕಬೇಕು. ಅದು ಸಿಕ್ಕುವುದಕ್ಕೆ ಈ ಎಲ್ಲಾ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಮತ್ತೊಂದು ವಿಷಯ ಈ ಸಭೆಯಲ್ಲಿ ಈ ಗಾಗಲೇ ಮಸೂದೆ ಇದೆ ಅದರ ಬಗ್ಗೆ ಚರ್ಚೆ ಮಾಡು ವುದಕ್ಕೆ ಹೋಗುವುದಿಲ್ಲ. ಡಿಪ್ಲೊಮಾ ಮತ್ತು ಗ್ರಾಜುಯೇಟ್ಸ್ ತಾರತಮ್ಯದ ಬಗ್ಗೆ ಬಂದಾಗ ಅದರ ಬಗ್ಗೆ ಮಾತನಾಡುತ್ತೇನೆ. ಇವೊತ್ತು ನಾನು ಒಂದು ತಮಗೆ ಸಲಹೆ ಮಾಡಿದೆ ನಾನ್ ಗ್ರಾಜುಯೇಟ್ಸ್ ಡಿಪ್ಲೊಮಾ ಹೋಲ್ಡರ್ಸ್, ಡ್ರಾಫ್ಟ್ಸ್‌ಮೆನ್ ಏನು ಇದ್ದಾರೆ ಅವರು ಜೂನಿಯರ್ ಇಂಜಿನಿಯರ್ ಆಗಬಹುದು. ಒಂದು ನಿರ್ಣಯಮಾಡಿ ಜೂನಿಯರ್ ಇಂಜಿನಿಯರ್ಸ್ ನಾನ್ ಗ್ರಾಜು ಯೇಟ್ಸ್ ಆದ ಡಿಪ್ಲೊಮಾಹೋಲ್ಡರ್ಸ್ ಡ್ರಾಫ್ಟ್ಸ್‌ಮೆನ್ಸ್ ಕೆಲಸ ಮಾಡತಕ್ಕದ್ದು ನಾನ್ ಗ್ರಾಜು ಯೇಟ್ಸ್ ಡಿಪ್ಲೊಮಾ ಹೋಲ್ಡರ್ಸ್ ಜೂನಿಯರ್ ಇಂಜಿನಿಯರ್ಸ್ ಕೆಲಸಮಾಡತಕ್ಕಂಥದ್ದು ಎಂದು ಹೇಳಿ ಈ ರೀತಿ ಮಾಡತಕ್ಕಂಥದ್ದಕ್ಕೆ ಸೂಕ್ತ ಬದಲಾವಣೆ ಮಾಡಿ. ಇಂಜಿನಿಯರ್ ಆದವನು ಟೆಕ್ನಿ ಕಲ್ ಅಸಿಸ್ಟೆಂಟ್ ಕೆಲಸಮಾಡುತ್ತಾನೆ. ಅಸಿಸ್ಟೆಂಟ್ ಇಂಜಿನಿಯರ್ ಕೆಲಸಮಾಡುತ್ತಾನೆ. ಅದೇ ರೀತಿ ಒಬ್ಬ ಎಕ್ಸಿಕ್ಯುಟೀವ್ ಇಂಜಿನಿಯರ್ ಚೀಫ್ ಇಂಜಿನಿಯರ್ ಕೆಲಸ ಮಾಡುತ್ತಾನೆ. ಆದ್ದರಿಂದ ಬಿ. ಇ. ಗ್ರಾಜುಯೇಟ್ಸ್‌ಗೆ ಈ ತರಹ ಒಂದು ಸೌಲಭ್ಯ ಇರತಕ್ಕ ಕಾಲದಲ್ಲಿ ಡಿಪ್ಲೊಮಾ ಹೋಲ್ಡರ್ಸ್‌ಗೆ ಏತಕ್ಕೆ ಇರಬಾರದು ? It can be inter-changeable ಆದ್ದರಿಂದ ಈ ರೀತಿ ನಿರ್ಣಯಮಾಡಬೇಕು ನನಗೆ ಹಿಂದೆ ಒಂದು ಸಾರಿ ಪತ್ರ ಬರೆದಿದ್ದಾರೆ, ಬೋರ್ಡ್ ಆಫ್ ಚೀಫ್ ಇಂಜಿನಿಯರ್ಸ್ ಕೂಡ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಲಾ ಡಿಪಾರ್ಟ್‌ಮೆಂಟ್ ಕೂಡ ಅಗ್ರಿ ಆಗಿದೆ ಎಂದು ಕೇಳಿದ್ದೇನೆ. ಅದಕ್ಕೆ ಹಿಂದು ಮುಂದು ನೋಡತಕ್ಕದ್ದು ಇಲ್ಲ ಎಂದು ಹೇಳುತ್ತೇನೆ.

ಇನ್ನು ಪ್ರಮೋಷನ್ಸ್.—ನಮ್ಮ ಮಾನ್ಯ ಚನ್ನಬಸಪ್ಪನವರು ಹೇಳುತ್ತಾರೆ, ನನ್ನ ಹತ್ತಿರ ಆಟ ನಡೆಯುವುದಿಲ್ಲ ಎಂದು, ಆದರೆ ನಿಮ್ಮ ಆಟ ನಡೆಯುವುದಿಲ್ಲವೋ ಅವರ ಆಟ ನಡೆಯುವುದಿಲ್ಲವೋ ನನಗಂತು ಗೊತ್ತಿಲ್ಲ. ಕೆಲವು ನಿದರ್ಶನಗಳನ್ನು ಕೊಡುತ್ತೇನೆ. ಅಂಧಕಾರ ದರ್ಬಾರು ತೊಗಲಕ್ ದರ್ಬಾರು ವಾಟರ್‌ಬೋರ್ಡ್ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರ್ ಅಲ್ಲಿಂದ ವಾಪಸ್ ಡಿಪಾರ್ಟ್‌ಮೆಂಟಿಗೆ ಹೋಗುತ್ತಾನೆ. ತನಗೆ ಬೇಕಾಗಿರುವ ಸೂಪರಿಂಟೆಂಡಿಂಗ್ ಇಂಜಿನಿಯರನ್ನು ಎಗ್ಸಿಕ್ಯುಟಿವ್ ಇಂಜಿನಿಯರ್ ಆಗಿ ಮಾಡುವುದು. ಇದೇನು ಸರ್ಕಾರವೇ? ಇದನ್ನು ಯಾರು ಮಾಡುವವರು. Can your Engineer in-chief go to that extent or behave like a Chief Minister? I am going to give concrete instances. ಇದು ನಿಮಗೆ ಸ್ವಲ್ಪ ಏನಾದರೂ ಮರ್ಯಾದೆ ತರುತ್ತದೆಯೇ? ಹೆಸರು ಹೇಳುತ್ತೇನೆ. ಮುಚ್ಚುಮರೆ ಇಲ್ಲ. ಗಲಗಲಿ ಎನ್ನುವವರು ಕೆಲಸ ಮಾಡುತಿದ್ದರು ಅವರನ್ನು ಅಲ್ಲಿಂದ ವಾಪಸ್ ಅವರ ಡಿಪಾರ್ಟ್ ಮೆಂಟಿಗೆ ಕಳಿಸಿದರು. ಅವರ ಜಾಗದಲ್ಲಿ ಪುನಃ ೧೫ ದಿವಸಕ್ಕೆ ನಾಗೇಂದ್ರ ಮೂರ್ತಿ ಅವರನ್ನು ಕರೆಸಿ ಕೊಂಡರು. ಅವರನ್ನು ಕಳಿಸುವಾಗ ಯಾವ ಕೆಲಸ ಇರಲಿಲ್ಲ. ಇವರನ್ನು ಕರೆಸಿಕೊಳ್ಳುವಾಗ ಯಾವ ಕೆಲಸ ಜಾಸ್ತಿ ಇತ್ತು? Sri Galgali was sent back from water supply board to the Department on the plea that there is no work and Sri Nagendra Murthy was again taken back to water supply board in place of Sri Galgali ಇಂತಹ ದ್ವಿಮುಖ ಪಾತ್ರ ಮಾಡಲಿಕ್ಕೆ ಅನುಕೂಲ ಇದೆಯೇ? Sri Gulam Mohamed, a Junior most Executive Engineer is acting as Superintending Engineer for so many years. ನಾನು ಅಧಿಕಾರಿಗಳಮೇಲೆ ವೈಯುಕ್ತಿಕವಾಗಿ ಆರೋಪಣೆಮಾಡುತ್ತಿದ್ದೇನೆ ಎಂದು ತಿಳಿದುಕೊಳ್ಳಬಾರದು ಅವರು ನನಗೇನೂ ಸಂಬಂಧ ಇಲ್ಲ. ಅವರ ಮುಖ ನೋಡಿಲ್ಲ, For certain period the Junior Engineer has acted as

Executive Engineer in the water Supply board. ಗರೀಬಿ ಹಠವೊ ಎಂದು ಹೇಳುತ್ತಾರೆ ಮಾಡಿಕೊಳ್ಳಲಿ. ಶ್ರೀಮಾನ್ ಬಸವಲಿಂಗಪ್ಪನವರು ದೇವರು ಇಲ್ಲ ಎಂದು ಹೇಳುತ್ತಾರೆ, ನಾನು ಇದ್ದೇನೆ ಎಂದು ಹೇಳುತ್ತೇನೆ. ಅಲ್ಲಿ ತೀರ್ಮಾನ ಆಗಲಿ.

SRI B BASAVALINGAPPA —He is imputing certain things I have not stated there is no god.

ಶ್ರೀ ಹೆಚ್. ಡಿ. ದೇವೇಗೌಡ —ಎಷ್ಟು ಜನ ಅಸಿಸ್ಟೆಂಟ್ ಇಂಜಿನಿಯರ್ಸ್ ಇವತ್ತು ಇನ್‌ಚಾರ್ಜ್ ಎಗ್ಸಿಕ್ಯುಟೀವ್ ಇಂಜನಿಯರ್ಸ್ ಪೋಸ್ಟಿನಲ್ಲಿ ಕೆಲಸಮಾಡುತ್ತಿದ್ದಾರೆ, ಏಕೆ?

SRI B. BASAVALINGAPPA.—I want to know whether that Junior Engineer is posted as Executive Engineer and took charge as such or whether the transfer order in respect of him has been cancelled?

SRI H. D. DEVEGOWDA.—Under what circumstances, the Junior Engineer has been asked to work as Executive Engineer, I do not know. Instead of asking that Junior Engineer to work as Executive Engineer, they could have asked a senior-most Assistant Engineer to work as Executive Engineer. ಅದೇನು ತೊಂದರೆ ಇಲ್ಲ. ಯಾವ ಕಾರಣಕ್ಕೋಸ್ಕರ ಏತಕೋಸ್ಕರ ಈ ರೀತಿ ಮಾಡಿದರು, ಅದು ಅವರಿಗೆ ಗೊತ್ತಿದೆ, ಅದಕ್ಕೆ ನೀವು ಸಂಬಂಧ ಇಲ್ಲ. ಅದಕ್ಕೆ ಯಾರು ಸಂಬಂಧ ಇದ್ದಾರೋ ನನಗೆ ಗೊತ್ತಿಲ್ಲ. ದಯಮಾಡಿ ಸರ್ಕಾರ ವಿವರಣೆ ಕೊಡಲಿ. ಆಮೇಲೆ ಎಷ್ಟು ಜನ ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಸೂಪರಿಂಟೆಂಡಿಂಗ್ ಇಂಜಿನಿಯರ್ ಹಂಗಾಮಿಯಾಗಿ ಕೆಲಸಮಾಡುತಿದ್ದಾರೆ ಜೂನಿಯರ್ ಪೋಸ್ಟ್ ಪೀಪಲ್ ಬೇರೆ ಡಿಪಾರ್ಟ್‌ಮೆಂಟಿನಲ್ಲಿ ಅಂದರೆ ಪಬ್ಲಿಕ್ ಹೆಲ್ತ್, ಪವರ್ ಕಾರ್ಪೊರೇಷನ್ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನಲ್ಲಿ ಆನ್ ಡೆಪ್ಯೂಟೇಷನ್ ಕೊಡುತ್ತೀರಲ್ಲ ಅದು ಎಷ್ಟು ಜನ? The Junior most Executive Engineers are functioning as Superintending Engineers I want to know how many Juniormost Junior Engineers are working as Assistant Engineers, Executive Engineers working in various Officers on deputation. why do you have that pick and choose policy? For whose benefit and for what purpose you are posting a Junior most man to act as Executive Engineer on deputation?

ಆಮೇಲೆ ೨೨ ಜನ ಎಗ್ಸಿಕ್ಯೂಟೀವ್ ಇಂಜಿನಿಯರ್ಸ್‌ನ್ನು ೧೧೪ ಜನ ಅಸಿಸ್ಟೆಂಟ್ ಇಂಜಿನಿಯರ್ಸ್‌ನ್ನು ರಿವರ್ಟ್ ಮಾಡಬೇಕು ಎಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ ಈ ನಿರ್ಣಯ ಆಯಿತ್ತು, ಜಿ. ಓ. ಇಷ್ಯು ಆಯಿತು. ನಂತರ ಬಿಜಾಪುರದಿಂದ ಡೋಂಟ್ ಇಷ್ಯು ಎಂದು ಟೆಲಿಗ್ರಾಂ ಬಂತು. ಅದು ಹೇಗೋ ನನಗೆ ಗೊತ್ತಿಲ್ಲ. ಆಮೇಲೆ ರಿವರ್ಟ್ ಮಾಡುವುದು ಬೇಡ ಎಂದು ನಿರ್ಣಯ ಮಾಡಿದಿರಿ. ಒಂದು ವೇಳೆ ಸದುದ್ದೇಶದಿಂದ ಮಾಡಿದ್ದೀರಿ ಎಂದು ಇಟ್ಟುಕೊಳ್ಳೋಣ ವಾಟರ್ ಬೋರ್ಡ್ ಪವರ್ ಕಾರ್ಪೊರೇಷನ್ ಹೆಲ್ತ್ ಡಿಪಾರ್ಟ್‌ಮೆಂಟ್ ಎಲ್ಲೆಲ್ಲಿ ಪೋಸ್ಟು ಇದೆಯೋ ಅಲ್ಲಿ ಇದ್ದೇ ಇರುತ್ತದೆ. ಎಲ್ಲೆಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಸೂಪರಿಂಟೆಂಡಿಂಗ್ ಇಂಜನಿಯರ್ ಪೋಸ್ಟ್ ಇದೆಯೋ ಅಲ್ಲಿಗಾದರೂ ಅವರನ್ನು ಪೋಸ್ಟ್ ಮಾಡಬಹುದಾಗಿತ್ತು. ಜೂನಿಯರ್ ಇಂಜನಿಯರ್ ಪೋಸ್ಟ್ ಅಪಗ್ರೇಡ್‌ಮಾಡಿದರು ಅಸಿಸ್ಟೆಂಟ್ ಇಂಜನಿಯರ್ ಪೋಸ್ಟ್ ಅಪಗ್ರೇಡ್ ಮಾಡಿದರು.

ನಮ್ಮ ರಾಜ್ಯ ಸರ್ಕಾರದವರು ಇರಲಿ, ಕೇಂದ್ರ ಸರ್ಕಾರದವರು ಎಷ್ಟರಮಟ್ಟಿಗೆ ಪ್ರಗತಿಯನ್ನು ಸಾಧಿಸಿದ್ದಾರೆಂದರೆ, ರೈಲಿನಲ್ಲಿ ೩ ನೇ ಕ್ಲಾಸ್ ಡಬ್ಬವೊಂದನ್ನು ಕಿತ್ತು ಹಾಕಿದರು, ಅದರ ಬದಲಿಗೆ ಸೆಕೆಂಡ್ ಕ್ಲಾಸ್ ಎಂದು ಮಾಡಿದರು, ನೋಡುವುದಕ್ಕೆ ಅಷ್ಟು ನಾಜೂಕಾಗಿ ಕಾಣಿಸುತ್ತದೆ. ಒಳಕ್ಕೆನೋಡಿದರೆ ಹುಳುಕು ಇದೆ.

11-00 A.M.

ಇನ್ನು ಟೆಕ್ನಿಕಲ್ ಜೂನಿಯರ್ಸ್ ಪೋಸ್ಟ್‌ನ್ನು ಅಸಿಸ್ಟೆಂಟ್ ಇಂಜಿನಿಯರ್ಸ್ ಪೋಸ್ಟ್‌ಗೆ ಅಪ್‌ಗ್ರೇಡ್ ಮಾಡಿದಿರಿ. ಇದನ್ನು ಎಷ್ಟು ಕಾಲ ಮುಂದುವರಿಸಿಕೊಂಡು ಹೋಗುವುದಕ್ಕೆ ಆಗುತ್ತದೆ ? ದೇಶಕ್ಕೆಲ್ಲಾ ಮಹೋಪದೇಶವನ್ನು ಹೇಳಿದಿರಿ, ಉಪದೇಶವನ್ನು ಹೇಳಬೇಕಾದರೆ ನೈತಿಕ ಬಲವಿರಬೇಕು ನೈತಿಕ ಬಲವಿಲ್ಲದೇ ರಾತ್ರಿಯೆಲ್ಲಾ ಕುಡಿದು ಬಿದ್ದು ಬೆಳಿಗ್ಗೆ ಎದ್ದು ಬಂದು ಕುಡಿಯಬೇಡಿ ಎಂದು ಹೇಳುವುದಾದರೆ ನನ್ನ ಯೋಗ್ಯತೆ, ಮಾನ್ಯ ಪುಟ್ಟಸ್ವಾಮಿಯವರ ಯೋಗ್ಯತೆ ಎಷ್ಟು ಎಂಬುದು ಪತ್ರಿಕೆಗಳಲ್ಲಿ ಬರುತ್ತದೆ. Every thing will be watched by the public to-day ನಾವು ಎಲ್ಲಿ ತಿರುಗುತ್ತೇವೆ ಏನು ಮಾಡುತ್ತೇವೆ ನಮ್ಮ ಹಣಬರಹ ಏನು ಎಂಬುದನ್ನು ಜನತೆ ನೋಡುತ್ತಾರೆ ನಮ್ಮ ದೇಶದಲ್ಲಿ ಜನತೆ ಬುದ್ಧಿವಂತರಾಗಿದ್ದಾರೆ. ಆದುದರಿಂದ ಇಂಥ ಕೆಲಸವನ್ನು ಮಾಡಬಾರದಾಗಿತ್ತು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಮಾನ್ಯ ಸಭಾಪತಿಗಳೇ ಬಹುಶಃ ಇದಕ್ಕೆ ಸಂಭಂದಪಟ್ಟ ಮಂತ್ರಿಗಳು ಉತ್ತರ ಕೊಡುವಾಗ ಇದಕ್ಕೆ ಎಲ್ಲಾ ವಿವರವನ್ನೂ ಕೊಡುತ್ತಾರೆ ಎನ್ನತಕ್ಕಂಥ ಸಂಶಯವನ್ನು ಹೊಂದಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ —ಉತ್ತರ ಕೊಡುವುದಿಲ್ಲವೆಂದು ಏತಕ್ಕೆ ಯೋಚನೆ ಮಾಡುತ್ತೀರಿ?

ಶ್ರೀ ಎಚ್. ಡಿ. ದೇವೇಗೌಡ.— ವಿವರಣೆ ಕೊಡದೆ ಇಲ್ಲಿ ವಂಚಿಸುತ್ತೀರಿ ಎನ್ನತಕ್ಕಂಥ ಭಾವನೆ ಇಲ್ಲ. ಅಂಥ ಅಧಿಕಾರಿಗಳಿಗೆ ರಕ್ಷಣೆಕೊಡುವುದಕ್ಕೆ ಹೋಗಬಾರದು. ಈ ಸಭೆಯ ನಿಯಮಾವಳಿಗಳ ಪ್ರಕಾರ ರಿಕಾರ್ಡ್‌ಗಳನ್ನು ಇಡುವುದಕ್ಕೆ ಆಗುವುದಿಲ್ಲವೆಂದು ಹೊರಟರೆ ಕಷ್ಟ. ವಿಜಿಲೆನ್ಸ್ ಕಮಿಷನ್ ರಿಪೋರ್ಟ್ ಪಬ್ಲಿಕ್ ಡಾಕ್ಯುಮೆಂಟ್ ಅಲ್ಲವೆಂದು ಹೇಳುತ್ತೀರಿ.

SRI H. M. CHANNABASAPPA.—You know I am by nature, not given to hide anything,

SRI H. D. DEVEGOWDA.—You will hide something to safeguard the interest of your own people.

SRI H. M CHANNABASAPPA.—I am not given to that.

ಶ್ರೀ ಎಚ್. ಡಿ, ದೇವೇಗೌಡ.—ಪಾರ್ಟಿ ಪ್ರಶ್ನೆ ಬಂದಾಗ ನನ್ನ ಅಭಿಪ್ರಾಯವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ದಯವಿಟ್ಟು ಈ ಘಟನೆಗಳ ಬಗ್ಗೆ ಟೆಕ್ನಿಕಲ್ ಆಡಿಟರ್‌ರವರು ಕೊಟ್ಟಿರುವ ವರದಿ, ವಿಜಿಲೆನ್ಸ್ ಕಮಿಷನರ್‌ರವರು ಕೊಟ್ಟಿರುವ ವರದಿಯನ್ನು ಈ ಸಭೆಯ ಮುಂದೆ ಇಡಿ. ಆಗ ನಾನು ಇಷ್ಟು ಹೊತ್ತು ಮಾಡಿರತಕ್ಕಂಥ ಎಲ್ಲಾ ಟೀಕೆಗಳಬಗ್ಗೆ ಕ್ಷಮೆ ಕೇಳಿಕೊಳ್ಳುತ್ತೇನೆ. ದೇಶದ ಜನತೆ ಇಂಥ ಒಳ್ಳೆಯ ಸರ್ಕಾರಕ್ಕೆ ಛೀಮಾರಿ ಹಾಕಿದರಲ್ಲಾ ಎಂದು ಕೇಳಬಹುದು. ಆದುದರಿಂದ ಅದಕ್ಕೆಲ್ಲಾ ನಾನು ಕ್ಷಮೆ ಕೇಳುತ್ತೇನೆ. ಅದನ್ನೆಲ್ಲಾ ವಾಪಸ್ ತೆಗೆದುಕೊಳುತ್ತೇನೆಂದು ಹೇಳುತ್ತೇನೆ. ಆ ಅಧಿಕಾರಿಗಳ ಸಂಭಂದದ ಬಗ್ಗೆ ಇರತಕ್ಕಂಥ ಎಲ್ಲಾ ವಿವರಣೆಯನ್ನೂ ಸಭೆಯ ಮುಂದೆ ಇಡಿ ನೋಡೋಣ,

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಜಿಲೇನ್ಸ್ ಕಮಿಷನ್ ವರದಿಯನ್ನು ಇಲ್ಲಿ ಇಡತಕ್ಕಂಥದ್ದು ಸರಿಯಲ್ಲ. ಬೇಕಾದರೆ ನಿಮಗೆ ಇನ್‌ಫರ್ಮೆಷನ್ ಕೊಡಬಲ್ಲೆ, I can give you information as it stands. Mr. Devegowda, you are an experienced Parliamentari H ave you every found the need for all the files to be placed here? I quite appreciate the hon. Members anxiety to know facts and I can give him the assurance that I can give him facts.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಎಲ್ಲಾ ಫೈಲ್‌ಗಳನ್ನೂ ಸಭೆಯ ಮುಂದಿಟ್ಟು ಸ್ಕ್ರೂಟಿನಿ ಮಾಡಬೇಕೆಂದು ಹೇಳುತ್ತಾ ಇಲ್ಲ. ನನಗೆ ಗೊತ್ತಿದೆ ಇವತ್ತು ನೀವು ಯಾವ ಹೊಸ ಸಂಪ್ರದಾಯವನ್ನೂ ಹಾಕುವುದಕ್ಕೆ ಹೋಗುತ್ತಾ ಇಲ್ಲ. ಹಳೆಯ ಸಂಪ್ರದಾಯಗಳನ್ನೇಬೆಳೆಸಿಕೊಂಡು ಬರುತ್ತಿರುವುದು. ಆದರೆ ಫೈಲ್‌ಗಳನ್ನು ಇಟ್ಟರೆ ಯಾವ ಕಾಂಟ್ರವರ್ಸಿ ಬರುತ್ತದೆ ? ಇವತ್ತು ಉತ್ತರ ಪ್ರದೇಶದಲ್ಲಿ ಸ್ಟೇಟ್‌ಮೆಂಟನ್ನು ಸಭೆಯ ಮುಂದಿಡುವುದಕ್ಕೆ ಮುಖ್ಯಮಂತ್ರಿಗಳು ಒಪ್ಪಿ ಕೊಂಡಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಒಪ್ಪಿದ್ದರೆ ನಾವು ಒಪ್ಪಬೇಕು ಎನ್ನತಕಂಥ ವಿಚಾರ ಇದೆಯೋ? Merely because somebody does something wrong, I don't want to do wrong. It is only when you distrust my bona fides that you can ask. Tell me if you distruct my bona fides.

SRI H. D. DEVEGOWDA.—The question of doubting or distrusting the bona fide only comes after your reply.

SRI H. M. CHANNABASAPPA.—If I don't place the facts, then you can question; not otherwise.

SRI H. D. DEVEGOWDA.—I have cited certain instances involving Hon. Chief Ministers of Uttar Pradesh and Tamil Nadu.

SRI H. M. CHANNABASAPPA.—If these people have commited something wrong, you don't advise me to do it.

ಶ್ರೀ ಎಚ್. ಡಿ. ದೇವೇಗೌಡ.—ಕೆಟ್ಟ ಸಂಪ್ರದಾಯಗಳನ್ನು ಹಾಕಿ ಎಂದು ಹೇಳುವುದಿಲ್ಲ. ಆ ರೀತಿ ಫೈಲುಗಳನ್ನು ಸಭೆಯ ಮುಂದಿಡುವುದಕ್ಕೂ ಸರ್ಕಾರಕ್ಕೆ ಧಾಷ್ಟತೆ ಬೇಕು. ತಪ್ಪು ಮಾಡಿದ್ದಾರೋ ಇಲ್ಲವೋ ಎಂದು ತಿಳಿಯಬೇಕಾದರೆ ಅದನ್ನು ಸಭೆಯ ಮುಂದಿಡಬೇಕು, ಆ ಒಂದು ಧಾಷ್ಟತೆ ಬೇಕು. ಆ ಒಂದು ಹಿನ್ನೆಲೆ ಕೂಡ ಇರಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಪ್ಪು ಮಾಡಿದ್ದರೆ ಅಲ್ಲವೇ ಆ ರೀತಿ ಮಾಡಬಹುದು. ತಪ್ಪು ಮಾಡದೇ ಇರುವವರು ಸತ್ಯವಾದುದನ್ನೇ ಹೇಳಿಬಿಡುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಬರವಣಿಗೆಗಳು ಮುಖ್ಯಮಂತ್ರಿಗಳ ಬರವಣಿಗೆಯನ್ನೂ ನೋಡಬೇಕಾಗುತ್ತದೆ.

SRI H. M. CHANNABASAPPA.—Do not go that controversy.

ಶ್ರೀ ಎಚ್. ಡಿ. ದೇವೇಗೌಡ.—ಇನ್ನು ಜನೋಪಯೋಗಿ ಇಲಾಖೆ ಎಷ್ಟರಮಟ್ಟಿಗೆ ಕೆಲಸಗಳನ್ನು ಮಾಡುತ್ತಿದೆ ಅದಕ್ಕೆ ಎಷ್ಟು ಹಣವನ್ನು ಒದಗಿಸಿದ್ದಾರೆ ಇದರ ಬಗ್ಗೆ ಸ್ವಲ್ಪ ವಿಮರ್ಶೆ ಮಾಡೋಣ. ಸ್ವಾಮಿ ಮೊದಲನೆಯದಾಗಿ ರಸ್ತೆ ಕಾಮಗಾರಿಗಳ ಡಿಮ್ಯಾಂಡ್ ಬಗ್ಗೆ ತೆಗೆದುಕೊಳ್ಳೋಣ. ಈ ರಸ್ತೆ ಚೀಫ್ ಇಂಜಿನಿಯರ್‌ರವರ ಕೆಲಸ ಬರೀ ವರ್ಗಾವರ್ಗಿಗಾಗಿ ಅವರನ್ನು ಇಟ್ಟುಕೊಂಡಿದ್ದೀರಾ? ಬರೀ ವರ್ಗಾವರ್ಗಿ ಮಾಡುವುದೇ ಕೆಲಸವಾಗಿದ್ದರೆ ಅವರಿಗೆ ಆತಂಕವಿದೆ ಎಂದು ಹೇಳುತ್ತೇನೆ. ತಾವು ರಸ್ತೆ ಕೆಲಸ ನೋಡಿದಾಗ ಗೊತ್ತಾಗುತ್ತದೆ, ಉದಾಹರಣೆಗೆ ಮಂಗಳೂರು ಕಡೆಗೆ ಸುಬ್ಬಯ್ಯಶೆಟ್ಟಿಯವರು ಹೋಗುತ್ತಿರುತ್ತಾರೆ, ನೆಲಮಂಗಲ ರಸ್ತೆ ನ್ಯಾಶನಲ್ ಹೈವೇ, ಮಂಗಳೂರಿಗೆ ಹೋಗಬೇಕಾದರೆ ನೆಲಮಂಗಲದ ಹತ್ತಿರ ವಿರುವ ಹಾಸನ ರೂಟ್ ಕ್ರಾಸ್‌ನಲ್ಲಿ ತಿರುಗಬೇಕು. ಆ ರಸ್ತೆಯನ್ನು ತಾವು ನೋಡಿರಬಹುದು. ಅಲ್ಲಿ ಏನು ಕೆಲಸ ಮಾಡಿಸಿದ್ದೀರಿ? ಇದಕ್ಕಾದರೂ ಸತ್ಯ ಹೇಳುತ್ತೀರೋ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಮಾಡಿಸಿರತಕ್ಕಂಥ ಕೆಲಸ ನನಗೆ ಸಮಾಧಾನವಿಲ್ಲವೆಂದು ಹೇಳುತ್ತಿದ್ದೇನೆ. You take it for granted that I have said everything is not alright. I am myself admitting that it is not in good condition.

ಶ್ರೀ ಎಚ್. ಡಿ. ದೇವೇಗೌಡ.—ಮತ್ತೆ ಹಾಗಿದ್ದರೆ ಈ ಇಲಾಖೆ ಏತಕ್ಕೆ ಬೇಕು? ಅಲ್ಲಿಯ ಬಿ.ಡಿ.ಒ.ಗೆ ಹೇಳಿ ಅವರೇ ಅಲ್ಲಿರತಕ್ಕಂಥ ಗುಂಡಿಯನ್ನೆಲ್ಲಾ ಮುಚ್ಚಿಸಿ ರಸ್ತೆಯನ್ನು ರಿಪೇರಿ ಮಾಡಿಸುತ್ತಾರೆ.

SRI H. M. CHANNABASAPPA.—Why it is included ಎಂದು ಪ್ರಶ್ನೆ ಕೇಳಿದಿರಿ ಅಷ್ಟು ಸಾಕು. ಅದನ್ನು ಬಿಟ್ಟು Why don't you ask B.D.O. to look after ಎಂದರೆ the two things are not reconcilable.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ನ್ಯಾಶನಲ್ ಹೈವೇ, ಸ್ಟೇಟ್ ಹೈವೇ ಎಂದು ಒಟ್ಟು ೪ ಕೆಟಗರಿಗಳು ಇವೆ ಸ್ವಾಮಿ ಇವತ್ತು ನ್ಯಾಶನಲ್ ಹೈವೇಗೆ ಹಣವಿಲ್ಲವೆಂದು ಹೇಳುತ್ತೀರಿ. ಸೆಂಟ್ರಲ್ ರೋಡ್ ಫಂಡ್ಸ್‌ಗೆ ಹಣ ಬರುತ್ತಿತ್ತು ಆದರೆ ಈಗ ಬರುವುದಿಲ್ಲ, ಕೆಲವು ಪ್ರಾಜೆಕ್ಟ್ಸ್‌ಗೆ ಕೇಂದ್ರ ಸರ್ಕಾರದವರಿಂದ ಹಣ ಬರುತ್ತಿತ್ತು, ಹಣವಿಲ್ಲವೆಂದು ಹೇಳಿದಿರಿ ಹೋಗಲಿ. ಉತ್ಪಾದನಾ ಯೋಜನೆಗೆ ಏನಾದರೂ ಹಣವನ್ನು ಹಾಕುತ್ತಿದ್ದಿರಾ ಎಂದರೆ ಅದೂ ಇಲ್ಲ. ಕಾಳಿ ಯೋಜನೆಗೆ ಕೇಂದ್ರ ಸರ್ಕಾರದವರು ಕೊಡಬೇಕಾದಂಥ ಹಣವನ್ನೂ ಕೊಡುತ್ತಿಲ್ಲವೆಂದು ಹೇಳುತ್ತೀರಿ, ಇದು ಒಂದನೇ ಪಾಯಿಂಟ್. ಎರಡನೆಯದು ರಾಜ್ಯ ಸರ್ಕಾರದಲ್ಲಿ, ನಾನು ಇದರ ಬಗ್ಗೆ ಮೊನ್ನೆ ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದೇನೆ. ನಮ್ಮ ಸಂಪನ್ಮೂಲಗಳನ್ನು ಹೇಗೆ ಹೆಚ್ಚಿಸಬೇಕೆಂದು ಹೇಳಿದ್ದೇನೆ, ಬೇರೆ ಬೇರೆ ರಾಜ್ಯಗಳಲ್ಲಿ, ಇವತ್ತು ಯಾವ ರೀತಿ ಪ್ರಗತಿಹೊಂದಿದೆ ಎನ್ನುವುದನ್ನು ಕಳೆದ ಸಾರಿ ನನ್ನ ಭಾಷಣದಲ್ಲಿ ಹೇಳಿದ್ದೇನೆ. ಇವತ್ತು ನಮ್ಮ ರಾಜ್ಯದಲ್ಲಿ ನ್ಯಾಶನಲ್ ಹೈವೇ ಕೆಲಸ ಮಾಡ ತಕ್ಕಂಥದ್ದಕ್ಕೆ ಹಣವಿಲ್ಲ ವೆಂದು ಹೇಳುತ್ತೀರಿ. ಸ್ಟೇಟ್ ಫಂಡ್ ರೋಡಿಗೆ ಇರತಕ್ಕಂಥ ಅಲ್ಪಸಲ್ಪ ಹಣವನ್ನು ತೆಗೆದು, ರೂರಲ್ ಕಮ್ಯೂನಿಕೇಷನ್ ನಿಂದ ಸ್ವಲ್ಪ ಹಣವನ್ನು, ಆ ಮೇಲೆ ನಿಮ್ಮ ಫ್ಯಾಮಿನ್‌ಗೆ ಸಂಬಂಧಪಟ್ಟದ್ದರಿಂದ ೭೦ ಲಕ್ಷ ರೂಪಾಯಿಗಳನ್ನು ಸಹ ಖರ್ಚು ಮಾಡಿರುವ ಬಗ್ಗೆ ಮಾನ್ಯ ಚನ್ನಬಸಪ್ಪನವರು ಮಾಡಿರತಕ್ಕಂಥ ಸ್ಟೇಟ್‌ಮೆಂಟ್‌ನ್ನು ನಾನು ನೋಡಿದ್ದೇನೆ.

ಈ ಹಣವನ್ನು ಒಂದೊಂದು ತಾಲ್ಲೂಕಿಗೆ ಒಂದೊಂದು ಲಕ್ಷ ಕೊಟ್ಟಿದ್ದೀರಿ. ಆದುದರಿಂದ ನಮ್ಮ ರಾಜ್ಯದಲ್ಲಿ ರಸ್ತೆಗಳ ಕೆಲಸವನ್ನು ಸಮರ್ಪಕವಾಗಿ ಮಾಡತಕ್ಕಂಥದ್ದಕ್ಕೆ ಹಣ ಇಲ್ಲ. ಅದೇ ಇದರ ಮೂಲ ಉದ್ದೇಶ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅಧಿಕಾರಿಗಳು ಸಮರ್ಥರಾಗಿಲ್ಲ ಅನ್ನುವ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಈ ಇಲಾಖೆಯಲ್ಲಿ ಬೇಕಾದಷ್ಟು ಸಿಬ್ಬಂದಿ ಇದ್ದಾರೆ ಮತ್ತು ಮಾಡತಕ್ಕಂಥ ವರೂ ಇದ್ದಾರೆ.

SRI H.M. CHANNABASAPPA.—You have correctly located the defect

ಶ್ರೀ ಹೆಚ್. ಡಿ. ದೇವೇಗೌಡ.— ಆದುದರಿಂದಲೇ ನಾನು ಹೇಳಿದ್ದು ಕೆಲವು ಕಾಲ ಈ ಇಲಾಖೆಗೆ ರಜಾ ಕೊಡಬೇಕು. ಎಂದು.

ಶ್ರೀ ಕೆ. ಎನ್. ವೀರಪ್ಪ.— ಈ ಇಲಾಖೆಗೆ ರಜಾ ಕೊಡುವುದಾದರೆ ಅಲ್ಲಿರುವ ಸಿಬ್ಬಂದಿ ವರ್ಗಗಳಿಗೆ ಸಂಬಳ ಕೊಡಬೇಕಾಗಿಲ್ಲವೇ? ಅವರಿಗೆ ಯಾವ ಕೆಲಸ ಕೊಡೋಣ?

ಶ್ರೀ ಹೆಚ್. ಡಿ ದೇವೇಗೌಡ.— ಅವರಿಗೆ ಬೇರೆ ಕೆಲಸ ಕೊಡಿರಿ ಈ ಬಾಬುಗಳಿಗೆ ಇಷ್ಟು ಸಿಬ್ಬಂದಿ ಇಟ್ಟುಕೊಂಡು ಅಷ್ಟು ಹಣ ಕೊಡದೇ ಹೋದರೆ ಈ ಬಾಬುಗಳು ಯಾವ ಕಾರಣಕ್ಕಾಗಿ ಇದೆಯೋ ಅದು ಸಫಲವಾಗುವುದಿಲ್ಲ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈಗ ಬ್ರಿಡ್ಜ್ ಕಾರ್ಪೊರೇಷನ್ ಒಂದನ್ನು ಮಾಡಬೇಕು ಅಂತ ಹೊರಟಿದ್ದೀರಿ ಮತ್ತು ಈ ಬ್ರಿಡ್ಜ್ ಕಾರ್ಪೊರೇಷನ್‌ನಿಂದ ೨ ಕೋಟಿ ರೂಪಾಯಿಗಳು ಬರುತ್ತದೆ ಎಂದು ಅಂದಾಜು ಮಾಡಿದ್ದೀರಿ. ಮತ್ತು ಇದಕ್ಕೆ ಅಡಿಷನಲ್ ಟ್ಯಾಕ್ಸ್ ಇಂಪೋಸ್ ಮಾಡಬೇಕು ಎಂದು ಮಾಡಿದ್ದೀರಿ. That is a non-lapsable fund.

ಶ್ರೀ ಕೆ. ಪುಟ್ಟಸ್ವಾಮಿ.— ಈಗಲೇ ಈ ಇಲಾಖೆಗೆ ದುಡ್ಡು ಇಲ್ಲ. ಇನ್ನು ರಾಜ್ಯದಲ್ಲಿ ರೋಡ್ಸ್ ಕಾರ್ಪೊರೇಷನ್ ಮತ್ತು ಬ್ರಿಡ್ಜಸ್ ಕಾರ್ಪೊರೇಷನ್ ಮಾಡಿದರೆ ಇನ್ನೂ ದುಡ್ಡು ಸಿಕ್ಕುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಹಿಂದೆ ರೋಡ್ಸ್ ಅಂಡ್ ಬ್ರಿಡ್ಜಸ್‌ಗೆ ಫಂಡ್ ಮಾಡಬೇಕು. ಎನ್ನುವ ಯೋಜನೆ ಇತ್ತು ಈಗ With a little modification we are intending to form a fund both for bridges and roads particularly rural communication and how exactly that programe has got to be implemented we have not yet come to a fiinal decision

ಶ್ರೀ ಹೆಚ್. ಡಿ. ದೇವೇಗೌಡ.— ಈವೊತ್ತು ನಾನು ಇಷ್ಟು ಮಾತ್ರ ಹೇಳುತ್ತೇನೆ. ಈವೊತ್ತಿನ ದಿವಸ ಕೇಂದ್ರ ಸರ್ಕಾರದವರು ೨೮೮ ಕೋಟಿ ರೂಪಾಯಿ ಟ್ಯಾಕ್ಸ್ ಏನು ಹಾಕಿದ್ದಾರೆ ಅದು ಪ್ರತಿಯೊಬ್ಬ ರೈತರ ತಲೆಮೇಲೂ ನೇರವಾಗಿ ಬೀಳುತ್ತದೆ ಇನ್ನು ಮತ್ತೊಂದು ಟೋಲ್ ಟ್ಯಾಕ್ಸ್ ಹಾಕುವುದು ನಿಮ್ಮ ತಲೆಯಲ್ಲಿ ತುಂಬಿದೆ

SRI H.M. CHANNABASAPPA.—That was also one of the sources that was thought of

ಶ್ರೀ ಹೆಚ್ ಡಿ. ದೇವೇಗೌಡ — ನಿಮ್ಮ ಆಡಳಿತದಲ್ಲಿ ಎಷ್ಟು ದೂರ ಹೋಗುತ್ತಿದ್ದೀರಿ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿ ರಸ್ತೆಗಳು ಟೇಕನ್ ಓವರ್ ರೋಡ್ಸ್ ಏನು ಮಾಡಿಸಿದ್ದೀರಿ ಅಲ್ಲಿ ಲಂಟಾನಾ ಗಿಡ ಬೆಳೆಯುತ್ತದೆ. ೧೯೫೮ರಲ್ಲಿ ತಾವು ಪಿಡಬ್ಲ್ಯುಡಿ. ಮಿನಿಸ್ಟರ್ ಆಗಿದ್ದಾಗ ರೂರಲ್ ಕಮ್ಯೂನಿಕೇಷನ್‌ಗೆ ೧೦ ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಅದರಲ್ಲಿ ಕೆಲವು ರಸ್ತೆಗಳು ಹಾಗೆಯೇ ಬಿದ್ದಿವೆ ಕೆಲವು ರಸ್ತೆಗಳನ್ನು ಮುಂದುವರೆಸಲಿಕ್ಕೆ ಆಗಲಿಲ್ಲ. ಆ ರಸ್ತೆಗಳಲ್ಲಿ ಲಂಟಾನಾ ಗಿಡ ಬೆಳೆದುಕೊಂಡು ಆ ರಸ್ತೆ ಹಾಗೆಯೇ ಬಿದ್ದಿದೆ, ಅದರ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ.

ಶ್ರೀ ಹೆಚ್. ಎಂ. ಚೆನ್ನಬಸಪ್ಪ.— ಆವಾಗ ಆ ರಸ್ತೆಗಳನ್ನು ಮಾಡಿಸಿದ್ದು ತಪ್ಪೇ?

ಶ್ರೀ ಹೆಚ್. ಡಿ. ದೇವೇಗೌಡ.— ಅದನ್ನು ತಪ್ಪು ಎಂದು ಹೇಳುವುದಿಲ್ಲ. ಆ ರಸ್ತೆಯನ್ನು ಮೆಂಟೆನೆನ್ಸ್ ಮಾಡಿಸುವುದಕ್ಕೆ ಸಾಧ್ಯ ಇಲ್ಲದೇ ಹೋದಾಗ ಮತ್ತೊಂದಕ್ಕೆ ಪ್ರಯತ್ನ ಮಾಡಿದರೆ ಅದು ತಪ್ಪಾಗುತ್ತದೆ. ಎಷ್ಟು ದುಡ್ಡು ಇದೆಯೋ ಅಷ್ಟಕ್ಕೆ ಕೆಲಸ ಮಾಡಬೇಕು, ಹಾಸಿಗೆ ಎಷ್ಟು ದೂರ ಇದೆಯೋ ಅಷ್ಟಕ್ಕೆ ಕಾಲು ಚಾಚಿಕೊಳ್ಳಬೇಕು. ಎಲ್ಲಾ ತಾಲ್ಲೂಕು ಎಂ ಎಲ್ ಎ. ಗಳು ಹೋಗಿ ನೋಡಿದ್ದಾರೆ. ಅಲ್ಲಿ ಇನಾಗ್ಯುರೇಷನ್ ಮಾಡಿದ್ದಾರೆ. ಏನಾದರೂ ಆ ಭಾಗದಲ್ಲಿ ರಸ್ತೆ ಕೆಲಸ ಆಗಿದ್ದರೆ ೩ ಮೈಲಿ ೫ ಮೈಲಿ ಆಗಿದೆ. ಮೊನ್ನೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದರು ಸಣ್ಣ ಸಣ್ಣ ಬಿಟ್ಸ್ ಸೇರಿ ೧೦ ರಸ್ತೆಯಲ್ಲಿ ೫ ಮೈಲಿ ಆಗಿದೆ ಎಂದು. ಅಪೋಸಿಷನ್‌ನವರ ಭಾಗದಲ್ಲ ಕೆಲಸ ಮಾಡಿಲ್ಲ, ನಿಮ್ಮ ಭಾಗದಲ್ಲಿ ಮಾಡಿದ್ದೀರಿ ಎಂದು ನಾನು ಹೇಳುತ್ತಾ ಇಲ್ಲ. ಎಲ್ಲಾ ಕಡೆಯಲ್ಲೂ ಇದೇ ರೀತಿ ಮಾಡಿದ್ದೀರಿ. ನೀವು ಯಾವ ಒಂದು ಸದುದ್ದೇಶದಿಂದ ಈ ಕಾರ್ಯಕ್ರಮ ಹಾಕಿದ್ದೀರಿ ಅದು ಏನಾಗುತ್ತದೆ ಎಂದರೆ ಸರಿಯಾಗಿ ಅಲ್ಲಿ ಕೆಲಸವಾಗುವುದಿಲ್ಲ, ಅದಕ್ಕಾಗಿ ನಾನು ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಅದು ಏನು ಸಲಹೆ ಎಂದರೆ ಕೆಲವು ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಹಣ ಇದೆ. ಆ ಹಣವನ್ನು ರಸ್ತೆಗೆ ತೆಗೆದುಕೊಳ್ಳಬೇಕು. ಎಂದು ನನ್ನ ಅಭಿಪ್ರಾಯ. ನಾನು ಬೆಳಗಾಂಗೆ ಹೋದಾಗ ಕೇಳಿದೆ, ಅವರ ಹತ್ತಿರ ಹತ್ತಾರು ಲಕ್ಷ ರೂಪಾಯಿ ಇದೆ ಎಂದು, ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ರೈತರಿಗೆ ಬೇಕಾದಂಥ ಸವಲತ್ತುಗಳನ್ನು ಅವರು ಒದಗಿಸಿದ್ದಾರೆ ಹೊರಗಡೆ ರೈತರೂ ಕೂಡ ಆ ಏರಿಯಾಕ್ಕೆ ಬರುತ್ತಾರೆ. ಅವರಿಗೆ ಬೇಕಾದಂಥ ಹೋಟೆಲ್ ಗೆಸ್ಟ್ ಹೌಸ್ ಇತ್ಯಾದಿ ಸವಲತ್ತುಗಳನ್ನು ಒದಗಿಸಿಕೊಟ್ಟಿದ್ದಾರೆ. ಅವರ ಹತ್ತಿರ ಸರಪ್ಲಸ್ ಮನಿ ಇದೆ. ಅವರ ಹತ್ತಿರ ೫೦-೬೦ ಲಕ್ಷ ರೂಪಾಯಿ ಇದೆ ಎಂದು ನಾನು ಕೇಳಿದ್ದೇನೆ. ಆದುದರಿಂದ ನಾನು ಹೇಳುವುದು ಯಾದ ಯಾವ ಮಾರ್ಕೆಟ್‌ನಲ್ಲಿ ಸರ್ಪ್ಲಸ್ ಹಣ ಇದೆ ಅಲ್ಲಿಂದ ೫೦ ಪರ್ಸೆಂಟ್ ಅಷ್ಟು ಹಣ ಯಿಯರ್ ಮಾರ್ಕ್ ಮಾಡಿ ರಸ್ತೆಗಳ ಕೆಲಸಕ್ಕೆ ಉಪಯೋಗ ಮಾಡಿ ಎಂದು ಹೇಳುತ್ತೇನೆ. ಈವೊತ್ತು ನೀವು ಅಡಿಷನಲ್ ಟ್ಯಾಕ್ಸ್ ಹಾಕುತ್ತೀರಿ ಮತ್ತು ಪುನ: ಟಾಕ್ಸ್ ಹಾಕುವುದಕ್ಕೆ ಹೋಗಬೇಡಿ. ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಹಿಂದೆ ಷುಗರ್‌ಕೇನ್‌ಗೆ ಒಂದು ಸೆಸ್ ಹಾಕಿದಿರಿ ಎಲ್ಲೆಲ್ಲಿ ಕಬ್ಬು ಬೆಳೆಯುತ್ತಾರೆ ಅಲ್ಲಿಗೆ ಒಂದು ಟಾಕ್ಸ್ ಹಾಕತಕ್ಕಂಥ ಪ್ರವೃತ್ತಿ ನಿಮ್ಮಲ್ಲಿ ಬೆಳೆದು ಬಂದಿದೆ ಮತ್ತು ಈಗ ಇದಕ್ಕೆ ೨ ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಲ್ಲಾ ಅದಕ್ಕೆ ಈ ಮಾತು ಹೇಳಿದೆ.

SRI H. M. CHANNABASAPPA.— Do you mean to say that every Regulated Market has surplus money ?

SRI B. BASAVALINGAPPA.— It is mis-application of funds so it cannot be done like that.

SRI H. M. CHANNABASAPPA — I know what the idea of the hon. member is. it is a very good idea. the rural communication according to him should not depend on the vagaries of the budget. it should have an independent source of income and independent rolling fund. you are suggesting that some Regulated Markets may have some funds to spare. But when they have no funds, Programmes will be at a standstill, he should be able to think and give a concrete suggestion which provides for a continuous flow of funds to the rural communi-

cation fund and it should not depend upon the sweet will and pleasure of the regulated market. that must be the way by which the resources will have to be found.

SRI H. D. DEVEGOWDA.— I am not for that. ಈವೊತ್ತು ಕೆಲವು ಕಡೆ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಸರ್ಪ್ಲಸ್ ಹಣ ಇದೆ. ಈಗ ಇರತಕ್ಕಂಥಾ ಕಾನೂನಿನ ಚೌಕಟ್ಟಿನಲ್ಲೇ ಆ ಬಗ್ಗೆ ಏರ್ಪಾಡು ಮಾಡೋಣ. ಅಲ್ಲಿ ಉಳಿದಿರತಕ್ಕ ೫೦ ಪರ್ಸೆಂಟ್ ಹಣದಲ್ಲಿ ಈ ಕೆಲಸಕ್ಕೆ ತೆಗೆದುಕೊಳ್ಳುವಂತೆ ಏರ್ಪಾಡು ಮಾಡೋಣ ಅದಕ್ಕೆ ಬೇಕಾದರೆ ಒಂದು ನಿರ್ಣಯ ಬೇಕಾದರೂ ಮಾಡೋಣ ಉದಾಹರಣೆಗೆ ಈಗ ತಿಪಟೂರು ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ೫೦ ಲಕ್ಷ ರೂಪಾಯಿ ಹಣ ಸರ್ಪ್ಲಸ್ ಹಣ ಇದ್ದರೆ ಅದನ್ನು ಅಲ್ಲಿಗೆ ಉಪಯೋಗಿಸುತ್ತಾರೇನು ? ಅದನ್ನು ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಫೆಸಿಲಿಟೀಸ್‌ಗೆ ಕೊಟ್ಟರೆ ತಪ್ಪೇನು ? ಅಲ್ಲಿ ಸರ್ಪ್ಲಸ್ ಹಣ ಇರುವುದನ್ನು ಏನು ಮಾಡುತ್ತೀರಿ ?

ಶ್ರೀ ಕೆ. ಪುಟ್ಟಸ್ವಾಮಿ. — ಈಗ ಮಾರ್ಕೆಟ್ ಏರಿಯಾ ಎಂದು ಏನು ಒಂದು ಕಾನೂನು ಬದ್ಧವಾಗಿ ಡಿಕ್ಲೇರ್ ಮಾಡಿದ್ದೀರಿ ಆ ಮಾರ್ಕೆಟ್ ಏರಿಯಾಕ್ಕೆ ಡಿಕ್ಲೇರ್ಡ್ ಆದ ಏರಿಯಾದವರೇ ಬರುವುದಿಲ್ಲ. ಉದಾಹರಣೆಗೆ ಮೈಸೂರು ತಾಲ್ಲೂಕು ಮಾರ್ಕೆಟ್ ಏರಿಯಾ ಇದೆ ಆದರೆ ಅಲ್ಲಿಗೆ ಬರತಕ್ಕಂಥ ವ್ಯವಸಾಯೋತ್ಪನ್ನ ವಸ್ತುಗಳು ಮಂಡ್ಯ ಜಿಲ್ಲೆಯಿಂದಲೂ ಬರುತ್ತದೆ. ಹಾಸನ ಜಿಲ್ಲೆಯಿಂದಲೂ ಬರುತ್ತದೆ ಮತ್ತು ಬೇರೆ ಬೇರೆ ಭಾಗಗಳಿಂದಲೂ ಬರುತ್ತದೆ, ಆ ಹಣವನ್ನು ಯಾವ ಭಾಗದಲ್ಲಿ ಉಪಯೋಗಿಸಬೇಕು ಹೇಳಿ.

SRI H M. CHANNABASAPPA. — The Suggestion is wherever. there is surplus, if necessary you amend the law and that surplus over and above a certain percentage may be flown out into the road fund. Am I correct ?

ಎಚ್. ಡಿ. ದೇವೇಗೌಡ. — ನನಗೆ ಗೊತ್ತಿದೆ. ನಮ್ಮ ರಾಜ್ಯದಲ್ಲಿರುವ ಕೆಲವು ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ಸಾಕಷ್ಟು ಸರ್‌ಪ್ಲಸ್ ಫಂಡ್ಸ್ ಇದೆ.

SRI HM. CHANNABASAPPA,—As I told you it may be Tiptur, Mysore or Belgaum. They must have some surplus funds this year ; but next year they may not have such funds.

SRI H. D. DEVEGOWDA. — If the Government thinks it feasible let them take a decision. It is only a suggestion I am making.

ಶ್ರೀ ಡಿ. ಮಂಜುನಾಥ. — ಮಾರ್ಕೆಟ್ ಕಮಿಟಿಗಳಲ್ಲಿ ಬರುವ ಆದಾಯ ವರ್ಷ ವರ್ಷಕ್ಕೂ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ.

SRI H. D. DEVEGOWDA. — I am not prepared for any additional taxation.

ನಾನು ಯಾವುದೇ ರೀತಿಯ ಸಾಲ ತಗೆದುಕೊಂಡು ಅದನ್ನು ಮಾಡಿ ಎಂದು ಹೇಳುತ್ತಾ ಇಲ್ಲ. ಹಾಗೆ ಮಾಡಿ ಜನರ ಮೇಲೆ ಹೆಚ್ಚು ತೆರಿಗೆ ಹಾಕಿದರೆ ನಮ್ಮ ಜನರು ಇದನ್ನು ಕೊಡಲು ತಯಾರಿಲ್ಲ ಈಗಾಗಲೇ ಸಾಕಷ್ಟು ಟ್ಯಾಕ್ಸ್‌ಗಳನ್ನು ಜನರ ಮೇಲೆ ಹಾಕಿದ್ದೀರಿ. ನಾಲ್ಕು ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿ ಇದಕ್ಕೆ ಸಾಲವನ್ನಾದರೂ ತೆಗೆದುಕೊಂಡು ರಸ್ತೆ ಮಾಡಿ ತೆರಿಗೆ ಕೊಡಬೇಕೆಂದರೆ ನಾವು ಕೊಡುವುದಿಲ್ಲ ಉದಾಹರಣೆಗಾಗಿ ಹೇಳಬೇಕೆಂದರೆ ಕುದುರೆ ಮುಖ ಯೋಜನೆ ಮಾಡಬೇಕೆಂದು ಮತ್ತು ಇದಕ್ಕೆ ಹೋಗುವ ರಸ್ತೆಯನ್ನು ಮಾತ್ರ ಮಂಗಳೂರಿನಿಂದ ಪಣಂಬೂರುವರೆಗೆ ಸೇರಬೇಕೆಂಬ ನಾಲ್ಕು ಕೋಟಿ ರೂಪಾಯಿಗಳ ಸಾಲವನ್ನು ಪಡೆದು ರಸ್ತೆ ಮಾಡಿದರು. ಅದೇ ನಮ್ಮ ಗ್ರಾಮಗಳಲ್ಲಿರುವ ಜನರಿಗೆ ರಸ್ತೆ ಮಾಡಿ ಕೊಡಬೇಕೆಂದು ಕೇಳಿದರೆ ಹಣ ಇಲ್ಲ ಎನ್ನುತ್ತಾರೆ. ಆದರೆ ಇಂತಹ ಪ್ರಾಜೆಕ್ಟ್‌ಗಳಿಗೆ ರಸ್ತೆ ಮಾಡಿ ಕೊಡುತ್ತಾರೆ. ಇದರಿಂದ ನಮಗೇನೂ ಬರುವುದಿಲ್ಲ, ಫಾರಿನ್ ಎಕ್ಸ್‌ಚೆಂಜು ಬರುತ್ತದೆ ಎಂದರೆ ಕೇಂದ್ರ ಸರ್ಕಾರ ಇದಕ್ಕೆ ನೆರವು ಕೊಡಬೇಕು Government of India must take that entire responsibility to bear that expenditure. ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ ತಂದು ಹಣವನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡಬೇಕು, ಆದರೆ ಇಂತಹ ಯೋಜನೆಗಾಗಿ ಸುಮಾರು ನಾಲ್ಕು ನಾಲ್ಕೂವರೆ ಕೋಟಿ ರೂಪಾಯಿಗಳ ಸಾಲ ತಂದು ಖರ್ಚು ಮಾಡಿ

ದ್ದೇವೆಂದು ಹೇಳಿ ನಮ್ಮ ಜನರ ಮೇಲೆ ಖಂಡಿತ ಯಾವ ರೀತಿಯಾದ ಟ್ಯಾಕ್ಸ್‌ನ್ನೂ ಹಾಕಲು ಹೋಗಬೇಡಿ ಎಂದು ಹೇಳುತ್ತೇನೆ. ಮತ್ತು ಇದಕ್ಕೆ ತಾವು ಅವಕಾಶ ಮಾಡಿಕೊಡತಕ್ಕದ್ದು ಎಂದು ಹೇಳುತ್ತೇನೆ. ಆ ರೀತಿ ಮಾಡುವುದು ಉಚಿತವೂ ಅಲ್ಲ ಸಾಧುವಾದುದೂ ಅಲ್ಲ. ರೂರಲ್ ಕಮ್ಯೂನಿಕೇಷನ್ಸ್ ಬಾಬಿನಿಂದ ಇದಕ್ಕಾಗಿ ಸಾಲ ಕೊಡಬೇಕೆಂದು ಹೇಳುವುದು ಸರಿಯಲ್ಲ. ಈ ರೀತಿ ನಾಲ್ಕು ಕೋಟಿ ರೂಪಾಯಿಯ ಸಾಲ ತೆಗೆದುಕೊಂಡು ಇದನ್ನು ಮಾಡುವುದರ ಉದ್ದೇಶವಾದರೂ ಏನು ಇತ್ತು ಎಂದು ನನಗೆ ಗೊತ್ತಾಗುತ್ತಿಲ್ಲ. ಇಂತಹ ಕೆಲಸಗಳನ್ನು ಮಾಡಲು ಅವಕಾಶ ಕೊಡಬಾರದು ಇದು ಸರಿಯಲ್ಲ.

ಇನ್ನು ಪೋರ್ಟುಗಳ ಬಗ್ಗೆ ಹೇಳಬೇಕಾಗಿದೆ.

ಈಚೆಗೆ ಮಂಗಳೂರು ಬಂದರಿನ ಉದ್ಘಾಟನಾ ಸಮಾರಂಭಕ್ಕೆ ಶ್ರೀಮತಿ ಇಂದಿರಾ ಗಾಂಧಿಯವರು ಬಂದಾಗ ಪೋರ್ಟುಗಳ ವಿಚಾರವನ್ನು ಅರಿತಿದ್ದ ಒಬ್ಬರು ಸ್ಪೆಷಲ್ ಆಫೀಸರ್‌ರವರು ಒಂದು ಹೇಳಿಕೆ ಕೊಟ್ಟರು. ಇದು ಪತ್ರಿಕೆಗಳಲ್ಲಿಯೂ ಬಂದಿದೆ. ಎಲ್ಲರೂ ಇದನ್ನು ಓದಿರಬಹುದು. ಇದರಲ್ಲಿ ಕಾರವಾರ ಪೋರ್ಟಿನವನ ಬಗ್ಗೆ ಹೇಳುತ್ತಾ ಈ ಪೋರ್ಟಿಗೆ ಪ್ಲಾನಿಂಗ್ ಕಮಿಷನ್‌ನವರು ಸಹಾಯ ಮಾಡುತ್ತಾರೆಯೇ ಇಲ್ಲವೇ ಕೇಂದ್ರ ಸರ್ಕಾರ ಸಹಾಯ ಕೊಡುವುದೇ ಎನ್ನುವುದರಲ್ಲಿ ಇನ್ನೂ ಸಂಶಯವಿದೆ ಎಂದು ಹೇಳಿದ್ದಾರೆ. It is one of the biggest natural ports ಮಲ್ಲೇಶ್ವರದಿಂದ ಮಂಗಳೂರಿಗೆ ಹೋಗುವ ರಸ್ತೆ ಮಾಡಿದರೆ ಈ ಪೋರ್ಟಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ ಇಂತಹ ಪೋರ್ಟುಗಳನ್ನು ಮಾಡಿದರೆ ರಾಜ್ಯದ ಪ್ರಗತಿಗೆ ಅತಿ ಮುಖ್ಯ ಈ ಒಂದು ಪೋರ್ಟಿಗೆ ಸುಮಾರು ಐದಾರು ಕೋಟಿ ರೂಪಾಯಿಗಳಷ್ಟು ಖರ್ಚುಮಾಡಿದರೆ ಈ ಪೋರ್ಟಿನ ಕೆಲಸಗಳನ್ನೂ ಮಾಡಲು ಸಾಧ್ಯವಾಗುತ್ತದೆ. ಇದಕ್ಕಾಗಿ ಕೇಂದ್ರದವರಲ್ಲಿ ಒತ್ತಾಯ ಮಾಡಿ ನಮ್ಮ ರಾಜ್ಯ ಸರ್ಕಾರ ಈ ಕಾರವಾರ ಪೋರ್ಟಿನ ಕೆಲಸ ಮಾಡಲು ಸಾಕಷ್ಟು ಹಣ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇದೇ ರೀತಿ ಇನ್ನೂ ೧೮–೧೯ ಮೈನರು ಪೋರ್ಟುಗಳೂ ಇವೆ ಇವನ್ನೆಲ್ಲಾ ಅಭಿವೃದ್ಧಿ ಮಾಡಿದರೆ ರಾಜ್ಯದ ಪ್ರಗತಿ ಸಾಧನೆ ಮಾಡಲು ಅನುಕೂಲವಾಗುತ್ತದೆ ಇಲ್ಲದಿದ್ದರೆ ಇದು ಸಾಧ್ಯವಿಲ್ಲ. ಪೋರ್ಟುಗಳ ಕೆಲಸಗಳನ್ನು ಮಾಡುವುದು ಅತ್ಯಾವಶ್ಯಕ ಇದಕ್ಕಾಗಿ ಸರ್ಕಾರದಲ್ಲಾಗಲೀ ಇಲ್ಲವೇ ಪ್ಲಾನಿಂಗ್ ಕಮಿಷನ್ ಮೂಲಕವಾಗಲೀ ನಮ್ಮ ಸರ್ಕಾರ ಒತ್ತಾಯ ಮಾಡಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಇದರ ಬಗ್ಗೆ ನಮ್ಮ ಸರಕಾರ ಎಲ್ಲ ರೀತಿಯ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳಬೇಕೆಂದು ಇಲ್ಲಿ ಹೇಳುತ್ತೇನೆ. ಇದು ಬಹಳ ಅತ್ಯಾವಶ್ಯಕವಾದ ಕೆಲಸ.

ಇನ್ನು ರೇಲ್ವೇಸ್ ಬಗ್ಗೆ ಹೇಳಬೇಕಾದರೆ ನಮಗೆ ಕಳೆದ ೧೭ ವರ್ಷಗಳಿಂದ ಎರಡು ರೈಲ್ವೆ ಎಂದರೆ ಹಾಸನ ಮಂಗಳೂರು ರೈಲ್ವೆ ಮತ್ತು ಸೇಲಂ ಬೆಂಗಳೂರು ರೈಲ್ವೆ, ಇವು ಮಾತ್ರ ನಮ್ಮ ರಾಜ್ಯದಲ್ಲಿ ಆಗಿರುವುದು ನಮ್ಮ ಸರ್ಕಾರದವರೇನೋ ಶಿಫಾರಸುಗಳನ್ನು ಮಾಡಿದ್ದರೂ ನಮ್ಮ ರಾಜ್ಯಕ್ಕೆ ಸಾಕಷ್ಟು ರೈಲ್ವೆ ಲೈನುಗಳು ಬರಲಿಲ್ಲ. ಸುಮಾರು ವರ್ಷಗಳಿಂದಲೂ ಒತ್ತಾಯ ಮಾಡುತ್ತಲೇ ಬರುತ್ತಿದ್ದೇವೆ. ಮಂಗಳೂರು ರೈಲ್ವೆ ೧೯೭೦ ಒಳಕ್ಕೆ ಬರುತ್ತೆ ಎಂದು ಇತ್ತು ಈಗ ಇದರ ಕೆಲಸಗಳನ್ನು ನೋಡಿದರೆ ಇದು ೧೯೮೮ರಲ್ಲಿ ಬರುತ್ತೋ ಏನೋ ಗೊತ್ತಿಲ್ಲ. ಇದರ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳೂ ಕೂಡ ಕೇಂದ್ರದಲ್ಲಿ ಅವರ ಕಷ್ಟವನ್ನೂ ಪೂರ್ತಿಯಾಗಿ ಹೇಳಿಕೊಂಡಿದ್ದಾರೆ. ಹೆಚ್ಚು ಹಣವನ್ನೂ ಒದಗಿಸಿ ರೈಲ್ವೆ ಲೈನನ್ನು ಹಾಕಬೇಕೆಂದು ಕೇಳಿದರೂ ಇದುವರೆಗೂ ಆಗಲಿಲ್ಲ. ಈಗಲಾದರೂ ಅವರಿಗೆ ಅರ್ಥವಾಗುವ ಹಾಗೆ ಒತ್ತಾಯ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಮುಖ್ಯ ಮಂತ್ರಿಗಳಿಗೇನೋ ಬಹಳ ಆಸೆ ಅವರು ಎಲ್ಲಿ ಹೋದರೆ ಅಲ್ಲಿ ಚೆನ್ನಾಗಿ ಭಾಷಣ ಮಾಡುತ್ತಾರೆ. ಒಂದು ಸಾರಿ ಭಾಷಣ ಮಾಡುವಾಗ ಹೇಳಿದ್ದರು ಮೈಸೂರಿನಿಂದ ಬೆಂಗಳೂರಿಗೆ ಆಟೋ ಬ್ಯಾನ್ ತರಹ ಒಂದು ರೀತಿಯ ರಸ್ತೆಗಳನ್ನೇಕೆ ಮಾಡಬಾರದು ಎಂದು. ನಮ್ಮ ರಾಜ್ಯದಲ್ಲಿ ಬಹು ಮುಖ್ಯವಾಗಿರುವ ಬೆಂಗಳೂರು ಮೈಸೂರು ಲೈನನ್ನು ಇನ್ನೂ ಬ್ರಾಡುಗೇಜು ಮಾಡುವುದಕ್ಕಾಗಲಿಲ್ಲ ಇದನ್ನು ಎಲೆಕ್ಟ್ರಿಕ್ ಟ್ರೇನ್ ಮಾಡಬೇಕೆಂದೂ ಸಲಹೆ ಇತ್ತು. ಇದರ ಬಗ್ಗೆ ಒಂದು ಚಕಾರ ಶಬ್ದ ಇದುವರೆಗೂ ಬರಲಿಲ್ಲ. ಇದರ ಜೊತೆಗೆ ಬೆಂಗಳೂರು ಮತ್ತು ಗುಂಟಕಲ್ ರೈಲ್ವೆ ಬ್ರಾಡುಗೇಜು ಮಾಡಬೇಕೆಂದು ಇತ್ತು. ಇದು ಕೂಡ ಆಗಲಿಲ್ಲ. ಆದರೆ ಮೀರಜ್ ನಿಂದ ಬೆಂಗಳೂರುವರೆಗೆ ಬ್ರಾಡುಗೇಜ್ ಆಗಬೇಕೆಂದು ಇತ್ತು. ಇದೂ ಆಗಲಿಲ್ಲ ಬೊಂಬಾಯಿಂದ ಮೀರಜ್ ವರೆಗೆ ಬ್ರಾಡುಗೇಜ್ ಆಗಿದೆ. ಅದೇ ರೀತಿ ಗುಂಟಕಲ್‌ನಿಂದ ಬಾಂಬೆ ವರೆಗೆ ಬ್ರಾಡುಗೇಜ್ ಇದೆ ಆದರೆ ಇದರಿಂದ ಈಚೆಗೆ ಇನ್ನೂ ಆಗಲಿಲ್ಲ, ಈಚೆಗೆ ಕೊಂಕಣ ರೈಲ್ವೆ ಮಾಡಬೇಕೆಂದು ಮಹಾರಾಷ್ಟ್ರದವರು ಒತ್ತಾಯ ತಂದಾಗ ಇಲ್ಲಿಗೆ ಮೂರು ರೈಲ್ವೆ ಲೈನುಗಳನ್ನು ಕೇಂದ್ರದವರು ಮಂಜೂರು ಮಾಡಿದ್ದಾರೆ. ನಮ್ಮಲ್ಲಿರುವ ಹುಬ್ಬಳ್ಳಿ ಕಾರವಾರ ಲೈನ್ ಬ್ರಾಡುಗೇಜಾಗಬೇಕೆಂದು ಕೇಳುತ್ತಿದ್ದೇವೆ ಇನ್ನೂ ಆಗಲಿಲ್ಲ. ಯಾವ ಕಡೆ ಹೆಚ್ಚು ರೈಲು ಹಾಕಬೇಕೆಂದು ಕೇಳುತ್ತಿದ್ದರೂ ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಉತ್ತರ ಬರುತ್ತಿರುವುದು ಏನೂ ಇಲ್ಲ. ಇದರಿಂದ ನಮ್ಮ ಪ್ರಗತಿ ಕೂಡ ಸೊನ್ನೆ ಆಗಿದೆ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಈಗಲಾದರೂ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಹಾಕಿ ಹೆಚ್ಚು ರೈಲ್ವೆಗಳು ನಮ್ಮ ರಾಜ್ಯಕ್ಕೆ ಬರುವಂತೆ ಮಾಡಿರಿ ಎಂದು ಹೇಳುತ್ತೇನೆ.

ಇನ್ನು ಪಿ ಹೆಚ್ ಇ ಬಗ್ಗೆ ಒಂದು ಸಲಹೆ ಕೊಡಲು ಇಚ್ಛೆಪಡುತ್ತೇನೆ, ಇದರಲ್ಲಿ ೧೯೭೩ರ–೭೪ರಿಂದ ತೆಗೆದುಕೊಂಡು ಕೆಲಸಗಳು ಇನ್ನೂ ಮುಗಿದಿಲ್ಲ. ಹಿಂದೆ ಏನು ಅಂದಾಜುಗಳು ಇದ್ದವೋ ಅದರಂತೆ ಇದರ ಕೆಲಸಗಳನ್ನು ಈಗ ಮುಂದುವರಿಸಲು ಆಗುತ್ತಿಲ್ಲ. ಕಾರಣ ಬೆಲೆಗಳು ದಿನೇ ದಿನೇ ಹೆಚ್ಚುತ್ತಿರುವುದರಿಂದ ಇದರ ಕೆಲಸಗಳನ್ನು ಮಾಡಲಾಗುವುದಿಲ್ಲ ಎಂದು ಹೇಳುತ್ತಾರೆ. ಹಿಂದೆ ಪಂಚಾಯಿತಿಗಳವರು ಶೇಕಡಾ ಹತ್ತರಷ್ಟು ಅವರ ಮತಿಗೆ ಎಂದು ಆಗಿನ ಅಂದಾಜು ಪ್ರಕಾರ ಕೊಟ್ಟಿದ್ದರು. ಆದರೆ ಇಲ್ಲಿ ಕೆಲಸಗಳು ಮುಗಿದಿಲ್ಲ ಎಂದು ಮತ್ತೆ ಹೆಚ್ಚು ಹಣ ಕೊಡಬೇಕೆಂದು ಪಂಚಾಯತಿಗಳಿಗೆ ಒತ್ತಾಯ ಮಾಡಿದರೆ ಅವುಗಳ ಆರ್ಥಿಕ ಸ್ಥಿತಿ ಚೆನ್ನಾಗಿರುವುದಲ್ಲ ಅವು ಕೊಡಲೂ ಆಗುವುದಿಲ್ಲ, ಸರ್ಕಾರವೇ ಇದರ ಕೆಲಸಗಳನ್ನು ಬೇಗನೆ ಮಾಡಬೇಕಾಗಿತ್ತು. ಅವರು ಕೆಲಸಗಳನ್ನು ನಿಧಾನ ಮಾಡಿದುದರಿಂದ ಈಗ ಹೆಚ್ಚು ಬೆಲೆ ಕೊಡಬೇಕಾಗಿ ಬಂದಿದೆ. ಹಿಂದೆ ಒಂದು ಲಕ್ಷದ ಅಂದಾಜು ಇದ್ದರೆ ಈಗ ಅದು ಎರಡು ಲಕ್ಷಕ್ಕೆ ಏರುತ್ತದೆ. ಇದಕ್ಕೆ ಕಾರಣ ಧಾರಣೆಗಳು ಹೆಚ್ಚುತ್ತಿರುವುದು ಒಂದು ಸಾರಿ ಲೈಸನ್ಸ್ ಕೊಟ್ಟಮೇಲೆ ಅದರ ಪ್ರಕಾರ ಕೆಲಸಗಳು ಪೂರ್ತಿಯಾಗಿ ಮಾಡಲೇಬೇಕು, ಸರ್ಕಾರ ಒತ್ತಾಯ ಮಾಡಿ ಮಾಡಿಸಿದ್ದರೆ ಇಂತಹ ಕಷ್ಟಗಳು ಬರುತ್ತಿರಲಿಲ್ಲ ಹಿಂದೆ ಭಾವಿಗಳಿಗೆ ಐದು ಹೆಚ್ ಪಿ. ಪವರು ಪಂಪ್ ಸೆಟ್ಟುಗಳು ಎಂದು ಹಾಕಿದ್ದರು ಮತ್ತು ಕೆಲವು ಕಡೆ ಒಂದು ಹೆಚ್ ಪಿ ಪಂಪು ಸೆಟ್ಟುಗಳು ಎಂದು ಕೊಟ್ಟರು. ಹಿಂದೆ ಇದು ಕಡಿಮೆ ಬೆಲೆಯಲ್ಲಿ ಸಿಗುತ್ತಿತ್ತು. ಈಗ ಇದರ ಬೆಲೆ ಒಂದಕ್ಕೆ ಎರಡುಮೂರರಷ್ಟು ಹೆಚ್ಚಾಗಿರುವುದರಿಂದ ಇದರ ಬೆಲೆಗಳು ಏರಿವೆ. ಇದರ ಬೆಲೆಯನ್ನೂ ಸರ್ಕಾರವೇ ಕೊಡಬೇಕೆಂದು ಹೇಳಿದರೆ ಅದು ಕಷ್ಟ. ಸರ್ಕಾರ ಮೊದಲು ಅಂದಾಜು ಮಾಡಿದಾಗ ಇಷ್ಟು ಕಾಂಟ್ರಿಬ್ಯೂಷನ್ ಪಂಚಾಯಿತಿಗಳವರು ಕೊಡಬೇಕೆಂದು ಇತ್ತು. ಅದರಂತೆ ಕೆಲವು ಕಡೆ ಪಂಚಾಯತಿಗಳವರು ಅವರ ಪಾಲಿನ ಮತಿಗೆಯನ್ನೂ ಕೊಟ್ಟರು. ಇದರಂತೆ ಲೈಸನ್ಸು ಕೊಟ್ಟ ಒರಿಜಿನಲ್ ಎಸ್ಟಿಮೇಟು ಪ್ರಕಾರ ಸರ್ಕಾರ ಕೆಲಸಗಳನ್ನು ಮಾಡಿ ಪೂರೈಸಬೇಕಾಗಿತ್ತು. ಆದರೆ ಕೆಲಸಗಳು ಮುಗಿಯದೆ ಮತ್ತು ಇನ್ನೂ ಹೆಚ್ಚು ಬೆಲೆ ಆಯಿತು ಎಂದು ರಿವೈಸ್ಡ್ ಎಸ್ಟಿಮೇಟು ಎಂದು ಮಾಡಿ ಅದರಂತೆ ಪಂಚಾಯತಿಗಳು ಹೆಚ್ಚು ಮತಿಗೆ ಕೊಡಬೇಕೆಂದು ಕೇಳುವುದು ಸರಿಯಲ್ಲ, ಅವರು ಇದನ್ನು ಕೊಡುವುದು ಕಷ್ಟವಾಗುತ್ತದೆ.

ಹಿಂದೆ ಒರಿಜಿನಲ್ ಎಸ್ಟಿಮೇಟು ಎನಿತ್ತೋ ಅದರ ಶೇಕಡಾ ಹತ್ತರಷ್ಟು ಪಂಚಾಯತಿಗಳವರು ಮತಿಗೇ ಕೊಡಬೇಕು, ಇದನ್ನು ಪದೇ ಪದೇ ಬದಲಾಯಿಸಿ ಅವರನ್ನು ಹಣ ಕೊಡಬೇಕೆಂದು ಕೇಳಿದರೆ ಅದು ಸರಿಯಲ್ಲ. ಅವರ ಹಣ ಕಾಸು ಸ್ಥಿತಿ ಚೆನ್ನಾಗಿರುವುದಿಲ್ಲ. ಪಂಚಾಯತಿಗಳು ಕೆಲವು ಕಡೆ ಹೀನ ಸ್ಥಿತಿಯಲ್ಲಿವೆ. ಆದುದರಿಂದ ಸರ್ಕಾರವೇ ಇಂತಹ ಕಡೆ ಬಾಕಿ ಇರುವ ಕೆಲಸಗಳನ್ನು ಬೇಗನೆ ಮಾಡಿಸಬೇಕೆಂದು ಇಲ್ಲಿ ಹೇಳಲು ಇಷ್ಟ ಪಡುತ್ತೇನೆ, ಕೆಲವು ಕಡೆಗಳಲ್ಲಿ ಪಂಚಾಯತಿಗಳವರು ನೀರನ್ನು ಎಲ್ಲ ಜನಕ್ಕೂ ಒದಗಿಸಲು ಪಂಪುಗಳನ್ನು ಹಾಕಿರುತ್ತಾರೆ, ಇದಕ್ಕೆ ಸರ್ಕಾರ ಸಹಾಯ ಮಾಡುತ್ತಿದೆ. ಇದರಂತೆ ಮೊನ್ನೆ ನಮ್ಮ ಅರ್ಥ ಸಚಿವರು ೨೦೦೦ ರಿಗ್ ಯಂತ್ರಗಳನ್ನು ತರಲಾಗಿದೆ ಎಂದು ಇಲ್ಲಿ ಹೇಳಿದರು. ಇದನ್ನು ಎಲ್ಲ ಪಂಚಾಯಿತಿಗಳವರೂ ನೋಡಿ ಕೊಳ್ಳಬೇಕೆಂದರೆ ಹಣಕಾಸು ಸ್ಥಿತಿ ಚೆನ್ನಾಗಿರುವ ಪಂಚಾಯತಿಗಳು ನೋಡಿಕೊಳ್ಳಬಹುದು. ಆದರೆ ಬಡ ಪಂಚಾಯತಿಗಳಿಗೆ ಇದರ ಮೇಂಟನೆನ್ಸ್‌ನ್ನು ಮಾಡಲಾಗುವದಿಲ್ಲ. ಇವರಿಗೆ ನೀರನ್ನು ಒದಗಿಸಿಕೊಡಲು ಸರ್ಕಾರ ಸಹಾಯಕ್ಕೆ ಬರಬೇಕೆಂದು ಹೇಳುತ್ತೇನೆ. ಎಲ್ಲ ಗ್ರಾಮಗಳಿಗೂ ವಾಟರ್ ಸಪ್ಲೈ ಯಾವ ರೀತಿ ಮಾಡಲು ಸಾಧ್ಯ ಎಂಬುದನ್ನು ಸರಿಯಾಗಿ ಸರ್ಕಾರ ಪರಿಶೀಲಿಸಿ ಅವರಿಗೆ ಸಾಕಷ್ಟು ಸಹಾಯಗಳನ್ನು ಒದಗಿಸಿಕೊಡಬೇಕು. ಎಲ್ಲಿ ನೀರಿನ ಆಸರೆ ಸರಿಯಾಗಿದೆಯೋ ಅಂತಹ ಕಡೆಗಳಲ್ಲಿ ರಿಗ್ ಯಂತ್ರಗಳನ್ನು ಬಳಸಿ ವಾಟರು ಸಪ್ಲೈಗೆ ಅವಕಾಶ ಮಾಡಿ ಕೊಡಬೇಕು. ಇದನ್ನು ಪರಿಶೀಲಿಸಬೇಕೆಂದು ಹೇಳುತ್ತೇನೆ.

ಇದರ ಮೇಂಟೆನೆನ್ಸ್ ಅನ್ನು ಪಂಚಾಯಿತಿಗಳಿಗೆ ಕೊಡಬೇಡಿ. ಇದಕ್ಕೆ ಕೊಡತಕ್ಕ ಹಣವನ್ನು ಆ ಮೇಲೆ ಅಡ್ಜಸ್ಟ್ ಮಾಡಿಕೊಳ್ಳಿ. ಡಿಪಾರ್ಟ್‌ಮೆಂಟ್‌ನವರೇ ಅವುಗಳ ಮೇಂಟೆನೆನ್ಸ್ ನೋಡಿಕೊಳ್ಳಬೇಕು. ಆ ರೀತಿ ಮಾಡುವುದರಿಂದರೆ ಈ ಯೋಜನೆಗಳ ಮೇಲೆ ಸರ್ಕಾರದವರು ವೆಚ್ಚ ಮಾಡಿರತಕ್ಕ ಹಣಕ್ಕೆ ಏನಾದರೂ ಒಂದು ಫಲ ದೊರೆಯುತ್ತಿದೆ. ಇಲ್ಲದಿದ್ದರೆ ಒಂದು ತಿಂಗಳು ಎಲೆಕ್ಟ್ರಿಸಿಟಿ ಚಾರ್ಜ್ ಕೊಡದಿದ್ದರೆ, ಒಂದುವೇಳೆ ನೀರು ಸರಬರಾಜು ಮಾಡತಕ್ಕ ಪಂಪು ಕೆಟ್ಟು ಹೋದರೆ ಅದನ್ನು ಸರಿಪಡಿಸಿ ಅದರ ಮೇಂಟೆನೆನ್ಸ್ ಅನ್ನು ಡಿಪಾರ್ಟ್‌ಮೆಂಟಿನವರು ನೋಡಿಕೊಳ್ಳದೆ ಹೋದರೆ ಆ ಯೋಜನೆ ಹಾಳಾಗುತ್ತದೆ. ಅದರ ಬೆನಿಫಿಷರೀಸ್ ಆ ಹಣವನ್ನು ಕೊಡಬೇಕಾಗುತ್ತದೆ. ಅದನ್ನು ಸರ್ಕಾರ ಕೊಡಿ ಎಂದು ಹೇಳುವುದಿಲ್ಲ. ಅದ್ದರಿಂದ ಮೊದಲು ಡಿಪಾರ್ಟ್‌ಮೆಂಟಿನವರು ಅದರ ಮೇಂಟೆನೆನ್ಸ್ ಚಾರ್ಜನ್ನು ಕೊಟ್ಟು ಆ ಮೇಲೆ ಆ ಸ್ಥಳೀಯ ಸಂಸ್ಥೆಗಳಿಗೆ ಕೊಡತಕ್ಕ ಹಣದಲ್ಲಿ ಅಡ್ಜಸ್ಟ್ ಮಾಡಿಕೊಳ್ಳಬೇಕು. ಅದಕ್ಕೆ ಕಾನೂನಿನ ಅಡಚಣೆ ಇದ್ದರೆ ಆ ಕಾನೂನನ್ನು ತಿದ್ದುಪಡಿ ಮಾಡಬೇಕು. ಆ ಕೆಲಸವನ್ನು ಮಾಡದೆ ಹೋದರೆ ಆ ಯೋಜನೆಯ ಮೇಲೆ ಹಾಕಿಸತಕ್ಕ ಹಣ ಸರಿಯಾಗಿ ಉಪಯೋಗವಾಗುವುದಿಲ್ಲ. ಅದ್ದರಿಂದ ಅದನ್ನು ಪುನರ್‌ವಿಮರ್ಶೆ ಮಾಡಬೇಕು ಎಂದು ನಾನು ಹೇಳುತ್ತೇನೆ.

11-30 A.M.

ಮೈನರ್ ಇರಿಗೇಷನ್ ಬಗ್ಗೆ ಒಂದು ಒಳ್ಳೆಯ ಮಾತನ್ನು ಹೇಳಬೇಕಾಗುತ್ತದೆ. ಶ್ರೀಮಾನ್ ನಗರಾಳ್ ಅವರು ನಾವು ನಿರೀಕ್ಷಿಸಿದ ಮಟ್ಟದಲ್ಲಿ ಕೆಲಸ ಮಾಡುತ್ತಿರುವಾಗ ಅವರ ಬಗ್ಗೆ ನಾವು ಒಳ್ಳೆಯ ಮಾತನ್ನು ಹೇಳಬೇಕಾಗುತ್ತದೆ. ನಾವೇನಾದರೂ ಅವರಿಗೆ ಪತ್ರ ಬರೆದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಅದರಲ್ಲಿ ಪಾರ್ಟಿ ಪ್ರಶ್ನೆ ಬರುವುದಿಲ್ಲ. ಅವರ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟೂ ಕೆಲಸವನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ನಾನು ಅವರಿಗೆ ಒಂದು ಸಲಹೆ ಕೊಡುತ್ತೇನೆ. ಅದು ಏನೆಂದರೆ ಲಿಫ್ಟ್ ಇರಿಗೇಷನ್ ಮಾಡುವಾಗ ಪುನಃ ಅದನ್ನು ಕೋ ಆಪರೇಟೀವ್ ಸೆಕ್ಟಾರಿಗೆ ತರಬೇಕೆಂದು ಹೊರಟಿದ್ದಾರೆ. ಸಹಕಾರ ಸಂಘಗಳು ಅದನ್ನು ಮಾಡಬೇಕೆಂದು ಹೊರಟಿದ್ದಾರೆ. ಅದು ಯಶಸ್ವಿಯಾಗುವುದಿಲ್ಲ ಎಂದು ನಾನು ನನ್ನ ಅನುಭವದಲ್ಲಿ ಕಂಡುಬಂದದ್ದನ್ನು ಹೇಳುತ್ತೇನೆ. ಉದಾಹರಣೆಗೆ ನನ್ನ ತಾಲ್ಲೂಕಿನಲ್ಲಿಯೇ ಕೋ ಅಪರೇಟೀವ್ ಸೆಕ್ಟರನಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್ ಮಾಡಿ, ಹೊಡೆದಾಟವಾಗಿ, ಕ್ರಿಮಿನಲ್ ಮೊಕದ್ದಮೆಗಳು ಆಗಿವೆ. ಇದು ಎಗ್ಸಿಕ್ಯುಟೀವ್ ಇಂಜಿನಿಯರ್ ಆಗಿದ್ದ ಶ್ರೀಮಾನ್ ನೀಲಕಂಠಪ್ಪ ಅವರಿಗೂ ಗೊತ್ತಿದೆ.

ಶ್ರೀ ಎಸ್. ಬಿ. ನಾಗರಾಳ್.—ಎಲೆಕ್ಟ್ರಿಸಿಟಿ ಚಾರ್ಜನ್ನು ಒಬ್ಬರೇ ತುಂಬಿ ಕೋ ಅಪರೇಟೀವ್ ಸೆಕ್ಟಾರಿನಲ್ಲಿ ನೋ ಪ್ರಾಫಿಟ್ ನೋ ಲಾಸ್ ಮೇಲೆ ಈ ಯೋಜನೆಯನ್ನು ಮಾಡಿಕೊಂಡರೆ ಒಳ್ಳೆಯದು ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ಮಾಡಿದ್ದೇವೆ. ಇದು ಕೋ ಅಪರೇಟೀವ್ ಸೆಕ್ಟಾರಿನಲ್ಲಿ ಸಕ್ಸಸ್ ಆಗುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದ್ದರಿಂದ ಮತ್ತೆ ಯಾವ ರೀತಿ ಮಾಡಬೇಕೆಂಬ ಬಗ್ಗೆ ಸಲಹೆ ಕೊಟ್ಟರೆ ಒಳ್ಳೆಯದು.

ಶ್ರೀ ಎಚ್. ಡಿ. ದೇವೇಗೌಡ.—೧೯೬೧-೧೯೬೬ ನೇ ಸಾಲಿನಲ್ಲಿ ಲಿಫ್ಟ್ ಇರಿಗೇಷನ್ ಬಗ್ಗೆ ನಾನು ಹೋರಾಟ ಮಾಡಿದ್ದೇನೆ. ಬಿಜಾಪುರದಲ್ಲಿ ಯಾವುದೋ ಒಂದು ಲಿಫ್ಟ್ ಇರಿಗೇಷನ್ ಫೆಲ್ಯೂರ್ ಆಯಿತು ಎಂದು ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು ಆಗ ಹಣಕಾಸಿನ ಸಚಿವರಾಗಿದ್ದ ಶ್ರೀಮಾನ್ ಜತ್ತಿಯವರು ಅದು ಸಕ್ಸಸ್ ಫುಲ್ ಆಗುವುದಿಲ್ಲ ಎಂದು ಹೇಳುತ್ತಿದ್ದರು. ಆಗ ನಾನು ಹೋರಾಟ ಮಾಡಿ ಲಿಫ್ಟ್ ಇರಿಗೆಷನ್ ಯೋಜನೆಯನ್ನು ಜಾರಿಗೆ ತರುವಂತೆ ಪ್ರಯತ್ನ ಮಾಡಿದ್ದೇನೆ. ಕಲೆಕ್ಷನ್ ಸಂಬಂಧದಲ್ಲಿ ಕಾನೂನು ಸರಿಯಾಗಿ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ನನ್ನ ತಾಲ್ಲೂಕಿನಲ್ಲಿ ೧೪ ಲಿಫ್ಟ್ ಇರಿಗೇಷನ್ ಸ್ಕೀಮುಗಳು ಇವೆ. ಯಾವ ರೈತರಿಗೂ ದಾಕ್ಷಿಣ್ಯ ತೋರಿಸಿ ಎಂದು ಹೇಳಿಲ್ಲ. ಒಂದೂವರೆ ಲಕ್ಷ ರೂಪಾಯಿ ಅರಿಯರ್ಸ್ ಕೊಡಬೇಕಾಗಿತ್ತು. You stop water and they will come round ಎಂದು ಹೇಳಿದ್ದೇನೆ. ಎರಡು ವಾರದೊಳಗಾಗಿ ೮೦ ಲಕ್ಷ ರೂಪಾಯಿ ಅರಿಯರ್ಸ್ ವಸೂಲಾಗಿದೆ. ಪ್ರತಿಯೊಂದು ಹಂತದಲ್ಲಿಯೂ ಸರ್ಕಾರವೇ ಹೊತ್ತುಕೊಂಡು ಹೋಗಬೇಕು ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ನೀರಾವರಿ ಸೌಲಭ್ಯ ಬಂದರೆ ಪವರ್ ಚಾರ್ಜ್ ಕೊಡದಿದ್ದರೆ ಕೊಯರ್ಸೀವ್ ಮೆಜರ್ಸ್ ತೆಗೆದುಕೊಳ್ಳಿ.

ಶ್ರೀ ಎಸ್. ಬಿ. ನಾಗರಾಳ್.—ಈಗ ಮಾನ್ಯ ಸದಸ್ಯರು ಕೋಯರ್ಸಿವ್ ಮೆಜರ್ಸ್ ತೆಗೆದುಕೊಳ್ಳಿ ಎಂದು ಹೇಳಿದರು. ಈಗ ಲಿಫ್ಟ್ ಇರಿಗೇಷನ್ ಸ್ಕೀಮಿನಲ್ಲಿ ೬೦೦—೮೦೦ ರೂಪಾಯಿಗಳ ಬಾಕಿ ಇರುವಂತಹ ಪರಿಸ್ಥಿತಿಯಲ್ಲಿ ಇರುತ್ತದೆ. ೫೦—೬೦ ಎಕರೆಗೆ ನೀರನ್ನು ಡಿಸ್ಟ್ರಿಬ್ಯೂಟ್ ಮಾಡತಕ್ಕ ಪ್ರಸಂಗ ಬರುತ್ತದೆ. ಅಂಥಾ ಸಂದರ್ಭದಲ್ಲಿ ರೈತರ ಪ್ರತಿನಿಧಿಗಳು ಬಂದು ಶಿಫಾರಸ್ಸು ಹೇಳುತ್ತಾರೆ. ಆಗ ಯಾವರೀತಿ ಮಾಡಬೇಕೆಂಬ ಸಮಸ್ಯೆ ಬರುತ್ತದೆ. ಇದರ ಬಗ್ಗೆ ಯಾವ ರೀತಿ ಮಾಡಬೇಕೆಂದು ಮಾನ್ಯ ಸದಸ್ಯರು ಸಲಹೆ ಮಾಡುತ್ತಾರೆ ?

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದವರೇ ನೇರವಾಗಿ ನೀರನ್ನು ಒದಗಿಸತಕ್ಕ ಹೊಣೆಗಾರಿಕೆಯನ್ನು ತೆಗೆದುಕೊಂಡ ಮೇಲೆ ರಿಯಾಯ್ತಿ ತೋರಿಸಬೇಡಿ.

SRI H. M. CHANNABASAPPA.—It is a complicated issue ; it cannot be settled by across the table discussion. There are lot of difficulties and I wish these matters are sorted out at a meeting. There is much to say both for and against. I agree some way has to be found.

H. D. DEVEGOWDA.—Once you make water available, he is bound to pay. ಲಿಫ್ಟ್ ಇರಿಗೇಷನ್ ಯೋಜನೆಯಲ್ಲಿ ಸರ್ಕಾರದವರು ಹಣವನ್ನು ತೊಡಗಿಸಿರುವಾಗ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡದಿದ್ದರೆ ಅದು ಆಗುವುದಿಲ್ಲ. ಆ ಯೋಜನೆಯನ್ನು ಮುಚ್ಚಬೇಕಾಗುತ್ತದೆ.

SRI H. M. CHANNABASAPPA.—Out of 100 people only ten people pay. Ninety people will not pay.

SRI H. D. DEVEGOWDA.—You take coersive steps.

SRI H. M, CHANNABASAPPA.—I quite appreciate your anxiety in this matter. We will dicuss abo utd and take suitable action.

ಶ್ರೀ ಎಚ್. ಡಿ. ದೇವೇಗೌಡ.—ಇವೊತ್ತು ಯಾವ ಉದ್ದೇಶದಿಂದ ಸರ್ಕಾರದವರು ಲಿಫ್ಟ್ ಇರಿಗೇಷನ್ ಸ್ಕೀಮ್ ಮಾಡಿದ್ದಾರೆಯೋ ಅದು ಸಫಲವಾಗಬೇಕಾದರೆ ಅದರಹೊಣೆಯನ್ನು ಮೇಂಟೆನೆನ್ಸ್ ಜವಾಬ್ದಾರಿಯನ್ನು ಸರ್ಕಾರದವರು ವಹಿಸಿಕೊಳ್ಳಬೇಕಾಗುತ್ತದೆ. ಅರಿಯರ್ಸ್ ರೆವಿನ್ಯೂ, ಪವರ್ ಚಾರ್ಜಸ್ ಕಲೆಕ್ಟ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಈ ಬಗ್ಗೆ ಕಾನೂನು ಮಾರ್ಪಾಟು ಮಾಡಬೇಕಾದ ಆವಶ್ಯಕತೆ ಇದ್ದರೆ ಅದನ್ನು ಮಾಡಬೇಕು.

ವಾಟರ್ ರೇಟ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬೆಟರ್‌ಮೆಂಟ್ ಲೆವಿ ಮಸರಾದೆಯನ್ನು ಈ ಸಭೆಯಲ್ಲಿ ಇಂಟ್ರಡ್ಯೂಸ್ ಮಾಡಿದಾಗ ಹೇಳಿದ್ದಾರೆ. ೧೦೦ ಎಕರೆಗಿಂತ ಕೆಳಗಡೆ ಇರತಕ್ಕ ಅಚ್ಚುಕಟ್ಟು ಪ್ರದೇಶದಲ್ಲಿ ವಾಟರ್‌ರೇಟ್ ಹಾಕುವುದಿಲ್ಲ ಎಂದು ಹೇಳಿದ್ದಾರೆ. ಆದರೆ ನನಗೆ ನೋಟೀಸ್ ಬಂದಿದೆ. ಒಂದು ಪಿಕಪ್ ಕೆಳಗಡೆ ಇರತಕ್ಕ ನನ್ನ ಜಮೀನಿಗೆ ೮೨ ರೂ ಚಿಲ್ಲರೆ ಬೆಟರ್‌ಮೆಂಟ್ ಲೆವಿ ಹಾಕಿ ನನಗೆ ಒಂದು ನೋಟೀಸ್ ಕಳುಹಿಸಿದ್ದಾರೆ. ನಿಮ್ಮ ಅಧಿಕಾರಿಗಳಿಗೆ ಹೇಳಿ ಇಲ್ಲದೆ ಹೋದರೆ ನಿಮ್ಮಗೆ ಕೆಟ್ಟ ಹೆಸರು ಬರುತ್ತದೆ ಎಲ್ಲೆಲ್ಲಿ ೧೦೦ ಎಕರೆ ಕೆಳಗಡೆ ಅಚ್ಚುಕಟ್ ಇದೆಯೋ ಅಂಥಾ ಕಡೆ ಈ ಬೆಟರ್‌ಮೆಂಟ್ ಲೆವಿಯನ್ನು ವಸೂಲು ಮಾಡಬಾರದು. ಈ ಬಗ್ಗೆ ಅಧಿಕಾರಿಗಳಿಗೆ ಒಂದು ಸರ್ಕ್ಯುಲರ್ ಕಳುಹಿಸಿ ವಾಟರ್ ರೇಟ್ ಫಿಕ್ಸ್ ಮಾಡತಕ್ಕ ಕಾಲದಲ್ಲಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದನ್ನು ತಪ್ಪಿಸುವ ದೃಷ್ಟಿಯಿಂದ ರೈತರಿಗೆ ಯಾವುದೇ ತರಹ ಹೆರಾಸ್‌ಮೆಂಟ್ ಕೊಡಕೂಡದು ಎಂದು ಹೇಳಿ ತಿಳಿಸಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಲೆಟರ್ ಆಫ್ ಕ್ರೆಡಿಟ್ ಬಗ್ಗೆ ಒಂದು ಮಾತನ್ನು ತಿಳಿಸುತ್ತೇನೆ. ಇದರಲ್ಲಿ ಕತ್ತು ಹಿಸುಕುವ ಲಸಕೆ ಮಾಡಬೇಡಿ.

ಅವನ ಸಂಬಳದಲ್ಲಿ ಹಿಡಿಯಬಹುದು. ಅದರ ಪೂರ್ಣ ಹೊಣೆಯನ್ನು ನೀವು ಹೊತ್ತಿಕೊಳ್ಳಬೇಕು. ಒಂದು ಡಿವಿಷನ್ನಿನಲ್ಲಿ ೨೫ ಎಕರೆ ಇರಲ್ಲಿ, ೫೦ ಲಕ್ಷ ಎಕರೆ ಇರಲಿ, ನೀವು ನೀರಾವರಿ ಗೋಸ್ಕರ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡಾಗ್ಗೆ ಹೆಚ್ಚು ಹಣವನ್ನು ಕೊಡುವುದಕ್ಕಾಗುವುದಿಲ್ಲ. ಈ ಮನೆಯಲ್ಲಿ ಏನು ಹಣ ಮಂಜೂರು ಮಾಡುತ್ತಾರೋ ಆ ಹಣದ ವ್ಯಾಪ್ತಿಯನ್ನು ಮೀರಿ ಆತ ಖರ್ಚುಮಾಡಿದರೆ, ಅಂತಹ ಅಧಿಕಾರಿಯನ್ನು ಬಲಿಹಾಕಿ, ನಾನು ಬೇಡವೆಂದು ಹೇಳುವುದಿಲ್ಲ.

ಮತ್ತೊಂದು ವಿಷಯ ಮಾನ್ಯ ಶ್ರೀ ನಂಜೇಗೌಡರು ಮಾತನಾಡುತ್ತಾ ಅಧಿಕಾರಿಗಳಿಗೆ ಕೆಲವು ಕಷ್ಟಗಳಿವೆ. ಒಂದುಸಾರಿ ಬಡ್ಜೆಟ್ಟಿನಲ್ಲಿ ಹಣ ಅಪ್ರೂವ್ ಆದಮೇಲೆ ಇಂತಿಂಥ ಅಧಿಕಾರಿಗಳಿಗೆ ಇಷ್ಟಿಷ್ಟು ಖರ್ಚುಮಾಡಬೇಕೆಂಬ ನಿಯಮವಿರುತ್ತದೆ. ಆ ಪ್ರಕಾರ ಅವರು ಖರ್ಚುಮಾಡಬಹುದು. ಯಾವ್ಯಾವ ಅಧಿಕಾರಿಗಳು ಕಾಂಪಿಟೆಂಟ್ ಅತಾರಿಟಿ ಎಂದು ಮೊದಲೇ ನಿರ್ಧರಿಸುವುದರಿಂದ ಅವರು ಆ ರೀತಿಯಲ್ಲಿ ಖರ್ಚುಮಾಡುವುದಕ್ಕೆ ಏನೂ ಅಭ್ಯಂತರವಿರುವುದಿಲ್ಲ. ಪುನಃ ಒಂದು ಸಾರಿ ಮಾಡಿದ ಎಸ್ಟಿಮೇಟ್‌ಗಳು ಆಯಾ ಅಧಿಕಾರಿಗಳಿಂದ ಪರಿಶೀಲನೆಮಾಡಿ ಹಣ ಮಂಜೂರಾದಮೇಲೆ ಪುನಃ ಆರ್ಥಿಕ ಶಾಖೆಗೆ ಹೋಗುವ ಪ್ರಮೇಯವೇ ಇಲ್ಲ. ಏನಾದರೂ ಆರ್ಥಿಕವಾಗಿ ಪ್ರ್ಯಾಕ್ಟಿಕಲ್ ಡಿಫಿಕಲ್ಟೀಸ್ ಬಂದರೆ ಮಾತ್ರ ಅವು ಪುನಃ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋಗಬೇಕು. ಇಲ್ಲದಿದ್ದರೆ ಅದರಲ್ಲಿ ಯಾವ ಫೈನಾಷಿಯಲ್ ಪ್ರ್ಯಾಕ್ಟಿಕಲ್ ಡಿಫಿಕಲ್ಟೀಸ್ ಇಲ್ಲವೆಂಬುದಾಗಿ ಗೊತ್ತಾದಮೇಲೆ ಪುನಃ ಅವನ್ನು ಮಂಜೂರಾತಿ ಮಾಡಲು ಎಫ್‌ಡಿ.ಗೆ ಕಳುಹಿಸುವ ಅಗತ್ಯತೆ ಏನೂ ಇಲ್ಲ. ಒಂದುಸಾರಿ ಹಣ ಬಡ್ಜೆಟ್ಟಿನಲ್ಲಿ ಸೇರಿರತಕ್ಕದ್ದು ಈ ಸಭೆಯಿಂದ ಮಂಜೂರಾದ ಮೇಲೆ ಅವರು ಫಾರ್ಮಲ್ಲಾಗಿ ಒಂದು ಇಂಟಿಮೇಷನ್ ಲೆಟರನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಬರೆಯಬೇಕು. ಈ ಐಟಂ ಬಡ್ಜೆಟ್ಟಿನಲ್ಲಿ ಇನ್‌ಕ್ಲೂಡ್ ಆಗಿದೆ. ಅದು ಮಂಜೂರಾಗಿದೆಯೆಂದು ಆರ್ಥಿಕ ಶಾಖೆಗೆ ತಿಳಿಸಬೇಕು ಅಷ್ಟೇ ಹೊರತು ಪ್ರತಿಯೊಂದು ಐಟಂಗೂ ಸಂಬಂಧಪಟ್ಟ ಇಲಾಖೆಯವರು ಪುನಃ ಆರ್ಥಿಕ ಶಾಖೆಗೆ ಹೋಗಿ ಕಾಯುವುದು ಬೇಡ. ಪ್ರತಿಯೊಂದಕ್ಕೂ ಸರ್ಕಾರವನ್ನು ಟೀಕೆ ಮಾಡುವುದು ಒಂದೇ ಕೆಲಸವಲ್ಲ. ನಾವು ಈ ವಿಚಾರವಾಗಿ ಪಿ.ಎ.ಸಿ.ಯಲ್ಲಿ ಕೂತು ಎಷ್ಟೋಸಾರಿ ಚರ್ಚೆ

ಮಾಡಿದ್ದೇವೆ. ಅಲ್ಲಿ ಅನೇಕ ವಿಚಾರಗಳನ್ನು ಕೇಳಿದ್ದೇವೆ, ಸಾಮಾನ್ಯವಾಗಿ ಒಂದು ಟೆಂಡರ್ ಅಕ್ಸೆಪ್ಟ್ ಆಗುವುದಕ್ಕೆ ಆರು ತಿಂಗಳು. ಅದು ಪಿ.ಡಬ್ಲ್ಯು.ಡಿ.ಗೆ ಹೋಗಿ ಅಲ್ಲಿ ತಿಂಗಳಾನುಗಟ್ಟಲೆ ಕಾಲಹರಣವಾಗಿ ಅಂತಿಮವಾಗಿ ಟೆಂಡರ್ ಅಕ್ಸೆಪ್ಟ್ ಆಗದೇ ಇರುವ ಪ್ರಸಂಗಗಳು ಎಷ್ಟೋ ಇವೆ. ಕೆಲವು ಸಂದರ್ಭಗಳಲ್ಲಿ ಟೆಂಡರ್ ಕೊಟ್ಟು ಮೂರು ತಿಂಗಳು ಆದಮೇಲೆ ಪುನಃ ಟೆಂಡರ್ ಕರೆಯುವುದು—ಹೀಗಾಗಿ ಸಾಕಷ್ಟು ಅಂದಾಜುಗಳು ಪುನರ್ವಿಮರ್ಶೆ ಮಾಡತಕ್ಕದ್ದರಲ್ಲಿ ರೇಟ್ ಎಸ್ಕಲೇಷನ್ ಆಗುವುದಕ್ಕೆ ಅನಾವಶ್ಯಕವಾದ ಕಾರಣಗಳು ಉಂಟಾಗುತ್ತವೆಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಇದರಲ್ಲಿ ಇನ್ನೂ ಕೆಲವು ಮಾರ್ಪಾಟುಗಳು ಆಗಬೇಕು. ಏಕೆಂದರೆ ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ನಮ್ಮ ಸಿಸ್ಟಂನಲ್ಲಿ ಇಂತಹ ಬದಲಾವಣೆಯಾಗಿದೆ. ಕೇವಲ ಲೆಟರ್ ಆಫ್ ಕ್ರೆಡಿಟ್ ಹಾಕಿ ಏನೋ ಸೂಪರ್ ಅಧಿಕಾರಿಗಳು ಇದ್ದ ಹಾಗೆ ಕೆಲವು ಅಧಿಕಾರಿಗಳು ಇದ್ದಾರೆ. ಆದರೆ ಅವರು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಅಸಿಸ್ಟೆಂಟ್ ಇಂಜನಿಯರ್ ಜೂನಿಯರ್ ಇಂಜಿನಿಯರಿಗೆ ಹೇಳುವುದು, ಜೂನಿಯರ್ ಇಂಜನಿಯರ್ ಎಗ್ಸಿಕ್ಯುಟಿವ್ ಇಂಜನಿಯರಿಗೆ ಹೇಳುವುದು, ಎಗ್ಸಿಕ್ಯುಟಿವ್ ಇಂಜನಿಯರ್ ಸೂಪರಿಂಟೆಂಡಿಂಗ್ ಇಂಜನಿಯರ್ ಹೇಳುವುದು ಸೂಪರಿಂಟೆಂಡಿಂಗ್ ಇಂಜನಿಯರ್ ಚೀಫ್ ಇಂಜನಿಯರರ ಅವರಿಗೆ ಹೇಳುವುದು—ಹೀಗೆ ಅವರ ಕೆಲಸದಲ್ಲಿ ತಡವಾಗುವುದೇ ಹೆಚ್ಚು. ಈ ರೀತಿ ಕಾಲಹರಣಕ್ಕಾಗಿ ಮಾಡುವ ಖರ್ಚು ವೆಚ್ಚಗಳನ್ನು ಕಡಿಮೆ ಮಾಡಬೇಕು. ಇವತ್ತು ನಿಮ್ಮ ಸ್ಟೇಟ್ ಕಾರ್ಪೊರೇಷನ್ ವಿಷಯವಾಗಿ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಅವುಗಳಿಂದ ನಮ್ಮ ಸರ್ಕಾರಕ್ಕೆ ಎಷ್ಟು ಲಾಸ್ ಆಗುತ್ತಿದೆಂಬ ಬಗ್ಗೆ ಮಾನ್ಯ ಮಂತ್ರಿಗಳು ಮೊನ್ನೆ ಉತ್ತರ ಕೊಟ್ಟಿದ್ದಾರೆ. ಆ ಸಂಸ್ಥೆಗಳನ್ನು ಚೆನ್ನಾಗಿ ಬೆಳೆಸಬೇಕೆಂಬುದೇನೋ ನಿಜ. ಆದರೆ ಅದರಲ್ಲಿ ಕಂಟ್ರಾಕ್ಟರ್ಸ್ ಅವರ ಒಂದು ಒತ್ತಡ ಹೆಚ್ಚಾಗಿ ಇರಬಾರದು. ಅದು ದಿನೇ ದಿನೇ ಕಡಿಮೆಯಾಗಬೇಕು. ಈಗ ನಮ್ಮ ರಾಜ್ಯದಲ್ಲಿ ೧೭—೧೮ ಜನ ಚೀಫ್ ಇಂಜನಿಯರ್ ಇದ್ದಾರೆ. ಅವರಿಗೆ ಕೆಲಸವಿಲ್ಲ. ರೀ ಆರ್ಗನೈಸೇಷನ್ ಆಗುವುದಕ್ಕೆ ಮುಂಚೆ ಅನೇಕ ಟ್ರಾನ್ಸ್‌ಫರ್‌ಗಳ ಬಗ್ಗೆ ಪ್ರಸ್ತಾಪ ಮಾಡಿದ್ದು, ಈಗ ಪುನಃ ಅವುಗಳ ಬಗ್ಗೆ ಚರ್ಚೆ ಮಾಡತಕ್ಕದ್ದು. ಯಾರಾದರೂ ಒಬ್ಬ ಚೀಫ್ ಇಂಜನಿಯರನ್ನು ಮತ್ತು ಸೂಪರಿಂಡೆಂಟಿಂಗ್ ಇಂಜನಿಯರುಗಳನ್ನು ನೇಮಕಮಾಡಿ ಈ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಪೂರ್ಣ ಹೊಣೆಯನ್ನು ಹೊತ್ತು ಹೆಚ್ಚು ಜವಾಬ್ದಾರಿಯುತವಾಗಿ ಕೆಲಸ ಮಾಡ ತಕ್ಕದ್ದು. ಇಲಾಖೆಯಲ್ಲಿ ನಷ್ಟ ಉಂಟಾಗದಂತೆ ಕೆಲಸಮಾಡತಕ್ಕದ್ದು. ಈ ಮೂರನ್ನೂ ಮಾಡಿದರೆ ಬಹುಶಃ ನಾವು ಕ್ರಮೇಣ ಕಂಟ್ರಾಕ್ಟರ್ಸ್ ಒತ್ತಡವನ್ನು ಕಡಿಮೆ ಮಾಡಿಕೊಳ್ಳಬಹುದು. ಒಟ್ಟಿನಲ್ಲಿ ಈ ಕಾರ್ಪೊರೇಷನ್ ಸಂಸ್ಥೆಗಳನ್ನು ಹೆಚ್ಚು ಉತ್ತೇಜನಕರವಾಗಿ ಬೆಳೆಸಬೇಕು.

ಕೊನೆಯದಾಗಿ ಒಂದು ಮಾತು. ಏಕೆಂದರೆ, ಡಿಸಿಪ್ಲಿನರಿ ಆಕ್ಷನ್ ಬಗ್ಗೆ ನಾನು ಮೊದಲೇ ಕೆಲವು ವಿಷಯಗಳನ್ನು ಹೇಳಬೇಕಾಗಿತ್ತು. ಬೆಂಗಳೂರು ಡಿವಿಷನ್ ಒಂದರಲ್ಲಿ ಸುಮಾರು ೧೫ ರಿಂದ ೨೦ ಲಕ್ಷ ರೂಪಾಯಿಗಳಷ್ಟು ಸ್ಟೀಲ್ ಕಡಿಮೆಯಾಗಿದೆಯೆಂದು ನಾನು ಕೇಳಿದ್ದೇನೆ. ಹಾಸನಕ್ಕೆ ಸಂಬಂಧಪಟ್ಟ ಒಂದು ಘಟನೆಯಾದಮೇಲೆ ಈ ಸಭೆಯಲ್ಲಿ ಅದರ ಬಗ್ಗೆ ಚರ್ಚೆಯೂ ಆದಮೇಲೆ ಬೇರೆ ಬೇರೆ ಕಡೆಗಳಿಂದ ಇಂತಹ ವರ್ತಮಾನ ಬಂದಿದೆ. ಹೆಚ್ಚಿನ ಪ್ರಮಾಣದಲ್ಲಿ ಸ್ಟೀಲ್ ಮತ್ತು ಸಿಮೆಂಟ್ ಷಾರ್ಟೇಜ್ ಬಂದಿದೆಯೆಂದು ನಾನು ಕೇಳಿದ್ದೇನೆ. ನನಗೆ ಕರೆಕ್ಟ್ ಲೆಕ್ಕ ಗೊತ್ತಿಲ್ಲ ಇನ್ನು ಈ ಸಭೆಯಲ್ಲಿ ಕೇಳಿದರೆ. ಆ ವಿಚಾರವನ್ನು ವಿಜಿಲೆನ್ಸ್ ಕಮಿಷನ್ನಿಗೆ ರೆಫರ್ ಮಾಡಿದ್ದೇವೆಂದು ಹೇಳುತ್ತಾರೆ ಎಷ್ಟೆಷ್ಟು ಸ್ಟೀಲ್ ಮತ್ತು ಸಿಮೆಂಟ್ ಕಡಿಮೆಯಾಗಿದೆಯೋ ಅದನ್ನು ತನಿಖೆಮಾಡುತ್ತೇವೆಂದು ತಿಳಿಸಿದ್ದಾರೆ. ನಾನು ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಪ್ರಶ್ನೆಯನ್ನೂ ಸಹ ಕಳುಹಿಸಿದ್ದೇನೆ. ಉತ್ತರ ಇನ್ನೂ ಬಂದಿಲ್ಲ. ಯಾರ್ಯಾರು ಕಂಟ್ರಾಕ್ಟರ್ಸ್ ಮತ್ತು ಅಧಿಕಾರಿಗಳು ಕಾರಣರು ಇದ್ದಾರೆ, ಅಂತಹವರ ಮೇಲೆ ತಾವು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬ ಅಂಶಗಳನ್ನು ತಮ್ಮ ಉತ್ತರದಲ್ಲಿ ನನಗೆ ತಿಳಿಸಬೇಕು. ಇದರಲ್ಲಿ ನೀವೂ ಸಹ ಆಪಾದನೆಗೆ ಗುರಿಯಾದಂಥ ವ್ಯಕ್ತಿ ಎಂಬುದಾಗಿ ಈ ಸಭೆಯಲ್ಲಿ ಸಾಕಾದಷ್ಟು ಚರ್ಚೆಯಾಗಿದೆ. ಬೆಂಗಳೂರು ಡಿವಿಜನ್ನಿನಲ್ಲಿರತಕ್ಕ ಎಲ್ಲಾ ಸಿಮೆಂಟ್, ಕಬ್ಬಿಣ ಉಕ್ಕು—ಇವು ಕಡಿಮೆಯಾಗುವುದಕ್ಕೆ ಯಾರು ಹೊಣೆ? ಇದು ಯಾರಿಂದಾಯಿತು, ಯಾರ್ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಅಧಿಕಾರಿಗಳ ತಪ್ಪು, ಯಾವುದೇ ಇರಲಿ, ಅದರ ಬಗ್ಗೆ ಪೂರ್ಣ ಮಾಹಿತಿ ಕೊಡಬೇಕು.

ಕೊನೆಯದಾಗಿ ಹೇಳುವುದಾದರೆ, ಈ ಒಂದು ಇಲಾಖೆ ಏನಿದೆಯೋ ಇದು ಮೊದಲಿನಿಂದಲೂ ಒಳ್ಳೆಯ ಗೌರವವನ್ನು ಹೊಂದಿದ್ದಂಥ ಇಲಾಖೆ. ಮೈಸೂರಿನ ಇಂಜನಿಯರ್ಸ್ ಅಂದರೆ ಹೆಚ್ಚಿನ ಮನ್ನಣೆ ದೊರಕುತ್ತಿತ್ತು. ಈಗ ಆ ಒಂದು ಕಾಲ ಬದಲಾವಣೆಯಾಗುತ್ತಿದೆ. ಅಷ್ಟೊಂದು ಘನತೆ, ಗೌರವ ಹೊಂದಿದ್ದಂಥ ಈ ಇಲಾಖೆ ಈಗ ಕುಸಿದುಬೀಳತಕ್ಕ ಒಂದು ಸನ್ನಿವೇಶವನ್ನು ನಾವು ಕಾಣುತ್ತಿದ್ದೇವೆಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಈ ಇಲಾಖೆ ಇನ್ನು ಮುಂದಾದರೂ ಒಳ್ಳೆಯ ಗೌರವವನ್ನು ತರತಕ್ಕ ರೀತಿಯಲ್ಲಿ ಮಾರ್ಪಾಟು ಆಗಬೇಕು. ಬಹು ಮುಖ್ಯವಾಗಿ ನಾವು ಈ ಸಭೆಯಲ್ಲಿ ಕೊಟ್ಟಿರುವ ಎಲ್ಲ ಸಲಹೆಗಳನ್ನೂ ಕಾರ್ಯರೂಪಕ್ಕೆ ತರುವುದರಲ್ಲಿ ಹೆಚ್ಚಿಗೆ ಸರ್ಕಾರದವರು ಸಹಾಯಮಾಡಬೇಕೆಂದು ತಿಳಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಡಿಮ್ಯಾಂಡ್ ನಂ. ೧೫, ೧೯, ೨೭, ೫೩, ೫೪ ಮತ್ತು ೬೦—ಇವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ಪ್ರಯತ್ನಮಾಡುತ್ತಾ ಇದ್ದೇನೆ. ನಮ್ಮ ಹಣಕಾಸಿನ ಸಚಿವರು ಈ ಸಂದರ್ಭದಲ್ಲಿ ಇಲ್ಲದಿದ್ದರೆ ಬಹಳ ಚೆನ್ನಾಗಿತ್ತು ಎಂಬುದಾಗಿ ನನಗನ್ನಿಸುತ್ತದೆ. ಹಣಕಾಸಿನ ಸಚಿವರು ಬಹುಶಃ ಈ ಇಲಾಖೆಯನ್ನು ಅವರ ಕೈಲಿ ತೆಗೆದುಕೊಂಡಮೇಲೆ ಅವರು ಈ ದೇಶದಲ್ಲಿ ರೈತರು ಏನಿದ್ದಾರೆಯೋ, ಅದರಲ್ಲಿಯೂ ಹಳ್ಳಿಗಳಲ್ಲಿ ವಾಸಮಾಡುತ್ತಾ ಇರುವ ಜನರು ಎಷ್ಟರಮಟ್ಟಿಗೆ ಬಹಳ ಕಷ್ಟದಿಂದ ಜೀವನ ಮಾಡುತ್ತಿದ್ದಾರೆನ್ನುವುದನ್ನು ಸರಿಯಾಗಿ ಅರ್ಥಮಾಡಿಕೊಂಡಂತೆ ನನಗೆ ಕಂಡುಬಂದಿಲ್ಲ. ಪ್ರತಿಸಾರಿಯೂ ಇವರ ಒಂದು ಬಡ್ಜೆಟ್ ಭಾಷಣದಲ್ಲಿ ನೋಡಿದರೆ, ನಿವೃತ್ತ ಅಧಿಕಾರಿಗಳು ಕೇಳಲಿ, ಕೇಳದೇ ಹೋಗಲಿ, ರಿಟೈರ್ ಆಗಿ ಮನೆಯಲ್ಲಿ ಕೂತುಕೊಂಡಿರುವ ಕೆಲವು ಅಧಿಕಾರಿಗಳಿಗೆ ಹಾಗೂ ನೌಕರರಿಗೆ ತಿಂಗಳಿಗೆ ಸಾವಿರಾರು ರೂಪಾಯಿಗಳಷ್ಟು ಮನೆಬಾಡಿಗೆಗಳನ್ನು ಪಡೆದುಕೊಳ್ಳುತ್ತಿದ್ದರೂ ಅವರಿಗೆ ಇಷ್ಟಿಷ್ಟು ಈ ವರ್ಷ ಹೆಚ್ಚಿನ ತುಟ್ಟಿಭತ್ಯವನ್ನು ಕೊಡುತ್ತೇವೆಂದು ವಾಲಂಟರಿಯಾಗಿ ಹೇಳುವುದು, ಸರ್ಕಾರದ ಅಧಿಕಾರಿಗಳು ಹಾಗೂ ನೌಕರರು ಸ್ವಲ್ಪ ಆಜಿಟೇಷನ್ ಮಾಡಿದರೆ ಸಾಕು, ಅದೇನಾದರೂ ವರ್ತಮಾನ ಪತ್ರಿಕೆಗಳಲ್ಲಿ ಬಂದರೆ ಸಾಕು, ತಕ್ಷಣವೇ ಉಗಾದಿ ಉಡುಗೊರೆ, ದೀಪಾವಳಿ ಉಡುಗೊರೆ ಎಂಬುದಾಗಿ ಪ್ರತಿವರ್ಷವೂ ಕೊಡುವುದೇ ಜಾಸ್ತಿಯಾಗಿದೆ. ಅದರ ಬಗ್ಗೆ ಬಹಳ ಧಾರಾಳ ಮನಸ್ಸಿನಿಂದ ತಾವು ಅವರಿಗೆ ಸಹಾಯಮಾಡುತ್ತಿದ್ದಾರೆ. ಆದರೆ ರೈತರ ಹಣೆಯಬರಹ ಬರುಬರುತ್ತಾ ಏತಕ್ಕೆ ಈ ರೀತಿ ಆಗುತ್ತಿದೆಯೆಂಬುದನ್ನು ನಾವೆಲ್ಲರೂ ಬಹಳವಾಗಿ ಯೋಚನೆಮಾಡಬೇಕಾದ ವಿಷಯವಾಗಿದೆ. ಒಂದು ಉದಾಹರಣೆಯನ್ನು ನಾನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಆರ್. ಸಿ ರೋಡ್ಸ್ ಎಷ್ಟರಮಟ್ಟಿಗೆ ಆಗುತ್ತಿವೆಯೆಂಬುದನ್ನು ತೆಗೆದುಕೊಳ್ಳೋಣ. ಮಾನ್ಯ ಶ್ರೀ ಚನ್ನಬಸಪ್ಪನವರು ಬಹಳ ದೊಡ್ಡದೊಡ್ಡ ಸ್ಕೀಮುಗಳನ್ನು ಮಾಡುವಂತೆ ಎಲ್ಲರನ್ನೂ ಒಂದು ರೂಮಿನಲ್ಲಿ ಕೂಡಿಹಾಕಿ ಲಿಸ್ಟ್‌ಗಳನ್ನು ತಯಾರುಮಾಡಿದ್ದೇ ಮಾಡಿದ್ದು. ಅಲ್ಲಿ ಹೋಗಿ ನೋಡಿದರೆ, ಯಾವಾಗಲು ಮಾಮೂಲಾಗಿ ಇದ್ದಂಥ ಕಡೆ ಹಾಕಿರತಕ್ಕ ರಸ್ತೆಗಳನ್ನು ಪುನಃ ನಾವು ಹೊಸದಾಗಿ ಮಾಡುತ್ತೇವೆಂದು ಪ್ರಯತ್ನಮಾಡಿ, ಅಲ್ಲಿ ಅರ್ಧಂಬರ್ಧ ರಸ್ತೆ ಕೆಲಸಗಳನ್ನು ಮಾಡಿ ಕೈಬಿಟ್ಟಿರುವ ಪ್ರಸಂಗಗಳನ್ನು ನಾವು ಕಣ್ಣಾರೆ ನೋಡಬಹುದು. ಇವತ್ತು ಅವನು ಸರಿಯಾಗಿ ಪುನರ್ನಿರ್ಮಾಣ ಮಾಡುವುದಕ್ಕೆ ಆಗದೇ ಇರುವ ಒಂದು ಪರಿಸ್ಥಿತಿಗೆ ಬಂದಿದೆ. ಇದಕ್ಕೇನು ಹೇಳುತ್ತೀರಿ ? ಇದರ ಬಗ್ಗೆ ಪ್ರಶ್ನೆ ಕೇಳಿದರೆ, ಆ ಕಡೆ ಬರಗಾಲ ಬಂತು, ಅದಕ್ಕಾಗಿ ಈ ಕಡೆಯ ಕೆಲಸ ನಿಂತುಹೋಯಿತೆಂದು ಹೇಳುತ್ತಾರೆ. ಮೈದಾನದಲ್ಲಿ ಖರ್ಚುಮಾಡುವ ಹಣವನ್ನು ಹೆಚ್ಚುಮಾಡಿ ಈ ಆರ್. ಸಿ. ರಸ್ತೆಗಳಿಗಾಗಿ ಮಾಡುವ ಖರ್ಚನ್ನು ಕಡಿಮೆಮಾಡಿದ್ದೇವೆಂದು ಹೇಳಬಹುದು. ಮಲೆನಾಡಿನಲ್ಲಿ ಜನ ಯಾವರೀತಿಯಾಗಿ ಜೀವನಮಾಡುತ್ತಾ ಇದ್ದಾರೆಂಬುದನ್ನು ಮಾನ್ಯ ಶ್ರೀ ಘೋರ್ಪಡೆಯವರು ಮಳೆಗಾಲದಲ್ಲಿ ಅಲ್ಲಿ ಪ್ರವಾಸ ಮಾಡಿದರೆ ಗೊತ್ತಾಗುತ್ತದೆ. ಈ ರೀತಿ ಇದರಲ್ಲಿ ಒಂದು ಬಿಗಿ ಹಿಡಿತ ಹಿಡಿದು ಪ್ರತಿಸಾರಿಯೂ ಲೆಟರ್ ಆಫ್ ಕ್ರೆಡಿಟ್ ಕೊಡುವುದು ಪ್ರಾರಂಭವಾಗಿದೆ. ಅದು ಸರಿಯಾಗಿ ಹೋಗಿ ಇಲಾಖೆ ತಲುಪುವುದೇ ಕಷ್ಟ. ಅದು ಎಷ್ಟೋ ಲ್ಯಾಪ್ಸ್ ಆಗುತ್ತಿದೆ. ಎಷ್ಟೋ ಸಾರಿ ಎಸ್ಟಿಮೇಟ್‌ಗಳು ಮಂಜೂರಾಗಿರುವುದಿಲ್ಲ, ಟೆಂಡರ್ ಅಕ್ಸೆಪ್ಟ್ ಆಗಿರುವುದಿಲ್ಲ. ನಾವು ಮಂಜೂರು ಮಾಡಿಕೊಡುತ್ತೇವೆಂದು ಇವರು ಹೇಳುವ ಮಾತೇ ಇಲ್ಲ.

ಹೀಗೆ ಆ ಎನ್. ಜಿ. ಒ. ಗಳಿಗೆ ೫ ಕೋಟಿ ಹಣವನ್ನು ತೆಗೆದಿಟ್ಟಿದ್ದೇವೆಂದು ಹೇಳುತ್ತಾ ಹಳ್ಳಿ ಜನರ ಅನುಕೂಲಕ್ಕೆ ಹಣವಿಲ್ಲ ಎಂದು ಹೇಳುತ್ತಿದ್ದರೆ ನಾವು ಅಲ್ಲಿ ಆ ಹಳ್ಳಿ ಜನರಿಗೇನು ಉತ್ತರ ಹೇಳುವುದಕ್ಕೂ ಶಕ್ತಿ ಇರುವುದಿಲ್ಲ. ಇದೇ ರೀತಿಯಾಗಿ ಸರ್ಕಾರದವರು ಹೇಳುತ್ತ ಬಂದುದರಿಂದ ಕಳೆದ ೨—೩ ವರ್ಷಗಳಿಂದಲೂ ನಾವು ಎಷ್ಟೇ ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡಿದ್ದಾಗ್ಯೂ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಮಾತ್ರ ಆಗಲಿಲ್ಲ, ಆದರೆ ನಮ್ಮ ಸಚಿವರುಗಳು ಧೈರ್ಯವಾಗಿ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸುವ ತನಕ ಯಾವ ಒಂದು ಹೊಸಕಾಮಗಾರಿಯನ್ನೂ ತಗೆದು ಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಸಂಬಳ ಸಾರಿಗೆಗಳನ್ನು ಮಾತ್ರ ಹೆಚ್ಚಿಸಲು ಇಲ್ಲಿ ಇವರಿಗೆ ಅವಕಾಶವಾಗಿದೆ. ಹೀಗೆ ಆಗುತ್ತಿರುವುದರಿಂದ ನಾನಿಲ್ಲಿ ಈ ಸರ್ಕಾರದ ಮುಂದೆ ಏನು ಹೇಳಿದರೂ ಪ್ರಯೋಜನವಿಲ್ಲವೆಂದು ತಿಳಿದು ನಾನು ಇಲ್ಲಿ ಪ್ರಶ್ನೆ ವಗೈರೆಗಳೇನನ್ನೂ ಇತ್ತೀಚೆಗೆ ಕಳುಹಿಸುವುದನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೇನೆ. ಕೇವಲ ಮೂರು ಲಕ್ಷ ರೂಪಾಯಿಗಳಲ್ಲಿ ಆಗತಕ್ಕ ಹೊನ್ನೆಕೊಡಗೆ ರಸ್ತೆಯನ್ನು ಮಾಡುತ್ತೇವೆಂದು ಅದಕ್ಕೆ ಹಣವನ್ನು ಮೊದಲನೇ ವರ್ಷ ಒದಗಿಸಿ ಅಲ್ಲಿ ಫಸ್ಟ್‌ಸ್ಟೇಜ್ ಕೆಲಸ ಮುಗಿಸುತ್ತೇವೆಂದು ಅದು ಹಾಗೇ ನಿಂತು ಹೋಗಿದೆ. ಅದೇ ರೀತಿ ಶೃಂಗೇರಿ ಮಿಯಾರ್‌ಘಾಟ್ ರಸ್ತೆ ಕೆಲಸವನ್ನು ಮೂರು ಸ್ಟೇಜುಗಳಲ್ಲಿ ಮಾಡುತ್ತೇವೆಂದು ಹೇಳಿ ಅಲ್ಲಿ ಫಸ್ಟ್‌ಸ್ಟೇಜ್ ಕೆಲಸವಾಗಿ ಅದೂ ಕೂಡ ಹಾಗೆ ಉಳಿದಿದೆ. ಕಳೆದ ವರ್ಷ

ಇದಕ್ಕೆ ೧೫ ಸಾವಿರ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿದ್ದರು. ಆ ಹಣವನ್ನೂ ಸಹಾ ಖರ್ಚು ಮಾಡಲಿಲ್ಲ, ಈ ವರ್ಷ ಆ ಬಗ್ಗೆ ಏನು ಹಣವನ್ನೇ ತೆಗೆದಿಟ್ಟಿಲ್ಲ ತೆಗೆದಿಟ್ಟಿದ್ದ ಹಣವನ್ನೂ ಕೂಡ ಈ ವರ್ಷ ವಿತಿಡ್ರಾ ಮಾಡಿಕೊಂಡಿದ್ದಾರೆ. ಹೀಗೆ ನಮ್ಮ ಭಾಗದಲ್ಲಿ ಆಗಬೇಕಾದ ಕಾರ್ಯಗಳನ್ನು ಒಂದೊಂದನ್ನಾಗಿ ಕೈಬಿಡುವುದಕ್ಕೆ ಹೊರಟಿದ್ದಾರೆ. ಹೀಗಾದರೆ ಇನ್ನು ಇಲ್ಲಿ ಹೊಸ ಕೆಲಸಗಳನ್ನು ಸೇರಿಸತಕ್ಕ ಮಾತಿನಲ್ಲಿ ಚಿಂತೂ? ಅಂತೂ ಹೀಗೆ ಒಂದಲ್ಲಾ ಒಂದು ಕಾರಣ ಹೇಳುತ್ತ ನಮ್ಮಲ್ಲಿ ಈ ಪಿಡಬ್ಲ್ಯೂಡಿ. ಬಾಬಿನಲ್ಲಿ ಒಂದು ಕೆಲಸಗಳಾಗಲಿಲ್ಲ. ಈ ಹಿಂದೆ ಈ ಇಲಾಖೆಯಲ್ಲಿ ಈ ಕಾಮಗಾರಿಗಳನ್ನು ನಡೆಸತಕ್ಕ ಬಗ್ಗೆ ಎಗ್ಜಿಕ್ಯುಟೀವ್ ಇಂಜಿನಿಯರಿಗೂ ಮತ್ತು ಅಸಿಸ್ಟೆಂಟ್ ಇಂಜಿನಿಯರುಗಳಿಗೂ ಕೆಲವು ಅಧಿಕಾರಿಗಳನ್ನು ಕೊಟ್ಟಿದ್ದರು. ಆದರೆ ಇತ್ತೀಚೆಗೆ ಅದನ್ನು ಬದಲಾವಣೆ ಮಾಡಿದ್ದರಿಂದ ಅಲ್ಲಿ ಅಷ್ಟಿಷ್ಟು ನಡೆಯುತ್ತಿದ್ದ ಕೆಲಸಗಳೂ ಸಹಾ ನಡೆಯದಂತಾಯಿತು. ಈಗ ಈ ಇಂಜಿನಿಯರಿಂಗ್ ಇಲಾಖೆಯಲ್ಲಿ ಅಧಿಕಾರಿಗಳಿಗೆ ಇದ್ದ ಅವರನ್ನು ಕಡಿಮೆ ಮಾಡಿದ್ದಾರೆ. ಇದರಿಂದ ಈಗ ಏನಾಗುತ್ತಿದೆ ಎಂದರೆ ಪ್ರತಿಯೊಂದು ಎಷ್ಟಿಮೇಟ್ಗಳೂ ಇಲ್ಲಿಗೆ ಬಂದು ಅವು ಅಪ್ರೂವಾಗಿ ಮತ್ತೆ ವಾಪಸ್ ಬರುವವೇಳೆಗೆ ಅಲ್ಲಿ ಕೆಲಸವನ್ನು ಪ್ರಾರಂಭ ಮಾಡುವ ವೇಳೆಗೆ ಒಂದು ಲಕ್ಷಕ್ಕೆ ಮಾಡಿದ್ದ ಅಂದಾಜು ಮತ್ತೆ ಎರಡು ಲಕ್ಷಕ್ಕೆ ರಿವೈಜಾಗಬೇಕಾಗುತ್ತದೆ. ಕಾರಣ ಈ ಫಾರ್ಮಾಲಿಟೀಸನ್ನು ಅಬ್‌ಸರ್ವ್ ಮಾಡಿ ಕಳುಹಿಸುವುದರಲ್ಲಿ ಆಗತಕ್ಕ ವಿಧಾನವೇ ಕಾರಣ. ಇಂಥ ಒಂದು ಪ್ರಸೀಜರನ್ನು ಜಾರಿಯಲ್ಲಿ ತಂದಿದ್ದಾರೆ. ನಮ್ಮಲ್ಲಿ ನಿಜವಾಗಿಯೂ ಕಾಮಗಾರಿಗಳನು ಕಾರ್ಯಗತಮಾಡಬೇಕೆಂಬ ನಿಸ್ಪೃಹ ಅಧಿಕಾರಿಗಳಿದ್ದಾರೆ. ಆದರೆ ಅವರಿಗೆ ಅಧಿಕಾರವಿಲ್ಲ ಅದಕ್ಕಾಗಿ ನಾನು ಹೇಳುತ್ತಿರುವುದು ದಕ್ಷರೂ ನಿಸ್ಪೃಹರೂ ಆದಂಥವರಿಗೆ ಸಾಕಷ್ಟು ಅಧಿಕಾರವನ್ನು ಕೊಡಿ ಎಂದು ಹೇಳುತ್ತಿದ್ದೇನೆ. ಅವರಿಗೆ ಅಧಿಕಾರವನ್ನು ಕೊಟ್ಟು ತಮ್ಮಲ್ಲಿ ಸಾಕಷ್ಟು ಇನ್‌ಸ್ಪೆಕ್ಷನ್ ಸಿಬ್ಬಂದಿ ಇರುವುದರಿಂದ—ಸಾಕಷ್ಟು ಜೀಪುಗಳಿರುವುದರಿಂದ ಅದರ ಬಗ್ಗೆ ನಿಗಾ ಇಡಿ ಅವರು ತಪ್ಪು ಮಾಡಿದರೆ ಅಂಥವರಿಗೆ ಶಿಕ್ಷೆ ಮಾಡಿ ಎಂದು ಹೇಳುತ್ತೇನೆ. ನಮ್ಮಲ್ಲಿ ವಿಶೇಷ ಮಳೆ ಬೀಳುತ್ತಿರುವುದರಿಂದ ಅಲ್ಲಿ ಏನಾದರೂ ಒಂದು ಮಣ್ಣಿನ ರಸ್ತೆಯನ್ನು ಮಾಡಿದ್ದು ಅದಕ್ಕೆ ಸಕಾಲಕ್ಕೆ ಟಾರ್ ವಗೈರೆ ಮಾಡದಿದ್ದರೆ ಅದು ಮಳೆಯಿಂದ ಕೊಚ್ಚಿಹೋದಾಗ ಯಾರೋ ಕೆಲವರು ಆ ಬಗ್ಗೆ ಮೇಲಕ್ಕೆ ಒಂದು ಅರ್ಜಿಯನ್ನು ಇಂಜಿನಿಯರ ಮೇಲೆ ಬರೆದರೆ—ಅಲ್ಲೇನೋ ದಗಾ ಆಗಿಬಿಟ್ಟಿದೆ, ಅವನು ಹಣವನ್ನೆಲ್ಲಾ ತಿಂದು ಹಾಕಿದ್ದಾನೆಂಬ ಸತ್ಯಸಂಧ ಅಧಿಕಾರಿಗಳಿಗೆ ಕಿರುಕುಳವನ್ನು ಕೊಡುವುದರಿಂದ ಅವರು ಹೆದರಿ ಯಾವ ಕೆಲಸವನ್ನು ಧೈರ್ಯದಿಂದ ನಡೆಸದೆ ಮನೆಯಲ್ಲಿ ಕುಳಿತಿದ್ದಾರೆ. ಸತ್ಯಸಂಧರ ಬಗ್ಗೆ ಹೀಗಾಗಿದ್ದರೆ ಇನ್ನೊಂದು ಕಡೆ ರಾಜ್ಯದಲ್ಲಿ ಯಾವ ಅಧಿಕಾರಿಗಳು ಮಾಡಬಾರದ್ದನ್ನು ಮಾಡುತ್ತಾರೊ ಅಂಥವರಿಗೆ ಎಲ್ಲ ಪ್ರೋತ್ಸಾಹಗಳೂ ದೊರೆಯುತ್ತಿರುವುದರಿಂದ ಅನೇಕ ಸತ್ಯಸಂಧ ಅಧಿಕಾರಿಗಳೂ ಕೂಡ ತಾವೂ ಇವರಂತೆಯೇ ಮಾಡಬೇಕೆಂಬ ಒಂದು ಕೆಟ್ಟ ಭಾವನೆ ಅವರಲ್ಲಿ ಮೂಡುವಂತೆ ಮಾಡಲು ಅದಕ್ಕೆ ನಾವೆಲ್ಲ ಜವಾಬ್ದಾರರಾಗಿದ್ದೇವೆಂದು ಹೇಳಬೇಕಾಗುತ್ತದೆ. ಅಂತೂ ಹೀಗೆ ಸತ್ಯಸಂಧರಿಗೆ ಕಿರುಕುಳ ಮಾಡಬಾರದ್ದನ್ನು ಮಾಡತಕ್ಕವರಿಗೆ ಪ್ರೋತ್ಸಾಹಗಳು ದೊರೆಯುತ್ತಿರುವುದರಿಂದ ನಮ್ಮಲ್ಲಿ ಈಗ ಸತ್ಯಸಂಧ ಅಧಿಕಾರಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇನ್ನಾದರೂ ಸರ್ಕಾರದವರು ಈ ವಿಚಾರದಲ್ಲಿ ಪರಿಶೀಲನೆ ಮಾಡಿ ಯಾರು ಸತ್ಯಸಂಧತೆಯಿಂದ ಕೆಲಸ ಮಾಡುತ್ತಾರೋ ಅಂಥವರನ್ನು ಅದೇ ಸ್ಥಳದಲ್ಲಿಟ್ಟು ಅವರಿಗೆ ಹೆಚ್ಚಿನ ಫೈನಾನ್ಷಿಯಲ್ ಪವರನ್ನು ಕೊಟ್ಟು ಕೆಲಸಗಳು ಸರಾಗವಾಗಿ ನಡೆಯುವಂತೆ ಮಾಡಬೇಕು. ಇದನ್ನು ಮಾಡದಿದ್ದರೆ ಸರ್ಕಾರದವರು ಮಾಡತಕ್ಕ ಪ್ರತಿಯೊಂದು ಅಂದಾಜು ರಿವೈಜಾಗುತ್ತಾ ಒಂದಕ್ಕೆ ಎರಡರಷ್ಟು ಖರ್ಚಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಮಲ್ಲಿ ಸಿದ್ದರಮಟ್ಟಿ ಹೊಳೆ ಕಾಮಗಾರಿಗೆ ಮೊದಲು ಅಂದಾಜು ಮಂಜೂರಾದದ್ದು ೯೦ ಸಾವಿರಕ್ಕೆ. ಅದು ಇಲ್ಲಿಗೆ ಬಂದು ಅಪ್ರೂವಾಗುವುದರೊಳಗೆ ಒಂದು ಲಕ್ಷಕ್ಕೇರಿತು. ಅದಾದನಂತರ ಅದಕ್ಕೆ ಟೆಂಡರನ್ನು ಕರೆಯುವುದರೊಳಗೆ ಅದರ ವೆಚ್ಚ ಒಂದೂವರೆ ಲಕ್ಷಕ್ಕೆ ಏರಿತು ಆಗ ಸರ್ಕಾರದವರು ಹಣ ಜಾಸ್ತಿಯಾಯಿತೆಂದು ಅದನ್ನು ಬಡ್ಜೆಟ್ಟಿನಲ್ಲಿ ಸೇರಿಸಬೇಕಾಯಿತು ಸೇರಿಸದೆ ಕೈಬಿಟ್ಟರು. ಹೀಗೆ ಮಂಜೂರಾದ ಕೆಲಸ ಏಕೆ ಬಿಟ್ಟರು ಎಂದು ಅಲ್ಲಿಯ ಜನ ನಗುತ್ತಿದ್ದಾರೆ. ಇನ್ನು ಅಲ್ಲಿ ಬಹಳ ಪ್ರಾಮುಖ್ಯವಾಗಿ ಆಗಬೇಕಾದ ಐದು ಸೇತುವೆಗಳ ಕೆಲಸ ಇದೆ. ಹಿಂದೆ ಮಾನ್ಯ ಲೋಕೋಪಯೋಗಿ ಸಚಿವರು ಅಲ್ಲಿಗೆ ಬಂದಿದ್ದಾಗ ಅವರಿಗೆ ಅವುಗಳನ್ನೆಲ್ಲಾ ತೋರಿಸಿ ಅವುಗಳ ಅಗತ್ಯವನ್ನೂ ಕೂಡ ಅವರಿಗೆ ವಿವರಿಸಿದ್ದೇನೆ ಅವುಗಳು ಯಾವುವೆಂದರೆ—ಸಿದ್ದರಮಟ್ಟಿ ಬ್ರಿಡ್ಜ್ ಇದರ ವಿಚಾರ ಸಂಪೂರ್ಣವಾಗಿ ಮಾನ್ಯ ಚನ್ನಬಸಪ್ಪನವರಿಗೆ ಗೊತ್ತಿದೆ. ಆದರೆ ಅವರಿಗೆ ಬಂದಿರತಕ್ಕ ಒಂದು ತೊಂದರೆ ಎಂದರೆ ಹಣಕಾಸಿನ ಇಲಾಖೆಯವರು ಅವರಿಗೆ ಹಣವನ್ನು ಒದಗಿಸಿದರೇ ಅವರು ಇದನ್ನು ಮಾಡುವುದು—ಇಲ್ಲವಾದರೆ ಇಲ್ಲವೆಂದು ಹೇಳುತ್ತಿದ್ದಾರೆ. ಇವರೇನೋ ಇಲ್ಲಿ ಹೇಳಬಹುದು. ಆದರೆ ನಾವು ಅಲ್ಲಿ ಜನರಿಗೇನು ಹೇಳುವುದು ? ಇಲ್ಲಿ ಹಣಕಾಸಿನ ಇಲಾಖೆ ಹಣ ಒದಗಿಸಿದರೆ ಮಾತ್ರ ಕೆಲಸವನ್ನು ಕೈಗೊಳ್ಳಲಾಗುತ್ತದೆ ಎಂದರೆ ಇನ್ನುಳಿದ ಮಂತ್ರಿಗಳ ಪೋರ್ಟ್‌ಫೋಲಿಯೋ ಏತಕ್ಕಿರಬೇಕು ? ಅದಕ್ಕಾಗಿ ಹಣಕಾಸಿನ ಇಲಾಖೆಯವರು ಸಾಕಷ್ಟು ಹಣವನ್ನು ಈ ಪಿ.ಡಬ್ಲ್ಯೂ.ಡಿ.ಗೆ ಒದಗಿಸಲೇಬೇಕು. ಹಾಗೆ ಸಕಾಲಕ್ಕೆ ಹಣವನ್ನು ಒದಗಿಸಿದರೆ ೧೦ ರೂಪಾಯಿಗಳಲ್ಲಿ

ಆಗತಕ್ಕ ಕೆಲಸ ಹತ್ತು ರೂಪಾಯಿಗಳಲ್ಲಿ ಮುಗಿಯುತ್ತದೆ. ಇಲ್ಲವಾದರೆ ನೂರು ರೂಪಾಯಿನ ಕೆಲಸಕ್ಕೆ ೨೦೦ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆ. ಅಲ್ಲದೆ ಎರಡು ಕೆಲಸಗಳಾಗುವ ಕಡೆ ಒಂದು ಕೆಲಸ ಕೂಡ ಆಗುವುದು ಕಷ್ಟವಾಗುತ್ತದೆ. ಆದುದರಿಂದ ಸರ್ಕಾರದವರು ಈ ಬಗ್ಗೆ ಕೂಲಂಕಷವಾಗಿ ವಿಮರ್ಶೆಮಾಡಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಂಡು ಅಲ್ಲಿಯ ಜನರಿಗೆ ಅನುಕೂಲ ಮಾಡಲು ಅವಕಾಶ ಮಾಡಿಕೊಡಬೇಕೆಂದು ಇವರಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಮಾನ್ಯ ಚೆನ್ನಬಸಪ್ಪನವರು ಹಿಂದೆ ರಸ್ತೆಗಳನ್ನು ಟಾರ್ ಮಾಡುವುದಕ್ಕೆ ಸಾಧ್ಯವಿಲ್ಲ. ಅವುಗಳನ್ನು ಆರ್.ಸಿ. ರೋಡ್ ಮಾಡುವುದಕ್ಕೆ ದುಡ್ಡನ್ನು ಒದಗಿಸಲಾಗುತ್ತವೆಂದು ಹೇಳಿದ್ದರು. ಆದರೆ ಅತ್ತಕಡೆಗೆ ಆರ್.ಸಿ. ರೋಡೂ ಇಲ್ಲ. ಇತ್ತ ಟಾರ್ ರೋಡುಗಳೂ ಇಲ್ಲದಂತಾಯಿತು. ಇನ್ನು ಈ ಕೆಲವು ಮೋರಿಗಳನ್ನು ಮಾಡುವುದಕ್ಕೆ ದುಡ್ಡನ್ನು ಕೊಡುತ್ತೇವೆಂದು ಹೇಳಿದ್ದರು. ಈಗ ಅದಕ್ಕೂ ದುಡ್ಡಿಲ್ಲ ಎನ್ನುತ್ತಿದ್ದಾರೆ. ಪ್ರತಿಯೊಂದರ ಅಂದಾಜನ್ನೂ ಮಾನ್ಯ ಹಣ ಕಾಸಿನ ಸಚಿವರು ತಾವೇ ಅಪ್ರೂವ್ ಮಾಡಬೇಕೆಂದು ಹೇಳುತ್ತಿದ್ದಾರೆ. ಇನ್ನು ಕೆಲವು ಸಾಮಾನ್ಯ ಅಂದಾಜುಗಳು ಮಂಜೂರಾತಿಗೆ ಸೂಪರಿಂಟೆಂಡೆಂಟ್ ಅವರಿಗೆ ಕಳುಹಿಸಿದವುಗಳು ಸಕಾಲಕ್ಕೆ ವಾಪಸ್ ಬರುತ್ತಿಲ್ಲ. ಈ ನಾನಾ ಕಾರಣಗಳಿಂದ ಅಲ್ಲಿ ಕೆಲಸ ನಿಧಾನವಾಗುತ್ತಿದ್ದರೆ ಸರ್ಕಾರದವರು ಇತ್ತಾ ನಾವೇನು ಮಾಡೋಣ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದರೂ ನೀವು ಅದನ್ನು ಖರ್ಚುಮಾಡದಿದ್ದರೆ ಅದಕ್ಕೆ ನಾವು ಜವಾಬ್ದಾರರೇ ಎನ್ನುತ್ತಾರೆ. ಹೀಗಾಗಿ ನನಗೆ ಈ ಸಮಸ್ಯೆಗಳ ಬಗ್ಗೆ ಯಾವ ಒಂದು ಪರಿಹಾರವೂ ಕಾಣುತ್ತಿಲ್ಲ. ನಮ್ಮ ದೇಶದ ನಾಲ್ಕು ಬ್ರಿಡ್ಜುಗಳ ಹೆಸರು ಬಡ್ಜೆಟ್ಟಿನಲ್ಲಿದೆ. ಅದರಲ್ಲಿ ಎರಡು ಆಗಲೇ ಮುಗಿದಿದೆ. ಮಾನ್ಯ ಚನ್ನಬಸಪ್ಪನವರಿಗೂ ಗೊತ್ತಿದೆ ಒಂದು ಕಂದೀರೆಕುಂಡಾ ಬ್ರಿಡ್ಜ್, ಇನ್ನೊಂದು ನೆಲ್ಲಿಗುಂಡಿ ಬ್ರಿಡ್ಜ್, ಕೋಣನಕೆರೆ ಬ್ರಿಡ್ಜ್ ಮತ್ತು ಸಿದ್ದರಮಠ ಬ್ರಿಡ್ಜ್ ಕಟ್ಟಿದ್ದಾರೆ. ಇವುಗಳಲ್ಲಿ ಯಾವುದರ ಕೆಲಸವಾಗಿದೆಯೋ ಅವುಗಳನ್ನು ಇಲ್ಲಿ ಸೇರಿಸಿ ಕೆಲಸವಾಗಬೇಕಾದ ಐಟಂಗಳನ್ನು ಇಲ್ಲಿ ಕೈಬಿಟ್ಟಿದ್ದಾರೆ. ನಮಗೆ ಈ ಬಡ್ಜೆಟ್ ಪುಸ್ತಕಗಳು ಪ್ರಿಂಟಾಗಿ ಹೊರಬೀಳುವ ತನಕ ಏನೊಂದೂ ಗೊತ್ತಾಗುವುದಿಲ್ಲ. ಇದು ರಾಜ್ಯಾಂಗವಿಧಿ ವಿಚಾರ. ಬಡ್ಜೆಟ್ ಪುಸ್ತಕಬಂದ ನಂತರ ಇಲ್ಲಿ ಇರುವುದೇ ಒಂದು ಅದನ್ನು ತಿದ್ದಲು ಸಾಧ್ಯವಿಲ್ಲ. ಹೀಗಾಗಿ ನಾವು ಜನರಿಗೆ ಅಲ್ಲಿ ಏನು ಉತ್ತರಹೇಳಬೇಕೆಂಬುದೇ ತಿಳಿಯುತ್ತಿಲ್ಲ. ಮಾನ್ಯ ಚನ್ನಬಸಪ್ಪನವರು ಈ ಐದು ಬ್ರಿಡ್ಜ್ ಕೆಲಸವನ್ನು ಮಾಡಿಸಿಕೊಡುವುದಾಗಿ ಒಪ್ಪಿಕೊಂಡು ಬಂದಿದ್ದರು. ಈಗ ದುಡ್ಡಿಲ್ಲ ಎನ್ನುತ್ತಾರೆ ಹಣಕಾಸಿನ ಇಲಾಖೆಯವರು ಏನೇನೋ ಕೊಕ್ಕೆಯನ್ನು ಹಾಕಿದ್ದಾರೆಂದು ಹೇಳುತ್ತಿದ್ದಾರೆ. ಹೀಗೇ ನಿಧಾನವಾದುದರಿಂದ ಆ ಹಿರೆಗದ್ದೆ ಬ್ರಿಡ್ಜ್ ಕೆಲಸ ೨೫ ಸಾವಿರ ಹೋಗಿ ಈಗ ೫೦ ಸಾವಿರಕ್ಕೇರಿದೆ. ಅದು ಕೊನೆ ಘಟ್ಟಕ್ಕೆ ಮುಟ್ಟುವಾಗ ಒಂದು ಅಡ್ಮಿನಿಸ್ಟ್ರೇಷನ್ ನಮ್ಮಲ್ಲಿ ನಡೆಯುತ್ತಿದೆ. ಇದಕ್ಕಾಗಿ ನಾನು ತುಂಬಾ ವಿಷಾದ ಪಡಬೇಕಾಗಿದೆ. ಮಾನ್ಯ ಚನ್ನಬಸಪ್ಪನವರು ಇಲ್ಲಿಯವರೆಗೂ ಏನನ್ನು ಸಾಧಿಸಿದ್ದಾರೆ ಎಂಬುದನ್ನು ನೋಡಿದ್ದೇವೆ ಅವರಿನ್ನೂ ಏನನ್ನು ಸಾಧಿಸುತ್ತಾರೆಂಬುದನ್ನು ಕಾದು ನೋಡಬೇಕಾಗಿದೆ. ಮಲೆನಾಡಿನಲ್ಲಿ ಮಣ್ಣಿನ ರಸ್ತೆಮಾಡಿದರೆ ಏನೂ ಪ್ರಯೋಜನ ಇಲ್ಲ. ರೆಗ್ಯೂಲೇಟೆಡ್ ಮಾರ್ಕೆಟ್ಟಿನಲ್ಲಿ ಸೆಸ್ ಒಂದು ಪರ್ಸೆಂಟ್ ಹಾಕಿ ವಸೂಲು ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುವುದಾದರೂ ಕಬ್ಬು ಬೆಳೆಯುವ ಪ್ರದೇಶದಲ್ಲಿ ಸೆಸ್ ವಸೂಲು ಮಾಡಿ ಆ ಪ್ರದೇಶದ ರೈತರಿಗೆ ಅನುಕೂಲವಾಗುವ ಹಾಗೆ ವಿನಿಯೋಗಿಸುವಂತೆ ಅದೇ ರೀತಿಯಲ್ಲಿ ವಸೂಲು ಮಾಡಿದ ಪ್ರದೇಶದಲ್ಲಿ ಅದಷ್ಟು ಕೆಲಸ ಮಾಡುವುದಕ್ಕೆ ಅವಕಾಶಮಾಡಿಕೊಡಬೇಕೆಂದು ಕೇಳುತ್ತೇನೆ.

ಲಿಫ್ಟ್ ಇರಿಗೇಷನ್ ಸ್ಕೀಂ ಏನಿದೆ ಅದನ್ನು ನಮ್ಮಲ್ಲಿ ಕೇವಲ ಎರಡು ಕೊಟ್ಟಿದ್ದಾರೆ. ಬಜೆಟ್ಟಿನಲ್ಲಿ ಸೇರಿಸಿದ್ದಾರೆ. ಬಹುಶ: ತಪ್ಪಾಗಿರಬೇಕು, ಒಂದೂವರೆ ಲಕ್ಷ ತೋರಿಸಿದ್ದಾರೆ, ೧೫ ಲಕ್ಷ ಇರಬೇಕಾಗಿತ್ತೆಂದು ತೋರುತ್ತದೆ. ಆದರೆ ಕೆಲಸಮಾಡುವಹಾಗಿಲ್ಲ. ಕಾರ್ಪೊರೇಷನ್ ಮಾಡುವರೆಂದು ಹೇಳಿದರೆ ಹೇಗಾಗುತ್ತದೆ ? ನಗರಾಳ್‌ರವರು ಕೆಮ್ಮಣ್ಣುಗುಂಡಿಗೆ ಬಂದು ಬಜೆಟ್ಟಿನಲ್ಲಿ ಸೇರಿಸಿರುವ ಕೆಲಸ ಪ್ರಾರಂಭಿಸುವಂತೆ ಎಗ್ಜಿಕ್ಯುಟಿವ್ ಇಂಜನಿಯರಿಗೆ ಹೇಳಿದರು. ಭದ್ರ ಪ್ರಾಜೆಕ್ಟಿನಿಂದ ಮುಳುಗಡೆಯಾದ ಪ್ರದೇಶದವರಿಗೆ ಅನುಕೂಲ ಮಾಡಿಕೊಡಬೇಕೆಂದು ೧೫ ವರ್ಷದಿಂದ ಹೇಳಿದರೂ ಮಾಡಿಲ್ಲ, ಮಾಡಿಕೊಡಬೇಕು.

12-00 Noon.

ಮೈನರ್ ಇರಿಗೇಷನ್ ಬಗ್ಗೆ ೨೦—೨೫ ಸಾವಿರ ರೂಪಾಯಿನಲ್ಲಿ ಇರುವ ಸುಮಾರು ೧೭ ಕೆಲಸಗಳ ಒಂದು ಪಟ್ಟಿಯನ್ನು ಹೋದ ಸಲ ಕೊಟ್ಟೆ, ಅದರ ವಿಚಾರವೇನಾಯಿತೋ ಗೊತ್ತಿಲ್ಲ.

ಶ್ರೀ ಎಸ್. ಬಿ. ನಗರಾಳ್.—ಈ ಕೆಲಸ ತೆಗೆದುಕೊಳ್ಳುವುದಕ್ಕೆ ಸೂಪರಿಂಟೆಂಡಿಂಗ್ ಇಂಜಿನಿಯರು ಮತ್ತು ಎಗ್ಜಿಕ್ಯುಟಿವ್ ಇಂಜನಿಯರಿಗೆ ತಿಳಿವಳಿಕೆ ಕೊಡಲಾಗಿದೆ, ೨೦—೨೫ ಸಾವಿರ ರೂಪಾಯಿಗಳ ಕೆಲಸ ತೆಗೆದುಕೊಳ್ಳುವುದಕ್ಕೆ ಅಡ್ಡಿಯಿಲ್ಲ. ೧೫ ಲಕ್ಷದ ವಿಚಾರ ಗೊತ್ತಿಲ್ಲ. ದೀಡ್ ಲಕ್ಷದ ವಿಚಾರವಿದೆ.

ಶ್ರೀ ಕೆ. ಎನ್. ವೀರಪ್ಪಗೌಡ.— ಬಜೆಟ್ಟಿನಲ್ಲಿ ೧೫ ಲಕ್ಷಕ್ಕೆ ಬದಲಾಗಿ ಒಂದೂವರೆ ಲಕ್ಷ ಎಂದು ಬಿದ್ದಿದೆ ಸರಿಪಡಿಸಬೇಕು. ಮಂತ್ರಿಗಳು ಒಪ್ಪಿಗೆ ಕೊಟ್ಟಿರುವುದು ಸಂತೋಷದ ವಿಚಾರ. ೧೭ ಕೆಲಸದ ವಿಚಾರ ಏನಾಗಿದೆಯೆಂದು ಗೊತ್ತಿಲ್ಲ. ನಾನು ಈ ವಿಚಾರದಲ್ಲಿ ಚೀಫ್ ಇಂಜನಿಯರಿಗೆ ಫೋನ್ ಮಾಡಿ ೩ ತಿಂಗಳಲ್ಲಿ ಕೆಲಸಮಾಡಿ ಆಹಾರ ಬೆಳೆಯಲು ಅವಕಾಶ ಮಾಡಿಕೊಡಬಹುದು. ಇದಕ್ಕೆ ಪ್ರಾಶಸ್ತ್ಯ ಕೊಡಬೇಕು.

ಮಾನ್ಯ ಅಧ್ಯಕ್ಷರು ೨—೩ ಸಾರಿ ಬೆಲ್ ಮಾಡಿದರು, ಬಜೆಟ್ ಶುರುವಾದಮೇಲೆ ನಾನು ಮಾತನಾಡದೆ ಇದ್ದರೂ ನನಗೆ ಕಾಲ ಹೆಚ್ಚಾಗಿ ಕೊಟ್ಟಿಲ್ಲ. ವಿರೋಧ ಪಕ್ಷದ ನಾಯಕರಿಗೆ ಹೆಚ್ಚು ಅವಕಾಶವಿದೆ, ನನಗೂ ಜಾಸ್ತಿ ಅವಕಾಶ ಕೊಡಬೇಕು. ನಾನು ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದೇನೆ. ಮುಖ್ಯ ಮಂತ್ರಿಗಳಿದ್ದಾರೆ. ನಾನು ಹೇಳಿದುದಕ್ಕೆ ವಿಶೇಷ ಗಮನಕೊಟ್ಟರೆ ಹಳ್ಳಿಯ ಜನರಿಗೆ ಅನುಕೂಲವಾಗುವುದು. ನಾನೂ ಒಬ್ಬ ರೈತ. ಹಳ್ಳಿಯಲ್ಲಿ ವಾಸಮಾಡಿರತಕ್ಕವನು, ಹಳ್ಳಿಯ ಕಷ್ಟ ಅರ್ಥವಾಗಿದೆ ಎಂದು ಹೇಳುವರು. ನಮ್ಮ ಕಡೆಯ ಕಷ್ಟ ಹಿಂದೆ ಹೇಳಿದೆ, ಸಾಕಷ್ಟು ಗಮನ ಆ ಕಡೆಗೆ ಕೊಡುತ್ತೇವೆಂದು ಹೇಳಿದ್ದಾರೆ. ಅದರಂತೆ ಅವರು ಹೆಚ್ಚು ಗಮನಹರಿಸಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಈ ದಿವಸ ಲೋಕೋಪಯೋಗಿ ಇಲಾಖೆಯ ಇಬ್ಬರು ಮಂತ್ರಿಗಳು ನಮ್ಮ ಮುಂದೆ ಸುಮಾರು ೭೦ ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ಹಣದ ಬೇಡಿಕೆಯನ್ನು ಇಟ್ಟಿದ್ದಾರೆ. ಇದನ್ನು ವಿರೋಧಿಸಬೇಕಾಗಿದೆ. ವಿರೋಧಿಸುವುದಕ್ಕೆ ಕಾರಣಗಳು ಈ ರೀತಿಯಿವೆ. ಈಗಾಗಲೇ ಮಾತನಾಡಿದ ವಿರೋಧ ಪಕ್ಷದ ನಾಯಕರು ಈ ಇಲಾಖೆ ವರ್ಗಾವರ್ಗಿ ಬಗ್ಗೆ ಇಲಾಖೆ ರೀ ಆರ್ಗನೈಜೇಷನ್ ಬಗ್ಗೆ ಮತ್ತು ಇರತಕ್ಕ ಅನೇಕ ನ್ಯೂನತೆಗಳ ಬಗ್ಗೆ ಮಾತನಾಡಿದ್ದಾರೆ. ನಾನು ನನಗೆ ತಿಳಿದ ರೀತಿಯಲ್ಲಿ ನಮ್ಮ ಜಿಲ್ಲೆ ಅಥವಾ ಕ್ಷೇತ್ರಕ್ಕೆ ಸಂಬಂಧಪಟ್ಟ ವರ್ಗಾವರ್ಗ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ. ಹಾಗೆ ಮಾಡಿ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಕೋಲಾರ ಸಬ್‌ಡಿವಿಜನ್‌ನಲ್ಲಿದ್ದ ಒಬ್ಬ ಅಸಿಸ್ಟೆಂಟ್ ಇಂಜಿನಿಯರ ವರ್ಗ ಕೇವಲ ಒಂದೇ ವರ್ಷದಲ್ಲಾಗಿದೆ. ಇದರ ಬಗ್ಗೆ ಪ್ರಶ್ನೆ ಮಾಡಬೇಕಾಗಿದೆ. ಅವರು ಹಣದ ದುರುಪಯೋಗ ಮಾಡಿದರೇ ಅಥವಾ ಇನ್ನೇನಾದರೂ ಗುರುತರವಾದ ಅಪಾದನೆ ಅವರಮೇಲಿತ್ತೇ ? ಹಾಗಿದ್ದರೆ ಅವರನ್ನು ಉಗ್ರವಾದ ಶಿಕ್ಷೆಗೆ ಗುರಿಮಾಡಬೇಕಾಗಿತ್ತು. ಆದರೆ ಅದು ಯಾವುದೂ ಇಲ್ಲ, ಯಾರೋ ಆಡಳಿತ ಕಾಂಗ್ರೆಸ್ಸಿನ ಒಬ್ಬ ಪುಡಾರಿ ಬಂದು ಹೇಳಿದರೆ ಈ ರೀತಿ ಮಾಡುವರು. ವಿರೋಧ ಪಕ್ಷದವರು ಹೇಳುವ ಕೆಲಸ ಅವಗ್ಗ ಮಾಡುತ್ತಿದ್ದಾರೆ. ಆದ್ದರಿಂದ ಅವರನ್ನು ವರ್ಗ ಮಾಡಬೇಕೆಂದು ಹೇಳಿದ್ದಾರೆ, ಅದಕ್ಕಾಗಿ ಮಾಡಿದ್ದಾರೆ. ಆ ಪುಡಾರಿಗಳು ಮುಖ್ಯಮಂತ್ರಿಗಳಿಗೆ ಪತ್ರ ಬರೆದರು, ಅದರಮೇಲೆ ವರ್ಗಮಾಡಿದ್ದಾರೆ. ಮುಖ್ಯ ಮಂತ್ರಿಗಳು ಈ ರಾಜ್ಯದ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಯಾರ ಮೇಲಾದರೂ ಅಪಾದನೆಯಿದ್ದರೆ ಯಾರಾದರೂ ತಪ್ಪು ಮಾಡಿದ್ದರೆ ಶಿಕ್ಷೆ ಮಾಡಬೇಕಾದುದು ಅವರ ಮೊದಲನೆ ಕರ್ತವ್ಯ. ಆದರೆ...

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಅಸಿಸ್ಟೆಂಟ್ ಇಂಜನಿಯರು ಯಾರು ?

ಶ್ರೀ ಸಿ. ಬೈರೇಗೌಡ.—ಅವರು ಕೋಲಾರ ಸಬ್ ಡಿವಿಜನ್ನಿನಲ್ಲಿದ್ದಾರೆ. ಅವರ ಹೆಸರು ರಾಮೇಗೌಡ ಎಂದು. ಇನ್ನೊಂದು ಸಂದರ್ಭದಲ್ಲಿ ಮಾಲೂರಿಗೆ ಒಬ್ಬ ಅಸಿಸ್ಟೆಂಟ್ ಇಂಜಿನಿಯರು ಬಂದರು. ಅವರಿಗೆ ೩ ದಿವಸಗಳಲ್ಲಿ ವರ್ಗವಾಗಿದೆ. ಕಾರಣವೇನು ? ಕಾಗದಕ್ಕೆ ಬೆಲೆಯಿಂದೆಯೋ. ಈಗ ಕಾಗದಕ್ಕೆ ಒಂದಕ್ಕೆ ಎರಡರಷ್ಟು ಬೆಲೆಯಾಗಿದೆ. ಆದರೆ ವರ್ಗಾವರ್ಗಿ ಆಜ್ಞೆಗಳನ್ನು ಒಂದರಮೇಲೊಂದರಂತೆ ಹೊರಡಿಸುವುದಕ್ಕೆ ಕಾಗದ ಎಲ್ಲಿಂದ ಬರುತ್ತದೆ ? ಇದಕ್ಕೆ ಬೆಲೆ ಇದೆಯೋ ? ಇದರಿಂದ ಸ್ಟೇಷನರಿಗೆ ಹಣ ಎಷ್ಟು ಖರ್ಚಾಗುವುದು ? ಏಕೆ ಈರೀತಿ ದುರುಪಯೋಗ ಮಾಡುವುದು ಎಂದು ಕೇಳಬೇಕಾಗಿದೆ.

ಇನ್ನೂ ಅನೇಕ ವಿಷಯಗಳಿವೆ, ಅವನ್ನು ಪ್ರಸ್ತಾಪಿಸಿರುವುದರಿಂದ ಹೆಚ್ಚು ಹೇಳುವುದಿಲ್ಲ. ಮುಖ್ಯವಾಗಿ ಪಿ ಡಬ್ಲ್ಯು ಇಲಾಖೆಯಲ್ಲಿ ವರ್ಕ್‌ಚಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್ ಎಂದಿದೆ. ಇದರ ನೌಕರರಿಗಾಗಿ ಪ್ರತಿ ವರ್ಷ ಒಂದೂವರೆ ಕೋಟಿ ರೂಪಾಯಿ ಖರ್ಚಾಗುತ್ತಿದೆಯೆಂದು ಕೇಳಿದ್ದೇನೆ. ರಸ್ತೆಯುದ್ದಕ್ಕೂ ಗ್ಯಾಂಗ್ ಇರುವುದು. ಅವರ ಕೆಲಸ ರಸ್ತೆ ಪಕ್ಕದಲ್ಲಿ ಮಣ್ಣು ಹಾಕುವುದು. ವಾಸ್ತವವಾಗಿ ಅವರು ಮಾಡುವ ಕೆಲಸವೇನೆಂದರೆ ಸೂಪರ್‌ವೈಜರ ಮನೆಯಲ್ಲಿ ಜೂನಿಯರ್ ಇಂಜನಿಯರ ಮನೆಯಲ್ಲಿ ೩—೪ ಜನರಿರುವರು ಅಸಿಸ್ಟೆಂಟ್ ಇಂಜಿನಿಯರು ಮತ್ತು ಎಗ್ಸಿಕ್ಯೂಟಿವ್ ಇಂಜಿನಿಯರ ಮನೆಯಲ್ಲಿ ಸ್ವಲ್ಪ ಜನ ಇರುವರು. ಬೆಂಗಳೂರಿನಲ್ಲಿ ಎಲ್ಲಿ ಈ ನೌಕರರಿದ್ದಾರೋ ಏನೋ ಅರ್ಥವಾಗುವುದಿಲ್ಲ. ಏಕೆ ಈ ರೀತಿಯಿದೆ ? ಅವರನ್ನು ತೆಗೆಯಿರಿ ಎಂದು ನಾನು ಹೇಳುವುದಿಲ್ಲ. ಹಣ ಎಷ್ಟು ಖರ್ಚಾದಮೇಲೆ ಅವರಿಗೆ ತಕ್ಕ ಕೆಲಸವಿರಬೇಕೆಂಬ ದೃಷ್ಟಿಯಿಂದ ಹೇಳುವುದು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಾವು ಹೇಳುವುದು ಗ್ಯಾಂಗ್ ಕೂಲಿಗಳ ವಿಚಾರವೋ ಅಥವಾ ವರ್ಕ್‌ಚಾರ್ಜ್ಡ ಎಸ್ಟಾಬ್ಲಿಷ್‌ಮೆಂಟಿನ ವಿಚಾರವೋ ?

ಶ್ರೀ ಸಿ. ಬೈರೇಗೌಡ.—ಗ್ಯಾಂಗ್ ಕೂಲಿಗಳೆಂದರೆ ವರ್ಕ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟಿಗೆ ಸೇರುವುದು ಎಂದು ತಿಳಿದುಕೊಂಡು ನಾನು ಹೇಳುವುದು. ಮುಖ್ಯವಾಗಿ ಅವರಿಗೆ ಕೆಲಸ ಕೊಡಬೇಕು. ಅವರಿಗೆ ಈಗ ಸರಿಯಾದ ಕೆಲಸವಿಲ್ಲ. ಪಬ್ಲಿಕ್‌ವರ್ಕ್ ಇಲಾಖೆಯಲ್ಲಿ ಹಣವಿಲ್ಲವೆಂದು ಹೇಳುವಾಗ ಅವರಿಗೆ ಅಲ್ಲಿ ಕೆಲಸವಿಲ್ಲದಿದ್ದರೆ ಬೇರೆ ಇಲಾಖೆಯಲ್ಲಾದರೂ ಕೆಲಸ ಕೊಡಿ. ಅವರನ್ನು ಕೆಲಸದಿಂದ ತೆಗೆಯಬಾರದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಿಂದ ತರುವುದು ? ೧೦ ಸಾವಿರ ಗ್ಯಾಂಗ್ ಕೂಲಿಗಳಿದ್ದಾರೆ. ಕೆಲಸ ಎಲ್ಲಿಂದ ಕೊಡೋಣ ?

ಶ್ರೀ ಸಿ. ಬೈರೇಗೌಡ.—ಇವರನ್ನು ಜವಾನರನ್ನಾಗಿಯಾದರೂ ನೇಮಿಸಿಕೊಳ್ಳಿ ನಿಮ್ಮ ಇಲಾಖೆಗಳಲ್ಲಿ ಎಲ್ಲಿಯಾದರೂ ಇವರನ್ನು ತೆಗೆದುಕೊಳ್ಳಿ, ಅಷ್ಟಾದರೂ ಹಣ ಉಳಿಯುತ್ತದೆ.

SRI H. M. CHANNABASAPPA.—When there is no work where I am to bring work for them? You are blowing hot and cold together. ಅವರನ್ನು ಕೆಲಸದಿಂದ ತೆಗೆದರೆ ನೀವು ನಮ್ಮನ್ನು ಬಿಡುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಹೀಗೆ ಬಂದಾಗ ಹೀಗೆ ಹೇಳುತ್ತೀರಿ, ಮುಂದೆ ಇನ್ನೊಂದು ರೀತಿ ಹೇಳುತ್ತೀರಿ

ಶ್ರೀ ಸಿ. ಬೈರೇಗೌಡ.—ಬೇರೆ ಇಲಾಖೆಗಳಲ್ಲಿ ಇವರನ್ನು ತೆಗೆದುಕೊಳ್ಳಿ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—೧೦ ಸಾವಿರ ಜನಕ್ಕೆ ಎಲ್ಲಿ ಕೆಲಸ ತರೋಣ.

ಶ್ರೀ ಸಿ. ಬೈರೇಗೌಡ.—ನಿಮ್ಮ ಕನ್ಸ್‌ಟ್ರಕ್ಷನ್ ಕಂಪನಿಯಲ್ಲಿ ಕೊಡಿ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದು ಸರಿಯಲ್ಲ. ಅಷ್ಟು ಜನಕ್ಕೆ ಎಲ್ಲಿ ಕೆಲಸ ಕೊಡೋಣ.

ಶ್ರೀ ಸಿ. ಬೈರೇಗೌಡ.—ಇವರು ಅನೇಕ ಸಂದರ್ಭಗಳಲ್ಲಿ ಯಾವರೀತಿ ಕೆಲಸ ಮಾಡುತ್ತಾರೆ ಎನ್ನುವುದನ್ನು ನಾನು ಹೇಳಬೇಕಾಗಿಲ್ಲ. ಈ ಒಂದು ಅನಿಶ್ಚಿತೆ ಕೊನೆಗಾಣುವುದಕ್ಕೆ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ರಸ್ತೆಗಳ ಬಗ್ಗೆ ಮಾನ್ಯ ಸದಸ್ಯರಾದ ವೀರಪ್ಪಗೌಡ ಅವರು ಇದರ ಬಗ್ಗೆ ಚೆನ್ನಾಗಿ ಮಾತನಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ನನ್ನ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ ಮಾನ್ಯ ಮಂತ್ರಿಗಳು ನನ್ನ ಕ್ಷೇತ್ರದಲ್ಲಿ ಪ್ರವಾಸ ಮಾಡಿದ್ದಾರೆ. ಆ ಸಂದರ್ಭದಲ್ಲಿ ಅಲ್ಲಿರತಕ್ಕ ರಸ್ತೆಗಳ ಸ್ಥಿತಿಗತಿಗಳನ್ನು ಕಂಡಿದ್ದಾರೆ, ಮಂತ್ರಿ ಅವರು ರಸ್ತೆಗಳ ಬಗ್ಗೆ ಆಡಿದಂಥ ಮಾತನ್ನು ಜ್ಞಾಪಿಸುವುದಕ್ಕೆ ಇಷ್ಟಪಡುತ್ತೇನೆ. ಅವರು ನನ್ನ ಕ್ಷೇತ್ರದಲ್ಲಿ ಪ್ರವಾಸ ಮಾಡಿ ಬಂದಮೇಲೆ ನಾನು ಹೆಚ್ಚಿನ ಕಾರ್ಯಗಳು ಆಗುತ್ತವೆಂದು ನಿರೀಕ್ಷಣೆ ಮಾಡಿದ್ದೆ, ಆದರೆ ಬಡ್ಜೆಟ್ಟನ್ನು ನೋಡಿದಮೇಲೆ ವ್ಯಥೆಯಿಂದ ಹೇಳಬೇಕಾಗಿದೆ. ಯಾವ ಒಂದು ಕೆಲಸವನ್ನು ಅವರು ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ ಎಂದು. ವೇಮಗಲ್ ಹೊಸಹಳ್ಳಿ ರಸ್ತೆ ಇದೂ ಕೂಡ ಸೇರಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಿಮ್ಮ ಕ್ಷೇತ್ರ ಒಂದೇ ಅಲ್ಲ, ಯಾರ ಕ್ಷೇತ್ರದಲ್ಲಿಯೂ ಕೂಡ ಹೊಸ ಕೆಲಸಗಳನ್ನು ತೆಗೆದುಕೊಳ್ಳಲು ಬಡ್ಜೆಟ್ಟಿನಲ್ಲಿ ಹಣ ಒದಗಿಸಿಲ್ಲ. ಹಳೆಯ ಕೆಲಸಗಳು ಏನು ಇವೆ, ಅದರ ಸ್ಪಿಲ್‌ಓವರ್ ಕೆಲಸ ಸುಮಾರು ೧೦-೧೨ ಕೋಟಿ ರೂಪಾಯಿಗಳಷ್ಟಾಗುತ್ತವೆ. ಆದ್ದರಿಂದ ಈ ಸಂದರ್ಭದಲ್ಲಿ ಹೊಸ ಕೆಲಸಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸಿಕೊಂಡು ಹಣವನ್ನು ಒದಗಿಸುವುದು ಸಾಧ್ಯವಾಗುವುದಿಲ್ಲ ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ

ಶ್ರೀ ಸಿ. ಬೈರೇಗೌಡ.—ಇದರಿಂದ ಏನಾಗುತ್ತದೆಂದರೆ ಹಳೆಯ ಕೆಲಸಗಳನ್ನೇ ತಾವು ಈಗ ತೆಗೆದುಕೊಳ್ಳುವುದಾದರೆ, ಹೊಸ ಕೆಲಸಗಳನ್ನು ತೆಗೆದ ಕೊಳ್ಳುವುದಕ್ಕಾಗುವುದಿಲ್ಲ. ಹಿಂದಿನ ವರ್ಷ ಕೆಲವು ಕಡೆ ಯಾವ ಒಂದು ಕೆಲಸಗಳನ್ನು ತೆಗೆದುಕೊಂಡಿಲ್ಲ. ಕೆಲವು ಕಡೆ ಕೆಲಸಗಳನ್ನು ತೆಗೆದುಕೊಂಡಿರಬಹುದು. ಆದ್ದರಿಂದ ತಮ್ಮ ನೀತಿಯಿಂದ ಇಲ್ಲ ತಾರತಮ್ಯ ಮಾಡಿದ ಹಾಗೆ ಆಗುತ್ತದೆ. ಇದು ಸರಿಯಲ್ಲ. ಅದೇ

ರೀತಿಯಲ್ಲಿ ಕೆಲವು ಭಾಗಗಳು ಹಿಂದುಳಿದಿದ್ದರೆ, ಅಂಥ ಭಾಗದಲ್ಲಿ ಕೆಲಸಗಳನ್ನು ಈ ವರ್ಷವಾದರೂ ಮಾಡತಕ್ಕ ಪರಿಸ್ಥಿತಿ ಇರಬೇಕು. ದಯುವಿಟ್ಟು ಇದನ್ನು ತಾವು ಆಲೋಚಿಸಿ ಮಾ ಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ೧೪ ಮೈಲಿಯ ಒಂದು ರಸ್ತೆ ಇದೆ. ಇದನ್ನು ೧೯೬೬ರ ರಲ್ಲಿ ಪಿ.ಡಬ್ಲ್ಯೂ.ಡಿಗೆ ಸೇರಿಸಿಕೊಂಡಿದ್ದಾರೆ. ಈ ರಸ್ತೆಗೆ ಒಂದು ಮುಖ್ಯವಾಗಿ ಸೇತುವೆ ಆಗ ಬೇಕಾಗಿದೆ. ಇದರ ಬಗ್ಗೆಯೂ ತಮ್ಮ ಅಭಿಪ್ರಾಯ ಕೂಡ ಇದೆ. ಇದನ್ನು ಮಾಡಿಸಬೇಕು ಎಂದು ಪ್ರಾರ್ಥಿಸುತ್ತೇನೆ.

ಇದಾದಮೇಲೆ ಮೋರಿಯ ಕೆಲಸ. ನನ್ನ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ ಕಲ್ಲೂರು ಎಲ್ಲಾ ವಿಧದಲ್ಲಿಯೂ ವ್ಯಾಪಾರ ಕೇಂದ್ರವಾಗಿದೆ. ಇದು ಒಂದು ದೊಡ್ಡ ಸಿಲ್ಕ್ ಉತ್ಪಾದನೆ ಮಾಡತಕ್ಕ ಕೇಂದ್ರ. ಈ ಊರಿಗೆ ಹೋಗಲು ಒಂದು ದೊಡ್ಡ ಸೇತುವೆ ಮುಖ್ಯ. ಇಲ್ಲಿಯುವರೆಗೂ ಕೂಡ ಬಂದಂಥ ಮಂತ್ರಿಗಳಿಗೆ ಈ ಗ್ರಾಮದ ಜನರು ಈ ಸೇತುವೆಯನ್ನು ಮಾಡಿಸಿಕೊಡಲು ನಮಸ್ಕಾರ ಮಾಡಿ ಹೂವಿನ ಹಾರ ಹಾಕಿ ಸುಸ್ತಾಗಿದ್ದಾರೆ. ಕಳೆದ ೭-೮ ವರ್ಷಗಳಿಂದಲೂ ಈ ಕೆಲಸವಾಗಿಲ್ಲ. ಮಳೆಗಾಲ ಬಂತು ಎಂದರೆ ತಿಂಗಳಲ್ಲಿ ೧೫ ದಿವಸ ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ ಯಾವ ವಿಧವಾದ ಸಂಪರ್ಕವನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದನ್ನು ಅತಿ ಜಾಗ್ರತೆಯಾಗಿ ಮಾಡಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಮೈನರ್ ಇರಿಗೇಷನ್ ಬಗ್ಗೆ ನನ್ನ ಕ್ಷೇತ್ರದಲ್ಲಿ ಆದಂಥ ಕೆಲಸಗಳ ಬಗ್ಗೆ ನನ್ನ ಕ್ಷೇತ್ರದಲ್ಲಿ ಆದಂಥ ಕೆಲಸಗಳ ಬಗ್ಗೆ ನಾನು ಮೆಚ್ಚುಗೆಯನ್ನು ತೋರಿಸಿದ್ದಾರೆ, ನಾನು ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ಇದಕ್ಕೋಸ್ಕರ ಮಾನ್ಯ ನಗರಾಳ್ ಅವರು ಹತ್ತೊಂಭತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಇದಕ್ಕೆ ನಮ್ಮ ರಾಜ್ಯದ ಮುಖ್ಯ ಇಂಜಿನಿಯರ್ ಅವರು ಬಹಳ ಶ್ರದ್ಧೆಯನ್ನು ವಹಿಸಿ ಈ ಕೆಲಸವನ್ನು ಮಂಜೂರು ಮಾಡಿಸಿದ್ದಾರೆ. ಇದು ಬಗ್ಗೆ ನಾನು ಒಂದು ಮುಖ್ಯ ಅಂಶವನ್ನು ತಮ್ಮ ಗಮನಕ್ಕೆ ತರುವುದು ಏನೆಂದರೆ, ಸರ್ಕಾರದ ಒಂದು ಆಜ್ಞೆಯಲ್ಲಿ ಈ ಒಂದು ಕೆಲಸದ ಬಗ್ಗೆ ಸಬ್ಜೆಕ್ಟ್ ಇನ್‌ಕ್ಲೂಷನ್ ಇನ್ ದಿ ಬಡ್ಜೆಟ್ ಎಂದು ಇದೆ. ಆದರೆ ಬಡ್ಜೆಟ್ಟಿನಲ್ಲಿ ಇದರ ಹೆಸರೇ ಇಲ್ಲ.

ಶ್ರೀ ಎಸ್. ಬಿ. ನಾಗರಾಳ್.—ನಾವು ಅದನ್ನು ರೆಗ್ಯುಲರೈಸ್ ಮಾಡುತ್ತೇವೆ. ಅದರ ಬಗ್ಗೆ ತಾವು ಯೋಚನೆ ಮಾಡುವುದು ಬೇಡ. ಬಡ್ಜೆಟ್ಟಿನಲ್ಲಿ ಹೊಸ ಕೆಲಸಗಳನ್ನು ಸೇರಿಸುವುದಕ್ಕೆ ಅವಕಾಶವಿಲ್ಲ. ಹೋದಸಲ ಇದ್ದಂಥ ಕೆಲಸಗಳನ್ನು ಕಂಟಿನ್ಯೂ ಮಾಡುತ್ತೇವೆ. ಲಂಪಸಂ ಆಗಿ ಇಂಥ ಕೆಲಸಗಳಿಗೆ ಸ್ವಲ್ಪ ಹಣವನ್ನು ಅಲಾಟ್ ಮಾಡಿದ್ದಾರೆ. ಆದ್ದರಿಂದ ಈ ಕೆಲಸಗಳನ್ನು ಮಾಡಿಸುತ್ತೇವೆ.

ಶ್ರೀ ಸಿ. ಬೈರೇಗೌಡ.—ನನ್ನ ಕ್ಷೇತ್ರದಲ್ಲಿ ದೇವಿಹಟ್ಟಿ ಪಿಕ್‌ಅಪ್ ಎಂದು ಇದೆ. ಇದನ್ನು ಎರಡು ವರ್ಷದ ಹಿಂದೆ ಬಡ್ಜೆಟ್ಟಿನಲ್ಲಿ ಸೇರಿಸಿದೆ, ಇಲ್ಲಿಯುವರೆಗೂ ಇದರ ಎಸ್ಟಿಮೇಟ್ ಸಹ ಸ್ಯಾಂಕ್ಷನ್ ಆಗಿಲ್ಲ. ಇದಕ್ಕೆ ಇಲ್ಲದ ಸಲ್ಲದ ಸಬೂಬು ಹೇಳುತ್ತಿದ್ದಾರೆ. ಇದರಿಂದ ೩೦೦ ಎಕರೆ ನೀರಾವರಿಯಾಗುತ್ತದೆ. ಯಾವ ಕಾರಣದಿಂದ ಇದನ್ನು ಮಾಡುತ್ತಿಲ್ಲ ಎಂಬುದನ್ನು ತಿಳಿಸಬೇಕು. ೧೯೬೮ರಲ್ಲಿ ಮೈನರ್ ಇರಿಗೇಷನ ಕೆಲಸಗಳಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಬೇಕು ಎಂದು ನಿಗದಿ ಮಾಡಿದ್ದಾರೆ ನೂರು ಎಕರೆ ಅಚ್ಚುಕಟ್ಟು ಇರತಕ್ಕ ಒಂದು ಕೆರೆಗೆ ೧೨೫೦/೧೫೦೦ ರೂಪಾಯಿಗಳವರೆಗೆ ಎಂದು ನಿಗದಿ ಮಾಡಿದ್ದಾರೆ.

ಶ್ರೀ ಎಸ್. ಬಿ. ನಾಗರಾಳ್.—ಇದರ ಬಗ್ಗೆ ನಾನು ಆಗಲೇ ವಿಧಾನಸಭೆಯಲ್ಲಿ ಉತ್ತರ ಹೇಳಿದ್ದೇನೆ. ಇದರ ಬಗ್ಗೆ ಒಂದು ಸರ್ಕಾರ ಆಜ್ಞೆಯನ್ನು ನಾವು ಹೊರಡಿಸುವವರಿದ್ದೇವೆ.

ಶ್ರೀ ಸಿ. ಬೈರೇಗೌಡ.—ನಿಮ್ಮ ಷೆಡ್ಯೂಲ್ ಆಫ್ ರೇಟ್ಸು ಒಂದರಿಂದ ಮೂರರಷ್ಟು ರಿವೈಸ್ ಆಗಿದೆ.

ಶ್ರೀ ಎಸ್. ಬಿ. ನಾಗರಾಳ್.—ಆದ್ದರಿಂದಲೇ ಒಂದು ಹೊಸ ಕೆರೆಗೆ ೧೫೦೦ ರೂಪಾಯಿ ಇದ್ದುದನ್ನ ೩೫೦೦ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಮಾಡಿದ್ದೇವೆ. ನಿಮ್ಮ ಕ್ಷೇತ್ರದ ಕೆರೆಯನ್ನು ಒಂದು ಸ್ಪೆಷಲ್ ಕೇಸ್ ಎಂದು ಮಾಡಿಕೊಟ್ಟಿದ್ದೇವೆ.

ಶ್ರೀ ಸಿ. ಬೈರೇಗೌಡ.—ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಹಿಂದೆ ಅನೇಕ ಕೆರೆಗಳು ಆಗದೆ ಇರುವುದರಿಂದ ಹೆಚ್ಚಿನ ಹಣವನ್ನು ಒದಗಿಸಬೇಕಾಗುತ್ತದೆ ಮುಖ್ಯವಾಗಿ ಅಭಿವೃದ್ಧಿ ಕಾರ್ಯಗಳು ನಡೆಯಬೇಕೆಂಬ ದೃಷ್ಟಿಯಿಂದ ಹೆಚ್ಚಿನ ನೀರಾವರಿ ಕಲ್ಪಿಸುವುದಕ್ಕೆ ನೂರು ಎಕರೆ ಅಚ್ಚುಕಟ್ಟು ಇರತಕ್ಕ ಒಂದು ಎಕರೆಗೆ ೩ ಸಾವಿರ ರೂಪಾಯಿ ಕೊಡುವುದಾದರೆ ನಮ್ಮಲ್ಲಿ ಅನೇಕ ಕೆರೆ ಕೆಲಸಗಳು ಆಗುತ್ತವೆ. ಕೋಲಾರ ಜಿಲ್ಲೆಯಲ್ಲಿ ಮಳೆ ಕಡಿಮೆ ಅಲ್ಲಿ ಏನಿದ್ದರೂ ಈ ರೀತಿ ಕೆರೆಗಳ ಆಶ್ರಯದಿಂದ ಅವರು ಫಸಲು ಗಳನ್ನು ತೆಗೆಯಬೇಕಾಗಿರುವುದರಿಂದ ಮಳೆ ಕಡಿಮೆ ಇರುವ ಪ್ರದೇಶಕ್ಕೆ ತಾವು ಜಾಸ್ತಿ ಅನುಕೂಲ ಮಾಡಿಸಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಾವು ಕೋಲಾರ ಜಿಲ್ಲೆಗೆ ಎರಡೂವರೆ ಸಾವಿರ ರೂಪಾಯಿ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ? ಅದಕ್ಕೋಸ್ಕರವಾಗಿಯೇ ಒಂದೂವರೆ ಸಾವಿರ ಇದ್ದದ್ದನ್ನು ಈಗ ಎರಡೂವರೆ ಸಾವಿರ ರೂಪಾಯಿ ಮಾಡಿದ್ದೇವೆ.

ಶ್ರೀ ಸಿ. ಬೈರೇಗೌಡ.—ಆಮೇಲೆ ಇನ್ನೊಂದು ಮುಖ್ಯವಾದ ವಿಷಯ ಏನು ಎಂದರೆ ಮೈನರ್ ಇರಿಗೇಷನ್ ಬಗ್ಗೆ ನಾನು ಒಂದು ಪ್ರಶ್ನೆ ಕಳುಹಿಸಿದ್ದೆ. ಕರ್ನಾಟಕಕ್ಕೆ ಸಂಬಂಧಪಟ್ಟಹಾಗೆ ನದಿಗಳಿಂದ ನಮಗೆ ಎಷ್ಟು ನೀರು ದೊರಕುತ್ತದೆ ಅದರಲ್ಲಿ ಎಷ್ಟನ್ನು ಉಪಯೋಗಿಸುತ್ತಿದ್ದಾರೆ ಮತ್ತು ಎಷ್ಟು ಉಪಯೋಗಿಸಿಕೊಳ್ಳಲು ಮುಂದೆ ಸಾಧ್ಯವಾಗುತ್ತದೆ ಎಂದು? ಇವೊತ್ತು ವಾಟರ್ ರಿಸೋರ್ಸ್‌ಗೆ ಒಬ್ಬ ಚೀಫ್ ಇಂಜಿನೀಯರ್ ಇದ್ದು ಇಂಜಿನಿಯರಿಂಗ್ ಇಟ್ಟು ಕೊಂಡಿದ್ದೀರಾ? ಕಾವೇರಿ ನೀರು ಎಷ್ಟು ಸಿಕ್ಕುತ್ತಿದೆ ಮತ್ತು ಕೃಷ್ಣಾದಲ್ಲಿ ಎಷ್ಟು ನೀರು ಸಿಕ್ಕುತ್ತದೆ? ಇದನ್ನು ಯಾವ ರೀತಿ ಉಪಯೋಗಿಸಬೇಕು? ನೀರಾವರಿಯನ್ನು ಹೆಚ್ಚಿಸುವುದಕ್ಕೆ ನಾನು ಕೇಳಿರುವ ಈ ಪ್ರಶ್ನೆಗೆ ಇಲ್ಲಿಯವರೆಗೆ ಉತ್ತರ ಬಂದಿಲ್ಲ ಕಾರಣವಾದರೂ ಏನು?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಗ್ರೌಂಡ್ ವಾಟರ್ ಬಗ್ಗೆ ಒಂದು ಪಾಂಪಲೆಟ್ ಮಾಡಿದ್ದಾರೆ ಅದನ್ನು ತೆಗೆದು ನೋಡಿ ತಮಗೆ ಎಲ್ಲಾ ವಿವರ ಸಿಕ್ಕುತ್ತದೆ.

ಶ್ರೀ ಸಿ. ಬೈರೇಗೌಡ.—ನಾನು ಕೇಳುವುದು ಸರ್ಕಾರದಿಂದ ನನ್ನ ಪ್ರಶ್ನೆಗೆ ಏತಕ್ಕೆ ಇಲ್ಲಿಯವರೆಗೆ ಉತ್ತರ ಬಂದಿಲ್ಲ?

ಗ್ರೌಂಡ್ ವಾಟರ್ ಎಷ್ಟಿದೆ, ಸರ್ಫೇಸ್ ವಾಟರ್ ಎಷ್ಟಿದೆ ಎಂಬುದಕ್ಕೆ ತಮ್ಮಲ್ಲಿ ಅಂಕಿ ಸಂಖ್ಯೆಗಳಿಲ್ಲವೆಂದು ತಾವು ಉತ್ತರ ಕೊಡುವುದಿಲ್ಲವೆಂದು ನಾನು ಹೇಳುತ್ತೇನೆ. ಕೆಲವು ಜಿಲ್ಲೆಗಳಲ್ಲಿ ಕೃಷ್ಣಾ ಮತ್ತು ಕಾವೇರಿ ವ್ಯಾಲಿಗಳಲ್ಲಿ ದೊರೆಯತಕ್ಕ ನೀರು ಎಷ್ಟು ಎಂಬುದನ್ನು ಅಂದಾಜು ಮಾಡಿ ಇಡೀ ರಾಜ್ಯದ ದೃಷ್ಟಿಯಿಂದ ಕಾರ್ಯಕ್ರಮ ತೆಗೆದುಕೊಳ್ಳುವುದು ಸೂಕ್ತವೆಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದು ಎಲ್ಲಾ ಮಾಡಿ ಎಕ್ಸ್‌ಸ್ ಆಗಿದೆ. ಎಷ್ಟು ಕೆಲಸಗಳನ್ನು ಮಾಡಿಸಿಕೊಡಬೇಕೆಂದು ಹೇಳಿ?

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳಾದ ಶ್ರೀ ನಗರಾಳ್ ಮತ್ತು ಚೀಫ್ ಇಂಜಿನೀಯರ್ ಅವರಿಗೆ ಈ ಸಂರ್ಭದಲ್ಲಿ ನನ್ನ ಮೆಚ್ಚಿಗೆಯನ್ನು ಸೂಚಿಸಬೇಕೆಂದು ಇಚ್ಛಿಸುತ್ತೇನೆ. ಇಲ್ಲದೆ ಹೋದರೆ ತಪ್ಪಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಾಸ್ಕರ ಶೆಟ್ಟಿ (ಕಾಪು).—ಮಾನ್ಯ ಅಧ್ಯಕ್ಷಣೀಯವರೇ, ೧೪–೧೯–೨೭–೪೩–೫೨ ಮತ್ತು ೬೦ ಇವುಗಳನ್ನು ಅನುಮೋದಿಸಿ ಕೆಲವು ಸೂಕ್ತ ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಪ್ರಾರಂಭದಲ್ಲಿ ನಮ್ಮ ವಿರೋಧಪಕ್ಷದ ನಾಯಕರು ಮಾತನಾಡುವಾಗ ನಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ಚೀಫ್ ಇಂಜಿನೀಯರ್‌ಗಳ ಸಂಖ್ಯೆ ಭೂತಾಕಾರವಾಗಿ ಬೆಳೆದಿದೆಯೆಂದು ಹೇಳಿ ಯಾವ ಆಧಾರದಮೇಲೆ ಯಾವ ವಿಷಯವನ್ನು ಪರಿಗಣನೆ ತೆಗೆದುಕೊಂಡು ಇಷ್ಟೊಂದು ಪ್ರಮಾಣದಲ್ಲಿ ಚೀಫ್ ಇಂಜಿನೀಯರ್‌ಗಳನ್ನು ನಿರ್ಮಾಣ ಮಾಡಿದ್ದಾರೆಂದು ಪ್ರಶ್ನೆ ಹಾಕಿದರು. ಅವರು ಆ ರೀತಿ ಪ್ರಶ್ನೆ ಹಾಕಿದ ಮೇಲೆ ನನಗೂ ಅನುಮಾನ ಬಂತು. ನೆರೆ ರಾಜ್ಯಗಳನ್ನು ನೋಡಿದರೆ ಮದ್ರಾಸ್ ಮತ್ತು ಆಂಧ್ರ ಪ್ರದೇಶದಲ್ಲಿಯೂ ಕೂಡ ಚೀಫ್ ಇಂಜಿನೀಯರ್‌ಗಳ ಸಂಖ್ಯೆ ಮದ್ರಾಸಿನಲ್ಲಿ ೮, ಆಂಧ್ರದಲ್ಲಿ ೬ ಇವೆ. ಆದರೆ ನಮ್ಮ ರಾಜ್ಯದಲ್ಲಿ ಯಾವ ಕೆಲಸದಭಾರದ ಮೇಲೆ ಮತ್ತು ಯಾವ ಪ್ರಾಮುಖ್ಯತೆಯನ್ನು ಗಣನೆಗೆ ತೆಗೆದುಕೊಂಡು ಇಷ್ಟೊಂದು ಸಂಖ್ಯೆಯಲ್ಲಿ ಚೀಫ್ ಇಂಜಿನೀಯರುಗಳ ನಿರ್ಮಾಣ ಮಾಡಿದೆ ಎಂದು ಮಾನ್ಯ ಮಂತ್ರಿಗಳು ಹೇಳಬೇಕು. ಈಗಾಗಲೇ ನಮ್ಮ ರಾಜ್ಯದ ಆರ್ಥಿಕ ಮಟ್ಟದಲ್ಲಿ ನಾವು ಕಷ್ಟದಲ್ಲಿರುವಾಗ ಇಷ್ಟೊಂದು ಹೆಚ್ಚು ಸಂಖ್ಯೆಯಲ್ಲಿ ಇರುವುದನ್ನು ನೋಡಿದರೆ ಈ ವಿಷಯವನ್ನು ತೀವ್ರವಾದ ರೀತಿಯಲ್ಲಿ ನೋಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಜೊತೆಗೆ ನಮ್ಮ ಇಲಾಖೆಗಳ ಆ ಕಮ್ಯೂನಿಕೇಷನ್ ಮತ್ತು ಬಿಲ್ಡಿಂಗ್ಸ್, ಇರಿಗೇಷನ್ ಮತ್ತು ವಾಟರ್ ಸಪ್ಲೈ ಒಂದೇ ಇಲಾಖೆಯ ಅಡಿಯಲ್ಲಿ ಇದ್ದು ಒಂದಕ್ಕೊಂದು ಹೊಂದಾಣಿಕೆ ಸರಿಯಾಗಿ ಇಲ್ಲದೆ ಇರುವುದರಿಂದ ಮದ್ರಾಸ್‌ನಲ್ಲಿ ಇರುವಂತೆ ಕಮ್ಯೂನಿಕೇಷನ್ ಮತ್ತು ಬಿಲ್ಡಿಂಗ್ಸ್ ಬೇರೆ, ಇರಿಗೇಷನ್ ಬೇರೆ, ವಾಟರ್‌ಸಪ್ಲೈ ಡಿವಿಜನ್ ಬೇರೆ ಈ ರೀತಿ ಸಂಪೂರ್ಣವಾಗಿ ಬೈಫರ್‌ಕೇಟ್ ಮಾಡಿ ಬೇರೆ ಬೇರೆ ಇಲಾಖೆಗಳನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ. ಹಾಗೆ ಮಾಡುವುದರಿಂದ ಅವರು ಹೆಚ್ಚು ದಕ್ಷತೆಯಿಂದ ಕೆಲಸಗಳನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಿದೆ ಎಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಾವು ಹೇಳುವುದು ಒಂದೊಂದು ಕೇಡರ್ ಬೇರೆಬೇರೆ ಮಾಡಬೇಕೆಂದು ನಿಮ್ಮ ಸಲಹೆಯೇ ?

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಆಂಧ್ರಪ್ರದೇಶದ ಪ್ರಗತಿಯ ಬಗ್ಗೆ ನೋಡಿದರೆ ಬಹಳಷ್ಟು ಸಂತೋಷವಾಗುತ್ತದೆ. ಮಾನ್ಯ ಮಂತ್ರಿಗಳು ಕೆಲವು ಅಂಕಿ ಸಂಖ್ಯೆಗಳನ್ನು ವ್ಯಕ್ತಪಡಿಸಿದ್ದಾರೆ ೭೯,೯೪೭ ಕಿಲೋಮೀಟರು ರಸ್ತೆಯನ್ನು ನಿರ್ಮಾಣ ಮಾಡಿರುವುದು ಇದು ಬಹಳ ಸಂತೋಷದ ವಿಚಾರ ಇಡೀ ರಾಷ್ಟ್ರದ ನಿರ್ಮಾಣದ ಯೋಜನೆಯನ್ನು ತೆಗೆದುಕೊಂಡರೆ ಆರನೇ ಸ್ಥಾನವನ್ನು ಹೊಂದಿದೆ. ೧೦೦ ಸ್ಕ್ವೇರ್ ಕಿಲೋಮೀಟರ್‌ಗೆ ೪೨ ಕಿಲೋಮೀಟರ್ ದೂರವಾಗಿದೆ.

ಶ್ರೀ ಟಿ ಎಂ. ಮಂಜುನಾಥ್.—ಈ ಮೂರು ವರ್ಷದಲ್ಲಿ ಆಗಿದೆಯೇ ?

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಈ ವರ್ಷದಲ್ಲಿ ಜಾಸ್ತಿಯಾಗಿದೆ. ೧೯೭೭ ರವರೆಗೆ ಕೊಟ್ಟಿದ್ದಾರೆ ನಮ್ಮ ಕಡೆ ಕಚ್ಚಾ ರೋಡುಗಳು ಜಾಸ್ತಿ ಇದ್ದು ವಿಪರೀತ ಮಳೆ ಬರುವ ಪ್ರದೇಶವಾಗಿರುವುದರಿಂದ ಎಷ್ಟು ಖರ್ಚುಮಾಡಿದರೂ ಕೂಡ ರಸ್ತೆಗಳು ಹಾಳಾಗುತ್ತಿವೆ. ಆದುದರಿಂದ ಡಾಂಬರ್ ಹಾಕಿ ಬೇಗ ರಸ್ತೆ ಮಾಡದೇ ಇದ್ದರೆ, ರಸ್ತೆ ನಿಲ್ಲುವುದಿಲ್ಲ. ಆದರಲ್ಲೂ ಮಲೆನಾಡು ಪ್ರದೇಶದಲ್ಲಿ ರಸ್ತೆಗಳಿಗೆ ಡಾಂಬರ್ ಹಾಕಿಸಲೇಬೇಕು. ಇಲ್ಲದಿದ್ದರೆ, ರಸ್ತೆಗಳಿಗೆ ವೆಚ್ಚಮಾಡಿದಂತಹ ಹಣ ಪೋಲಾಗುತ್ತದೆ ಎಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ಬಯಸುತ್ತೇನೆ.

12–30 P. M.

೭೯ ಸಾವಿರ ಕಿಲೋಮೀಟರ್ ರಸ್ತೆಯಲ್ಲಿ ೫೧,೪೯೯ ಕಿಲೋಮೀಟರ್ ರಸ್ತೆ ಲೋಕೋಪಯೋಗಿ ಇಲಾಖೆ ಕೈಕೆಳಗೆ. ೨೫,೭೪೪ ಕಿಲೋಮೀಟರ್ ರಸ್ತೆ ತಾಲ್ಲೂಕು ಬೋರ್ಡು ಕೈಕೆಳಗೆ, ೨,೭೧೪ ಕಿಲೋಮೀಟರ್ ರಸ್ತೆ ಅರಣ್ಯ ಇಲಾಖೆ ಕೈಕೆಳಗೆ ಹಾಗೂ ಇನ್ನೂ ಇತರ ಬೇರೆ ಬೇರೆ ಇಲಾಖೆಗಳ ಕೈಕೆಳಗೆ ಇದೆ, ೬೪ ಪರ್ಸೆಂಟ್ ರಸ್ತೆ ಮಾತ್ರ ಲೋಕೋಪಯೋಗಿ ಇಲಾಖೆ ಕೈಕೆಳಗೆ ಇದೆ ಎಂದು ಹೇಳಿದ್ದೀರಿ. ತಾಲ್ಲೂಕು ಬೋರ್ಡು ಅರಣ್ಯ ಇಲಾಖೆ, ಹಾಗೂ ಇನ್ನಿತರ ಬೇರೆ ಬೇರೆ ಇಲಾಖೆಗಳ ಕೈಕೆಳಗೆ ಇರತಕ್ಕ ರಸ್ತೆಗಳನ್ನು ನೋಡಿದರೆ, ಆ ರಸ್ತೆಗಳ ಮೇಲೆ ನಡೆಯುವುದಕ್ಕೆ ಸಾಧ್ಯವಿಲ್ಲ ಕೆಲವು ಕಡೆ ರಸ್ತೆಗಳು ಇವೆಯೋ ಇಲ್ಲವೋ ಎನ್ನುವುದು ಗೊತ್ತಾಗುವುದಿಲ್ಲ ಕಾರಣ ತಾಲ್ಲೂಕು ಬೋರ್ಡಿನಲ್ಲಿ ಅವರ ನೌಕರರಿಗೆ ಕೆಲವು ಸಂದರ್ಭದಲ್ಲಿ ಸಂಬಳ ಕೊಡುವುದಕ್ಕೆ ಹಣ ಇರುವುದಿಲ್ಲ, ತಾಲ್ಲೂಕ್ ಬೋರ್ಡಿನಿಂದ ರಸ್ತೆ ಆಗಿರುವುದು ಇದೆಯೋ ಇಲ್ಲವೋ ಎನ್ನುವ ಅನುಮಾನಕರವಾದ ಪರಿಸ್ಥಿತಿಯಲ್ಲಿ ಇರುತ್ತವೆ ಈ ಕೆಲಸಕ್ಕಾಗಿ ದುಡ್ಡನ್ನು ತುಂಬಾ ವ್ಯಯ ಮಾಡಿದ್ದಾರೆ, ೭೯ ಸಾವಿರ ಕಿಲೋಮೀಟರ್ಸ್ ಉದ್ದವನ್ನು ಏನು ತೋರಿಸಿದ್ದಾರೆ, ಆ ರಸ್ತೆ ಸಂಪೂರ್ಣವಾಗಿ ಇರಲಿಕ್ಕೆ ಇಲ್ಲ ಆದುದರಿಂದ ಎಲ್ಲಾ ರಸ್ತೆಗಳನ್ನು ತಾವು ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿ ತೆಗೆದುಕೊಂಡು ಅದರ ಕೆಲಸ ಕಾರ್ಯಗಳನ್ನು ನಿರ್ವಹಣೆ ಮಾಡಬೇಕು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ತಾಲ್ಲೂಕು ಬೋರ್ಡುಗಳಿಗೂ ಸರ್ಕಾರವೇ ಹಣ ಒದಗಿಸಬೇಕು ಇನ್ನಿತರ ಇಲಾಖೆಗಳಿಗೂ ಸರ್ಕಾರವೇ ಹಣ ಒದಗಿಸಬೇಕಾಗಿರುವುದರಿಂದ ತಾಲ್ಲೂಕು ಬೋರ್ಡು ರಸ್ತೆ, ಲೋಕೋಪಯೋಗಿ ರಸ್ತೆ, ಫಾರೆಸ್ಟ್ ರಸ್ತೆ ಹಾಗೂ ಇನ್ನಿತರ ಇಲಾಖೆಗಳ ರಸ್ತೆ ಎಂದು ಇರುವುದು ಸರಿಯಲ್ಲ. ಒಂದೇ ಏಜನ್ಸಿಯ ಅಡಿಯಲ್ಲಿ ರಸ್ತೆಗಳು ಇರಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಮೇಲಾಗಿ ಮಾನ್ಯ ವೀರಪ್ಪಗೌಡರು ಹೇಳಿದರು. ಎರಡು ವರ್ಷಗಳ ಹಿಂದೆ ನಾವು ಕೂಡ ಹಳ್ಳಿಯ ಕಷ್ಟಪರಿಸ್ಥಿತಿಯನ್ನು ಹೇಳಿ, ಯಾವ ರೀತಿ ಹಳ್ಳಿ ಸರ್ವತೋಮುಖವಾಗಿ ಅಭಿವೃದ್ಧಿ ಆಗಲಿಕ್ಕೆ ಏನೇನು ಬೇಕು. ಆದರಲ್ಲೂ ಸಾರಿಗೆ ಸಂಪರ್ಕ ಇವುಗಳ ಅವಶ್ಯಕತೆಗಳನ್ನು ಕಂಡು ೨೮ ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಪ್ರತಿ ತಾಲ್ಲೂಕಿಗೆ ೫೧–೫೦ ಮೈಲಿ ರಸ್ತೆಗಳನ್ನು ಮಾಡುವ ಗ್ರಾಮೀಣ ರಸ್ತೆ ನಿರ್ಮಾಣ ಯೋಜನೆ ಕೈಗೊಂಡಿದ್ದೆವು. ಎಷ್ಟು ಉತ್ಸುಕತೆಯಿಂದ ಇದರ ಉದ್ಘಾಟನೆ ನಡೆಯಿತೋ, ಅಷ್ಟೇ ಒಂದು ವೇಗದಿಂದ ಈ ರಸ್ತೆ ಕೆಲಸ ಕುಂಠಿತ ಕೂಡ ಆಗಿದೆ. ನಾನು ತಿಳಿದ ಮಟ್ಟಿಗೆ ಈ ಗ್ರಾಮೀಣ ರಸ್ತೆ ಯೋಜನೆ ಕಾರ್ಯದಲ್ಲಿ ತಾವು ಸಾಧಾರಣವಾಗಿ ೧೪,೨೭೬ ಮೈಲಿ ರಸ್ತೆ ಕೆಲಸವನ್ನು ಪ್ರಾರಂಭ ಮಾಡಿದಿರಿ. ಇದರಲ್ಲಿ ೭,೫೦೦ ಮೈಲಿ ರಸ್ತೆಯನ್ನು ತಾವು ಅರ್ಧಂಬರ್ಧ ಮುಗಿಸಿದಿರಿ, ಇದಕ್ಕೆ ತಾವು ಆರು ಕೋಟಿ ರೂಪಾಯಿಗಳ ತನಕ ಖರ್ಚು ಮಾಡಿದ್ದೀರಿ. ಆರು ಕೋಟಿ ರೂಪಾಯಿಗಳ ತನಕ ಖರ್ಚು ಮಾಡಿ. ಅರ್ಧಂಬರ್ಧ ಆಗಿರುವ ರಸ್ತೆ ಕೆಲವು ಕಡೆ, ಅದರಲ್ಲೂ ಮಲೆನಾಡಿನ ಕಡೆಯಲ್ಲಿ ಅರ್ಧಕೂಡ ಆಗಿದ್ದು ವಿಪರೀತವಾಗಿ ಮಳೆ ಬಿದ್ದು ಹರಿದು, ಬೇರೆ ಬೇರೆ ರೀತಿಯಲ್ಲಿ ನೆರೆಯಿಂದ ಕೊಚ್ಚಿಕೊಂಡು

ಹೋಗಿದೆ. ಮುಂದಿನ ಸಲ ರಸ್ತೆ ಮಾಡುವ ಯೋಜನೆ ಕೈಕೊಳ್ಳುವುದಕ್ಕೆ ಮುಂಚೆ, ಗ್ರಾಮಾಂತರ ಪ್ರದೇಶಗಳಲ್ಲಿ ಅಪೂರ್ಣವಾಗಿರತಕ್ಕ ರಸ್ತೆಗಳನ್ನು ಸಂಪೂರ್ಣವಾಗಿ ಮಾಡುವುದಕ್ಕೆ ತಾವು ದುಡ್ಡು ಒದಗಿಸಿ. ಇಲ್ಲದಿದ್ದರೆ ಜನರಲ್ಲಿ ತಪ್ಪು ಅಭಿಪ್ರಾಯ ಬರುತ್ತೆ, ಹಳ್ಳಿ ಪ್ರದೇಶದಲ್ಲಿ ಸರ್ಕಾರ ಏನಾದರೂ ಕೆಲಸ ಮಾಡಿಸುತ್ತಾ ಇರಬೇಕು. ಕೇವಲ ನಗರ ಪ್ರದೇಶ ನೋಡುವುದು ಸರಿಯಲ್ಲ. ಹಳ್ಳಿಯಲ್ಲಿ ಕೆಲಸ ನಿಂತು ಹೋದರೆ ನಮ್ಮ ಸರ್ಕಾರ ನೋಡುವುದಿಲ್ಲ ಎನ್ನುವ ಪರಿಸ್ಥಿತಿಗೆ ಜನ ಬಂದಿದ್ದಾರೆ ಅಂಥ ಒಂದು ಸಂಶಯ ಉಂಟು ಮಾಡುವುದಕ್ಕೆ ಬಿಡಬಾರದು. ಆದುದರಿಂದ ಹಳ್ಳಿ ಪ್ರದೇಶದಲ್ಲಿ ಸಣ್ಣ ಪುಟ್ಟ ಕೆಲಸ ಆಗುತ್ತಾ ಇದ್ದರೆ; ನಮ್ಮ ಸರ್ಕಾರ ಕೆಲಸ ಮಾಡುತ್ತಾ ಇದೆ, ನಮ್ಮನ್ನು ನೋಡುತ್ತದೆ ಎನ್ನುವ ಮನೋಭಾವ ಅವರಿಗೆ ಬರುತ್ತದೆ. ಹಳ್ಳಿ ಪ್ರದೇಶದಲ್ಲಿ ಗ್ರಾಮಾಂತರ ರಸ್ತೆ ಯೋಜನೆಯನ್ನು ಪುನ ಪ್ರಾರಂಭಿಸಿ ಅಪೂರ್ಣವಾಗಿರುವ ರಸ್ತೆ ಏನು ಇದೆ ಅದನ್ನು ಸಂಪೂರ್ಣಗೊಳಿಸಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ನಮ್ಮ ರಸ್ತೆ ನಿರ್ಮಾಣಕ್ಕೆ, ಹೊಸ ರಸ್ತೆಗಳನ್ನು ಮಾಡಲಿಕ್ಕಾಗಿ ಈ ಸಲದ ಬಡ್ಜೆಟ್ಟಿನಲ್ಲಿ ಯಾವ ಪುಟಗಳನ್ನು ತೆಗೆದುನೋಡಿದರೂ ಒಂದು ಪೈ ಕೂಡ ಇದರಲ್ಲಿ ಇಡಲಿಲ್ಲ. ಇದು ಒಂದು ಬೇಸರದ ವ್ಯಸನಕರವಾದ ವಿಷಯವಾಗಿದೆ. ತಾವು ಹೇಳಿದ್ದೀರಿ ಬ್ರಿಡ್ಜ್ ಮತ್ತು ರಸ್ತೆಗಳ ಮೇಲಿನ ಏನು ತೆರಿಗೆಗಳು ಇವೆ ವಾಹನಗಳ ಮೇಲಿನ ತೆರಿಗೆ ಹತ್ತು ಪರ್ಸೆಂಟ್ ಲೆವಿ ಹಾಕಿ ಎರಡು ಕೋಟಿರೂಪಾಯಿಗಳನ್ನು ಸಂಪಾದನೆ ಮಾಡುವ ಅಂದಾಜು ತಮಗೆ ಇದೆ. ಅದರಲ್ಲಿ ನಾವು ಹೊಸ ರಸ್ತೆಗಳನ್ನು ನಿರ್ಮಾಣ ಮಾಡುತ್ತೇವೆ ಆ ರೀತಿಯಲ್ಲಿ ಅರ್ಥಮಂತ್ರಿಗಳ ಬಡ್ಜೆಟ್ ಭಾಷಣ ಇದೆ. ಆದರೆ ಇದರಿಂದ ಏನಾದರೂ ಪುನಃ ಗ್ರಾಮಾಂತರದ ಜನತೆಗೆ ಆಹಾರ ಸಾಮಗ್ರಿಗಳ ಮೇಲೆ, ಆಹಾರ ವಸ್ತುಗಳ ಮೇಲೆ, ನಿತ್ಯೋಪಯೋಗಿ ವಸ್ತುಗಳ ಮೇಲೆ ಹೆಚ್ಚಿಗೆ ತೆರಿಗೆ ಬೀಳುವ ಪರಿಸ್ಥಿತಿ ಇದ್ದರೆ, ನಾನು ಆರ್ಥಿಕ ತಜ್ಞನಲ್ಲ, ಈ ವಿಚಾರ ಹೆಚ್ಚಿಗೆ ಹೇಳಲಿಕ್ಕೆ ಬರುವುದಿಲ್ಲ. ಅಂಥ ಪರಿಸ್ಥಿತಿ ಇದ್ದರೆ, ನಿಜವಾಗಿಯೂ ಈ ಹತ್ತು ಪರ್ಸೆಂಟ್ ಏನು ಸರ್‌ಚಾರ್ಜು ಹಾಕುತ್ತಿದ್ದೀರಿ, ಅದನ್ನು ಹಾಕಬಾರದು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಿ, ಬೇರೆ ಮೂಲಗಳಿಂದ ರಸ್ತೆಗಳ ನಿರ್ಮಾಣಕ್ಕೆ ತಾವು ಹಣವನ್ನು ಕಂಡು ಹಿಡಿಯಬೇಕು ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಒಂದು ಕಡೆ ಹಣ ಬೇಕು, ತೆರಿಗೆ ಹಾಕಬಾರದು.

ಶ್ರೀ ಬಿ. ಬಾಸ್ಕರ ಶೆಟ್ಟಿ.—ನಾನು ಆರ್ಥಿಕ ತಜ್ಞನಲ್ಲ, ಆಳವಾಗಿ ಅಭ್ಯಾಸ ಮಾಡಿ ಹೇಳುವುದಿಲ್ಲ. ನಿತ್ಯೋಪಯೋಗಿ ವಸ್ತುಗಳ ಮೇಲೆ ಅಂಥಾದ್ದು ಏನಾದರೂ ಮಾಡಿದ್ರೆ ಎಂಬುದನ್ನು ಪರಿಗಣನೆಗೆ ತೆಗೆದುಕೊಂಡು ಇದನ್ನು ನೋಡಬೇಕು. ಬೇರೆ ಮೂಲಗಳಿಂದ ಹಣ ಸಿಕ್ಕುವುದು ಇದ್ದರೆ, ಅದನ್ನು ಈ ಕೆಲಸಕ್ಕೆ ದೊರಕಿಸಬೇಕು ಎಂದು ಒತ್ತಾಯ ಮಾಡುತ್ತೇನೆ. ರಸ್ತೆಗಳಿಗೆ ೧೩.೩೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಹೋದ ವರ್ಷಕ್ಕಿಂತ ಹಣ ಜಾಸ್ತಿ ಇಟ್ಟಿದ್ದಾರೆ. ರಸ್ತೆಗಳು ಎಷ್ಟು ಎಲ್ಲೆಲ್ಲಿ ಕೆಟ್ಟು ಹೋಗಿವೆ, ಎಲ್ಲೆಲ್ಲಿ ಹೊಂಡ ಬಿದ್ದಿವೆ ಅಂಥ ರಸ್ತೆಗಳನ್ನು ಒಳ್ಳೆಯ ರೀತಿಯಲ್ಲಿ ಇಡುವಂತೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅನಂತರ ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ರಸ್ತೆಗಳ ವ್ಯವಸ್ಥೆ ಅಷ್ಟು ಚೆನ್ನಾಗಿಲ್ಲ. ಅದು ಕೂಡ ವೆಸ್ಟ್‌ಕೋಸ್ಟ್ ರೋಡ್ ನಿರ್ಮಾಣವಾದ ನಂತರ, ವಿಪರೀತ ವಾಹನಗಳು ರಸ್ತೆಯಲ್ಲಿ ಓಡಾಡುವುದರಿಂದ ಸಂಪೂರ್ಣವಾಗಿ ರಸ್ತೆಗಳು ಕೆಟ್ಟು ಹೋಗಿವೆ. ಈ ವಿಚಾರದಲ್ಲಿ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ಅನೇಕ ಬಾರಿ ತಂದಿದ್ದೇನೆ. ನಮ್ಮ ರಸ್ತೆಗಳ ವಿಚಾರದಲ್ಲಿ ಹೆಚ್ಚಿನ ಗಮನಕೊಡಬೇಕು ಎಂದು ನಮಗೆ ಬರುವ ಹಾಸನ ಮಂಗಳೂರು ರೈಲ್ವೆ ಲೈನ್ ಅರ್ಧದಲ್ಲಿಯೇ ನಿಂತು ಹೋಯಿತು. ಇದರ ವಿಚಾರ ಏನು ಎಂಬುದು ಗೊತ್ತಿಲ್ಲ, ಇದರ ಕೆಲಸಕಾರ್ಯಗಳು ಮಂದಗತಿಯಲ್ಲಿ ಸಾಗಿದೆ. ರೈಲ್ವೆ ಯೋಜನೆಯನ್ನು ಆದಷ್ಟು ತೀವ್ರಗೊಳಿಸಿ, ಮಲೆನಾಡು ಪ್ರದೇಶ ಪಡೆ ಕರಾವಳಿ ರಸ್ತೆಗಳಿಗೆ ಸಂಪೂರ್ಣವಾಗಿ ಡಾಂಬರ್ ಹಾಕಬೇಕು ಎಂದು ಪುನಃ ಇದೇ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಕೆಲವು ಕಡೆ ಗ್ರಾಮಾಂತರ ರಸ್ತೆಗಳು, ಇನ್ನಿತರ ರಸ್ತೆಗಳು ಮಳೆಗಾಲದಲ್ಲಿ ಸಂಪೂರ್ಣವಾಗಿ ಇಬ್ಭಾಗವಾಗುತ್ತದೆ. ಹಳ್ಳಿ ಪ್ರದೇಶದಲ್ಲಿ ಸಣ್ಣ ಸಣ್ಣ ನಾಲೆಗಳು, ಸ್ಟ್ರೀಮ್‌ಗಳು ಹರಿದು ಹೋಗುತ್ತಾ ಇರುವುದರಿಂದ ಮಳೆಗಾಲದಲ್ಲಿ ಸುಮಾರು ೫–೬ ತಿಂಗಳು ರಸ್ತೆಗಳಲ್ಲಿ ಓಡಾಡುವುದಕ್ಕೆ ಆಗುವುದಿಲ್ಲ. ಒಂದೇ ಹಳ್ಳಿಯ ರಸ್ತೆಗಳು ಎರಡು ಇಬ್ಭಾಗವಾಗಿ ಹಳ್ಳಿ ಸಂಪರ್ಕಗಳು ಕಡಿದುಹೋಗುವ ಪರಿಸ್ಥಿತಿ ಬಂದಿದೆ. ಅಂಥ ಸಂದರ್ಭದಲ್ಲಿ ಸಣ್ಣ ಸಣ್ಣ ಸೇತುವೆಗಳು, ಮೋರಿಗಳು ಏನು ಇದೆ ಇವುಗಳನ್ನು ಆದಷ್ಟು ಜಾಗ್ರತೆ ನಿರ್ಮಾಣ ಮಾಡಬೇಕು, ಇಲ್ಲದಿದ್ದರೆ ಹಳ್ಳಿ ಜನತೆಗೆ ತೊಂದರೆ ಆಗುತ್ತದೆ. ೫–೬ ತಿಂಗಳ ಕಾಲ ಅವರಿಗೆ ಸಂಪರ್ಕ ಕಡಿದುಹೋಗುತ್ತದೆ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ.

ಇನ್ನು ನಮ್ಮ ಬಂದರುಗಳ ವಿಚಾರದಲ್ಲಿ ಕೇಂದ್ರಸರ್ಕಾರದವರು ಅದರಲ್ಲೂ ನಮ್ಮ ಕಾರವಾರ ಬಂದರಿಗೆ ಹೆಚ್ಚಿನ ಹಣವನ್ನು ಒದಗಿಸಿಲ್ಲ. ಮಾತ್ರವಲ್ಲದೆ ಪ್ಲಾನಿಂಗ್ ಕಮಿಷನ್‌ನವರು ಕೂಡ ಅದಕ್ಕೆ ಹಣವನ್ನು ಒದಗಿಸುತ್ತಾರೆಯೋ ಇಲ್ಲವೋ ಎನ್ನುವ ಭಯ ಆವರಿಸಿದೆಯೆಂದು ಕೆಲವರು ವ್ಯಕ್ತಪಡಿಸಿದರು ಸಾಧಾರಣವಾಗಿ ೫½ ಕೋಟಿ ರೂಪಾಯಿಯ ಅಂದಾಜು ವೆಚ್ಚವನ್ನು ಈ ಕಾರವಾರ ಬಂದರಿನ ಯೋಜನೆಗೆ ಹಾಕಿ ಅದು ತೀವ್ರಗತಿಯಲ್ಲಿದೆ ಎಂದು ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಅದು ಬಹಳ ಪ್ರಯೋಜನಕಾರಿಯಾದಂಥ ಬಂದರಾಗುತ್ತದೆ ಮಾತ್ರವಲ್ಲದೆ ಅದು ನೈಸರ್ಗಿಕವಾದ ಬಂದರು ಇದು ಯಾವಾಗಲೋ ಆಗಬೇಕಾಗಿತ್ತು. ದುರಾದೃಷ್ಟವಶಾತ್ ಇನ್ನೂ ಆಗಿಲ್ಲ. ಅದರ ಕೆಲಸ ಪ್ರಾರಂಭ ಮಾಡಿ ಈ ಬಂದರಿನ ವಿಚಾರದಲ್ಲಿ ೫೦ ಲಕ್ಷ ರೂಪಾಯಿಗಳನ್ನು ತಾವು ಈಗಾಗಲೇ ಖರ್ಚು ಮಾಡಿದ್ದೀರಿ. ಆದಕಾರಣ ಇಷ್ಟನ್ನು ಖರ್ಚು ಮಾಡಿ ಆದಮೇಲೆ ಆ ಕೆಲಸ ಬಹಳಷ್ಟು ಸ್ಥಗಿತಗೊಂಡಿದೆಯೆಂದು ಈ ವಿಚಾರ ಗಮನಕ್ಕೆ ಬಂದಿದೆ. ಕೇಂದ್ರಸರ್ಕಾರದವರು ಈ ತಾಂತ್ರಿಕ ಯೋಜನೆಗೆ ಕೂಡ ಅವರು ಕ್ಲಿಯರೆನ್ಸ್ ಕೊಡಲಿಲ್ಲ ಎಂದು ತಮ್ಮ ರಿಪೋರ್ಟ್‌ನಲ್ಲಿ ತೋರಿಸಿದ್ದೀರಿ. ಆದಕ್ಕೆ ತಾವು ಆದಷ್ಟು ಕೇಂದ್ರಸರ್ಕಾರದವರ ಮೇಲೆ ಒತ್ತಡವನ್ನು ಹಾಕಿ, ವಿಚಾರದಲ್ಲಿ ಅವರು ಏತಕ್ಕೆ ಈ ತರಹವಾದ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆಯೋ ಅದನ್ನು ಅವರ ಗಮನಕ್ಕೆ ತಂದು ಕಾರವಾರ ಬಂದರಿನ ಯೋಜನೆ ತ್ವರಿತಗತಿಯಲ್ಲಿ ಆಗುವಂತೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ನಾವು ಹಾಕಿದ ಅರ್ಧ ಕೋಟಿ ರೂಪಾಯಿ ಕೂಡ ನೀರು ಪಾಲಾಗುತ್ತದೆ ಎನ್ನುವ ಹೆದರಿಕೆ ನನಗಾದರೂ ಆವರಿಸಿಕೊಂಡಿದೆ. ಇದನ್ನು ಉಳಿಸಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಸಣ್ಣ ನೀರಾವರಿ ಯೋಜನೆ ವಿಚಾರದಲ್ಲಿ ಬಹಳಷ್ಟು ಜನರು ಮಾತನಾಡಿದ್ದಾರೆ. ಮಾನ್ಯ ಮಂತ್ರಿಗಳು ಈ ನೀರಾವರಿ ವಿಚಾರದಲ್ಲಿ ಹೆಚ್ಚಿನ ನಿಗಾ ತೆಗೆದುಕೊಂಡು ತ್ವರಿತಗತಿಯಲ್ಲಿ ಮಂಜೂರಾತಿ ದೊರೆಯುವಂತೆ ಮಾಡುತ್ತಾರೆ ಎನ್ನುವ ವಿಚಾರ ಕೇಳಿದಾಗ ನನಗೆ ಬಹಳಷ್ಟು ಸಂತೋಷವಾಯಿತು. ಈ ವರ್ಷದಲ್ಲಿ ಕೂಡ ತಾವು ಸಾಧಾರಣವಾಗಿ ೭ ಕೋಟಿ ರೂಪಾಯಿ ಚಿಲ್ಲರೆ ಈ ಸಣ್ಣ ನೀರಾವರಿ ಯೋಜನೆಗಾಗಿ ಒದಗಿಸಿದ್ದೀರಿ. ಈಗ ಈ ನೀರಾವರಿ ಯೋಜನೆಗಳನ್ನು ಮಾಡುವುದಕ್ಕಿಂತ ಮುಂಚೆ ನಾನು ಒಂದು ಸಲಹೆಯನ್ನು ಅವರ ಮುಂದೆ ಇರಬೇಕೆಂದು ಇಚ್ಛೆಪಡುತ್ತೇನೆ. ನಮ್ಮ ಕಡೆ ಸಣ್ಣ ನೀರಾವರಿ ಯೋಜನೆ ಎಂದರೆ ಲಿಫ್ಟ್ ಇರಿಗೇಷನ್ ಸ್ಕೀಮ್ ಇದೆ. ಈ ಕಡೆ ವಿಪರೀತ ಮಳೆ ಬರುವ ಕಾರಣ ಇದು ಸಮುದ್ರದ ಹತ್ತಿರ ಇರುವ ಕಾರಣ ಉಪ್ಪು ನೀರು ಹೊಲಗಳಿಗೆ ಬಂದು ಬೆಳೆಗೆ ಹಾನಿಯಾಗುತ್ತಿದೆ. ಈ ಉಪ್ಪು ನೀರನ್ನು ತಡೆಗಟ್ಟುವ ಸಾಲ್ಟ್ ವಾಟರ್ ಎಕ್ಸ್‌ಕ್ಲೂಷನ್ ಡ್ಯಾಮ್ ಇದನ್ನು ಹೆಚ್ಚು ಹೆಚ್ಚಾಗಿ ಮಾಡಬೇಕು. ಈಗಾಗಲೇ ಅಣೆಕಟ್ಟುಗಳನ್ನು ಮಾಡಿದ್ದಾರೆ. ನನಗೆ ತಿಳಿದ ಮಟ್ಟಿಗೆ ಇಂತಹ ಅಣೆಕಟ್ಟುಗಳು ನಿರ್ಮಾಣವಾಗಿವೆಯೋ ಅದರಲ್ಲಿ ನೂರಕ್ಕೆ ೯೦ರಷ್ಟು ಅಣೆಕಟ್ಟುಗಳಲ್ಲಿ ನೀರು ನಿಲ್ಲುವುದಿಲ್ಲ. ಇದು ಕಂಟ್ರಾಕ್ಟರುಗಳ ದೋಷದಿಂದ ಆಗಿದೆಯೋ, ಇಲ್ಲದಿದ್ದರೆ ತಾಂತ್ರಿಕ ದೋಷದಿಂದಾಗಿದೆಯೋ ಯಾವ ವಿಚಾರವನ್ನು ಹೇಳುವುದಕ್ಕೆ ಬರುವುದಿಲ್ಲ. ನನ್ನ ಕ್ಷೇತ್ರದಲ್ಲಿ ೭-೮ ಸಾಲ್ಟ್ ವಾಟರ್ ಎಕ್ಸ್‌ಕ್ಲೂಷನ್ ಡ್ಯಾಮ್ಸ್ ಇವೆ. ಅವಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾರೆ. ಈ ಕೆಲಸವನ್ನು ಪ್ರಾರಂಭಿಸುವಾಗ ಎಷ್ಟು ಬೆಳೆ ಜಾಸ್ತಿ ಬರುತ್ತದೆಯೋ ಅಷ್ಟು ಹೆಚ್ಚು ಬತ್ತವನ್ನು ಹೆಚ್ಚು ಬೆಳೆಸುತ್ತಾರೆ ಎಂಬ ಇರಾದೆಯನ್ನು ಇಟ್ಟುಕೊಂಡು, ಅಂಕಿಸಂಖ್ಯೆಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಾರೆ. ಆದರೆ ದುರಾದೃಷ್ಟವಶಾತ್ ಏನಾಗುತ್ತದೆ ಎಂದರೆ ಇಂಜಿನಿಯರ್‌ಗಳು, ಕಂಟ್ರಾಕ್ಟರುಗಳು ಒಟ್ಟಾಗಿ ಸೇರಿಯೋ ಇಲ್ಲದಿದ್ದರೆ ತಾಂತ್ರಿಕ ಜ್ಞಾನ ಇಲ್ಲದೆಯೋ, ಬೇರೆ ಬೇರೆ ಕಡೆಗಳಲ್ಲಿ ಮಣ್ಣಿನ ಪರಿಗಣನೆ ಹವಾಮಾನ ವ್ಯತ್ಯಾಸ ಇರುವುದರಿಂದ ತಾಂತ್ರಿಕಜ್ಞರಿಗೆ ಸರಿಯಾದ ಐಡಿಯಾ ಬರದೆ ಇದೆಯೋ ಏನೋ ಈ ವಿಚಾರದಲ್ಲಿ ಹೇಳುವುದಕ್ಕೆ ಬರುವುದಿಲ್ಲ. ಅಂತೂ ಎಲ್ಲಿ ನೋಡಿದರೂ ನಿರ್ಮಾಣವಾದ ವೆಂಟೆಡ್ ಡ್ಯಾಮ್ಸ್ ಸಾಲ್ಟ್ ವಾಟರ್ ಎಕ್ಸ್‌ಕ್ಲೂಷನ್ ಡ್ಯಾಮ್ಸ್ ಏನು ಇವೆ ಅದರಲ್ಲಿ ನೂರಕ್ಕೆ ತೊಂಬತ್ತರಷ್ಟು ಡ್ಯಾಮ್‌ಗಳಲ್ಲಿ ನೀರು ನಿಲ್ಲುವುದಿಲ್ಲ. ಇದರಿಂದ ರೈತರಿಗೆ ಯಾವ ಪ್ರಯೋಜನ ಆಗುವುದಿಲ್ಲ. ಕೆಲವು ಕಡೆ ಪ್ರಯೋಜನ ಆಗುವ ಬದಲು ಎರಡನೇ ಬೆಳೆ ಮೂರನೇ ಬೆಳೆ ಆಗದ ಪರಿಸ್ಥಿತಿಯಲ್ಲಿ ಇದೆ. ಕೆಲವು ಕಡೆ ಉಪ್ಪು ನೀರು ಬಂದು, ಕೆಲವು ಸಂದರ್ಭದಲ್ಲಿ ಆಗುವ ಬೆಳೆ ಕೂಡ ಆಗದ ಪರಿಸ್ಥಿತಿಯಲ್ಲಿ ಇವೆ. ಇದನ್ನು ಪರಿಶೀಲನೆ ಮಾಡುವುದಕ್ಕೆ ಏನಾದರೂ ಪರಿಶೀಲನಾ ವಿಭಾಗವನ್ನು ಮಾಡಿ ಹಿಂದೆ ಆದ ಕೆಲಸಗಳಲ್ಲಿ ಎಷ್ಟೆಷ್ಟು ಕಾಮಗಾರಿಗಳು, ಎಷ್ಟು ಕೆಲಸ ಮಾಡಿದ್ದಾರೆ ನೀರಾವರಿ ಯೋಜನೆಗಳಲ್ಲಿ ಎಷ್ಟು ಅಚ್ಚುಕಟ್ಟು ನೀರು ಹೋಗುತ್ತಿದೆ ಎಂಬ ವಿಚಾರವನ್ನೆಲ್ಲ ತಾಂತ್ರಿಕ ತಜ್ಞರಿಂದ ತಿಳಿದು ಸೂಕ್ತವಾದ ವ್ಯವಸ್ಥೆಯನ್ನು ಮಾಡಬೇಕು ಮತ್ತು ರಿಪೇರಿ ವಗೈರಿ ಆಗುವುದಿದ್ದರೆ ಮಾಡಬೇಕು ಎಂದು ತಮ್ಮೊಡನೆ ಈ ಸಂದರ್ಭದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆಮೇಲೆ ನಮ್ಮಲ್ಲಿ ಹೆಚ್ಚಾಗಿ ದೊಡ್ಡ ನೀರಾವರಿ ಯೋಜನೆಗಳು ಇಲ್ಲದೆ ಇರುವುದರಿಂದ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿಗೆ ಲಿಫ್ಟ್ ಇರಿಗೇಷನ್ ಮತ್ತು ಸಣ್ಣ ಸಣ್ಣ ಸ್ಕೀಮ್ಸ್ ಹಾಕುವಲ್ಲಿ ವೆಂಟೆಡ್ ಡ್ಯಾಮ್ಸ್ ಏನು ಇವೆ ಅದನ್ನು ತಾವು ಹಾಕಬೇಕು ಮಾತ್ರವಲ್ಲದೆ ನಮ್ಮಲ್ಲಿ ದೊಡ್ಡ ದೊಡ್ಡ ಸಮುದ್ರಕ್ಕೆ ಹೋಗುವ ಇಲ್ಲವೆ ಹೊಳೆ ಸೇರುವ ದೊಡ್ಡ ದೊಡ್ಡ ಸ್ಟ್ರೀಮ್ಸ್‌ಗಳು, ಅದರಲ್ಲಿ ಸಿಲ್ಟ್ ಅಂದರೆ ಕೆಸರು ತುಂಬಿಕೊಂಡಿದ್ದು ಈಗ ನೀರು ಗದ್ದೆಯಲ್ಲಿ ಹೋಗುವಂಥ

ಪರಿಸ್ಥಿತಿಯಲ್ಲಿ ಇದೆ. ಕೇವು ವ್ಯವಸಾಯಂ ಭೂಮಿಯಲ್ಲಿ ಮಳೆ ವಿಪರೀತ ಬರುವಾಗ ಭೂಮಿ ಮೇಲೆ ನೀರು ನಂಗ್ಗಿ ಅದರ ಆಳ ಕಡಿಮೆಯಾಗಿ ಸಿಲ್ಟ್ ತುಂಬಿಕೊಂಡು ಒಂದನೇ ಬೆಳೆ ಆಗುವುದಿಲ್ಲ. ನಮ್ಮಲ್ಲಿ ಹೆಚ್ಚಿನ ಗ್ರಾಮಂಗಳಲ್ಲಿ ಈ ಸ್ಟ್ರೀಮ್‌ಗಳು ಒಂದು ಎರಡು ಇದ್ದೇ ಇರುತ್ತವೆ. ಸ್ಟ್ರೀಮ್‌ಗಳಲ್ಲಿ ಇರುವ ಕೆಸರನ್ನು. ಹೂಳನ್ನು ತೆಗೆಸುವ ಒಂದು ಯೋಜನೆಯನ್ನು ತಾವು ತೀವ್ರಗತಿಯಿಂದ ಮಾಡಬೇಕು. ಈ ಸ್ಟ್ರೀಮ್‌ಗಳಲ್ಲಿರುವ ಹೂಳನ್ನು ತೆಗೆಸಿದರೆ ನನ್ನ ಅಂದಾಜಿನಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ೨ ಸಾವಿರ ಎಕರೆಯಲ್ಲಿ ಒಂದನೇ ಬೆಳೆಯಲ್ಲಿ ಬತ್ತದ ಪೈರನ್ನು ಜಾಸ್ತಿ ಬೆಳೆಸಬಹುದು. ಅದಕ್ಕಾಗಿ ಇದರ ಬಗ್ಗೆ ತೀವ್ರ ಗಮನವನ್ನು ಕೊಡಬೇಕೆಂದು ಈ ಸಮಯದಲ್ಲಿ ಒತ್ತಾಯ ಮಾಡಿ ನನಗೆ ಕೊಟ್ಟ ಅವಕಾಶಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಎಂ. ಮಂಜುನಾಥ (ತಿಪಟೂರು)—ಸನ್ಮಾನ್ಯ ಉ ಸಭಾಪತಿಗಳೇ, ನಮ್ಮ ರಾಜ್ಯದ ಲೋಕೋಪಯೋಗಿ ಇಲಾಖೆಯ ಮಂತ್ರಿಯವರು ಹಾಗೂ ಸಣ್ಣ ನೀರಾವರಿ ಮಂತ್ರಿಗಳು ಇಟ್ಟಿರತಕ್ಕ ಸುಮಾರು ೬೮ ಕೋಟಿ ರೂಪಾಯಿಗಳ ವಿವಿಧ ಇಲಾಖೆಯ ಬೇಡಿಕೆಗಳಿಗೆ ವಿರೋಧ ವ್ಯಕ್ತಪಡಿಸುತ್ತಾ ನಾಲ್ಕು ಮಾತುಗಳನ್ನು ಆಡಲು ಇಷ್ಟಪಡುತ್ತೇನೆ. ನಮ್ಮ ಹಿರಿಯರಾದಂಥ ಚನ್ನಬಸಪ್ಪನವರು ಈ ಇಲಾಖೆಯ ಜವಾಬ್ದಾರಿಯನ್ನೂ ಹೊತ್ತಮೇಲೆ ನಮ್ಮ ದೇಶದಲ್ಲಿ ಈ ಇಲಾಖೆಗೆ ಒಂದು ಹೊಸ ಹುರುಪು ಬರುತ್ತದೆ ಬಹಳ ದಕ್ಷತೆಯಿಂದ ಕೆಲಸಕಾರ್ಯಗಳು ಆಗುತ್ತವೆ ಎಂದು ನಂಬಿದವರಲ್ಲಿ ನಾನೂ ಒಬ್ಬ, ಏಕೆಂದರೆ ಇವರು ಮೈಸೂರು ದೇಶದಲ್ಲಿ ಬಹಳ ದಕ್ಷತೆಯ ಆಡಳಿತವನ್ನು ಪ್ರಾಮಾಣಿಕ ರೀತಿಯಲ್ಲಿ ಕೊಟ್ಟಂಥವರಾಗಿದ್ದಾರೆ. ಆದರೆ ಇತ್ತೀಚಿನ ಮೂರು ವರ್ಷಗಳಲ್ಲಿ ಇದನ್ನು ನೋಡಿದಾಗ ದಕ್ಷತೆ ಮತ್ತು ಇವಲ್ಲೆರತಕ್ಕ ಕಾರ್ಯತತ್ಪರತೆ ಕೇವಲ ಅವರ ಮಾತಿನಲ್ಲಿ ಉಳಿಯಿತೇ ವಿನಹ ಕಾರ್ಯದಲ್ಲಿ ಬರಲಿಲ್ಲ. ಇದಕ್ಕೆ ಕಾರಣ ಏನು ? ಯಾವ ಅಡೆತಡೆಗಳು ಇವೆ ಎನ್ನುವುದನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರು ಬಹಳ ಹಿರಿಯರು ಇರುವುದರಿಂದ ಅವರೇ ಅದನ್ನು ತಿಳಿದುಕೊಳ್ಳಬೇಕು ಎಂದು ನಾನು ಆಶೆ ಪಡುತ್ತೇನೆ ದೇಶದ ಸಾರ್ವಜನಿಕರ ಹಣ ಕೋಟ್ಯಾಂತರ ರೂಪಾಯಿ ಸಾರ್ವಜನಿಕರ ಹಿತದೃಷ್ಟಿಯಿಂದ ಖರ್ಚಾಗಬೇಕಾದರೆ ಒಳ್ಳೆಯ ವ್ಯವಸ್ಥೆ ಇರಬೇಕು ಮತ್ತು ಪ್ರಾಮಾಣಿಕರು ಇರಬೇಕು. ಸರ್ವಸಾಮಾನ್ಯವಾಗಿ ಜನತೆ ಅವರಿಂದ ಸುಖ ಪಡತಕ್ಕಂಥ ಕೆಲಸ ಕಾರ್ಯಗಳು ಆಗಬೇಕು. ಇವರು ಅನೇಕ ವಿಧವಾದಂಥ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಅವುಗಳಲ್ಲಿ ಬಹಳ ಮುಖ್ಯವಾಗಿ ಹಳ್ಳಿಗಾಡಿನಲ್ಲಿರತಕ್ಕ ಸಂಪರ್ಕಗಳನ್ನು ರಸ್ತೆಗಳನ್ನು ಮಾಡುವುದಕ್ಕೆ ಆದ್ಯತೆಯನ್ನು. ಹೊಸ ವಿಧಾನವನ್ನು ಹಾಕಿಕೊಂಡರು. ಅದು ಬಹಳ ಸಂತೋಷದ ಸಂಗತಿ. ಆದರೆ ಆದದ್ದಾದರೂ ಏನು ? ಯಾವ ತಾಲ್ಲೂಕಿನಲ್ಲಿಯೇ ಆಗಲಿ ಆ ತಾಲ್ಲೂಕಿಗೆ ಸಂಬಂಧಪಟ್ಟಂತೆ ಉದ್ಘಾಟನೆಯನ್ನು ಮಾಡಿದರು, ಗುದ್ದಲಿಯನ್ನು ತೆಗೆದುಕೊಂಡರು, ಪ್ರಾರಂಭೋತ್ಸವವನ್ನು ಮಾಡಿದರು. ಇವತ್ತು ಪ್ರಾರಂಭೋತ್ಸವಮಾಡಿ ಯಾವಸ್ಥಿತಿಯಲ್ಲಿ ರಸ್ತೆಗಳು ಇವೆಯೋ ಅದೇ ಸ್ಥಿತಿಯಲ್ಲಿ ಇವೆ. ರಸ್ತೆಗಳು ಸರಿಯಾಗಿ ನಿರ್ಮಾಣವಾಗಿಲ್ಲ. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ ನಮ್ಮ ಹಿರಿಯರು ಅನೇಕ ವಿಚಾರಗಳನ್ನು ಹೇಳುವಾಗ ಎಲ್ಲವನ್ನೂ ಒಂದೇ ಸಮನಾಗಿ ಮಾಡುವುದಕ್ಕಾಗುವುದಿಲ್ಲ. ಹಂತಹಂತವಾಗಿ ಮಾಡಬೇಕು ಎನ್ನುವ ವಾದವನ್ನು ನಮ್ಮ ಮುಂದೆ ಇಡುತ್ತಾರೆ. ಅದು ನಿಜ ಯಾವ ಹಂತದಲ್ಲಿ, ಯಾವ ವರ್ಷದಲ್ಲಿ ಎಷ್ಟರಮಟ್ಟಿಗೆ ನಾವು ಕಾರ್ಯವನ್ನು ಮುಗಿಸುತ್ತೇವೆನ್ನುವ ಮಾತು ಉದ್ಭವಿಸುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಉತ್ತಮವಾದ ರಸ್ತೆಗಳನ್ನು ಮಾಡಿದ್ದಾರೆ. ಮೂಲಭೂತವಾಗಿ ಗ್ರಾಮಗಳಲ್ಲಿರುವ ರೈತಾಪಿ ಜನಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕೆಂಬ ಮೂಲೋದ್ದೇಶ ಬರೀ ಮಾತಿನಲ್ಲಿ ನಡೆಯುತ್ತಿದ್ದು ಕಾರ್ಯರೂಪಕ್ಕೆ ಬರದೆ ಇರತಕ್ಕದ್ದು ಬಹಳ ಶೋಚನೀಯವಾದುದು. ಇದರ ಬಗ್ಗೆ ಹೆಚ್ಚು ನಿಗಾ ಕೊಡಬೇಕಾದುದು ಬಹಳ ಪ್ರಾಮುಖ್ಯ. ಏನು ಆದೇಶಗಳನ್ನು ಹೊರಡಿಸಿದ್ದಾರೆ ಅದನ್ನು ಇಲಾಖೆಯ ಆಡಳಿತ ವರ್ಗದದರು, ಅಧಿಕಾರಿ ವರ್ಗದವರು ದಕ್ಷತೆಯಿಂದ ಅದರಂತೆ ಕೆಲಸ ಮಾಡುವುದಕ್ಕೆ ವಿಫಲರಾಗಿದ್ದಾರೆ. ಇದರ ಬಗ್ಗೆ ಹೆಚ್ಚಿನ ನಿಗಾ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸಣ್ಣ ನೀರಾವರಿ ಮಂತ್ರಿಗಳ ಬಗ್ಗೆ ಬಹಳ ಒಳ್ಳೆಯ ಮಾತುಗಳನ್ನು ಆಡಿದರು. ನಾನೂ ಸಹಿತ ಅದನ್ನು ಒಪ್ಪುತ್ತೇನೆ, ಮೆಚ್ಚುತ್ತೇನೆ. ಆದರೆ ಇನ್ನೂ ಹೆಚ್ಚಿನ ಗಮನ ಕೊಡಬೇಕು ಮೈನರ್ ಇರಿಗೇಷನ್ ಗೋಸ್ಕರ ಆಯಾ ವರ್ಷದ ಬಜೆಟ್ಟಿನಲ್ಲಿ ಹಣವನ್ನು ಕೊಟ್ಟಿರುತ್ತಾರೆ. ಕೊಟ್ಟಂಥ ಹಣವನ್ನು ಉಪಯೋಗ ಮಾಡಿ ಏನೊಂದು ಕೆಲಸ ಒಂದು ಕಾಲದಲ್ಲಿ ಆಗಬೇಕಾಗಿತ್ತು ಅದು ಆಗದೆ ನಿಂತು ವರ್ಷೇ ವರ್ಷೇ ಸ್ಪಿಲ್ ಓವರ್ ಮಾಡುತ್ತ ಬಂದಾಗ ಎಸ್ಟಿಮೇಟ್ ಕಾಸ್ಟ್ ಜಾಸ್ತಿಯಾಗಿ, ಹಣ ಜಾಸ್ತಿಯಾಗಿ ಆದರಿಂದ ಕಂಟ್ರಾಕ್ಟರಿಗೆ ಅನುಕೂಲವಾಗುತ್ತದೆಯೋ ವಿನಾ ಸಾರ್ವಜನಿಕರಿಗಾಗಲೀ ಸರ್ಕಾರಕ್ಕಾಗಲಿ

ಏನೂ ಅನುಕೂಲವಿಲ್ಲ. ಒಂದು ವರ್ಷದಲ್ಲಿ ಮಾಡಬೇಕೆಂದು ನಿಗದಿ ಮಾಡಿರುವ ಕಾರ್ಯವನ್ನು ಕಂಟ್ರಾಕ್ಟರುಗಳು ಮತ್ತು ಅಧಿಕಾರಿಗಳು ನಿರ್ವಹಿಸದೆ ಹೋದರ ಅದರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳತಕ್ಕ ಅಧಿಕಾರವನ್ನು ಮಂತ್ರಿಗಳಿಗೆ ಕೊಡಬೇಕು. ಹೇಳುವವರಿಲ್ಲ, ಕೇಳುವವರಿಲ್ಲ ಎನ್ನುವ ಸಂದರ್ಭ ಬಂದು ಅದರಿಂದ ಸರ್ಕಾರದ ಹಣ ಸಾರ್ವಜನಿಕರ ಹಣ ಪೋಲಾಗುವುದಕ್ಕೆ ಅವಕಾಶವಿಲ್ಲದಂತೆ ದಕ್ಷತೆಯಿಂದ ಆಡಳಿತ ನಡೆಸತಕ್ಕ ಶಕ್ತಿಯನ್ನು ಕೊಡಬೇಕೆಂದು ಹೇಳಬಯಸುತ್ತೇನೆ.

ರಸ್ತೆ ಸಂಪರ್ಕ ವಿಚಾರದಲ್ಲಿ ಹೇಳುವುದಾದರೆ ಬೆಂಗಳೂರು–ಮಂಗಳೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತನೆ ಮಾಡಿದ್ದಾರೆ. ಸಂತೋಷ. ಅದೇ ರೀತಿ ತುಮಕೂರಿನಿಂದ ಚಿತ್ರದುರ್ಗ ಹರಿಹರ ರಸ್ತೆಯನ್ನೂ ರಾಷ್ಟ್ರೀಯ ಹೆದ್ದಾರಿ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ ಇದಕ್ಕೆ ಅನೇಕ ಕಾರಣಗಳಿವೆ. ನಮ್ಮ ರಾಜ್ಯದಿಂದ ಉತ್ತರ ಇಂಡಿಯಾಕ್ಕೆ ಹೋಗತಕ್ಕ ಅನೇಕ ವ್ಯವಸಾಯ ಸಾಮಗ್ರಿಗಳನ್ನು ಮತ್ತು ಪದಾರ್ಥಗಳನ್ನು ಸಾಗಿಸುವುದಕ್ಕೆ ಈ ರಸ್ತೆ ಮುಖ್ಯ ಸಾಧನವಾಗಿದೆ ಇದನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆ ಮಾಡಿದರೆ ಸಾಮಗ್ರಿಗಳು ಇನ್ನು ತ್ವರಿತ ಗತಿಯಲ್ಲಿ ಸಾಗಿಸತಕ್ಕ ವ್ಯವಸ್ಥೆ ಸಾರ್ವಜನಿಕರಿಗೆ ಸಿಕ್ಕುತ್ತದೆ. ಬೆಂಗಳೂರಿನಿಂದ ಮೀರಜ್‌ವರೆಗೂ ರೈಲ್ವೆ ಮಾರ್ಗವಿದೆ. ಮೊದಲ ಎಷ್ಟು ಸಾಮಗ್ರಿಗಳು ರೈಲ್ವೆಯಿಂದ ಹೋಗುತಿತ್ತು, ಈಗ ಎಷ್ಟು ಕಡಮೆಯಾಗಿದೆ ಮತ್ತು ಎಷ್ಟು ಪದಾರ್ಥಗಳು ತ್ವರಿತಗತಿಯಿಂದ ರಸ್ತೆಯ ಮೇಲೆ ಹೋಗುತ್ತಿವೆ ಎನ್ನುವ ಅಂಕಿ ಅಂಶಗಳನ್ನು ತೆಗೆದುಕೊಂಡರೆ ಮತ್ತು ಈ ರೀತಿ ಆಗುವುದಕ್ಕೆ ಕಾರಣವೇನು ಎಂದು ನೋಡಿದರೆ ಸಾಮಗ್ರಿಗಳು ರಸ್ತೆಯ ಮೇಲೆ ತ್ವರಿತ ಗತಿಯಿಂದ ಸಾಮಗ್ರಿಗಳ ರವಾನೆ ಯಾಗುತ್ತಿರುವುದರಿಂದ ರೈಲಿನಲ್ಲಿ ಸಾಮಗ್ರಿಗಳು ಹೋಗುತ್ತಿಲ್ಲ ಎನ್ನುವುದು ಗೊತ್ತಾಗುತ್ತದೆ. ರೈಲಿನಲ್ಲಿ ಸಾಮಗ್ರಿಗಳು ಹೋಗುತ್ತಿಲ್ಲ ಎನ್ನುವುದು ಗೊತ್ತಾಗುತ್ತದೆ ರೈಲಿನಲ್ಲಿ ಸಾಮಗ್ರಿಗಳನ್ನು ಕಳುಹಿಸಬೇಕಾದರೆ ಕಡಮೆ ದರ ಬೀಳುತ್ತದೆ ಲಾರಿಗಳಲ್ಲಿ ಹೋಗ ಬೇಕಾದರೆ ಒಂದಕ್ಕೆ ನಾಲ್ಕರಷ್ಟು ಕೊಡಬೇಕು. ಒಂದು ಕ್ವಿಂಟಾಲ್ ಕೊಬ್ಬರಿ ಉತ್ತರ ಇಂಡಿಯಾಕ್ಕೆ ಕಳುಹಿಸಬೇಕಾದರೆ ರೈಲಿನಲ್ಲಿ ಸುಮಾರು ೯–೧೦ ರೂಪಾಯಿ ಆಗುತ್ತದೆ ಅದೇ ಒಂದು ಕ್ವಿಂಟಾಲ್ ಕೊಬ್ಬರಿಯನ್ನು ಲಾರಿಗಳ ಮುಖಾಂತರ ಕಳುಹಿಸಬೇಕಾದರೆ ೪೦–೫೦ ರೂಪಾಯಿ ಬೀಳುತ್ತದೆ. ಈ ಹೆಚ್ಚಿನ ಸಾಗಾಣಿಕೆಯ ದರ ಸಾರ್ವಜನಿಕರ ಮೇಲೆ ಬೀಳುತ್ತದೆ. ಇದೇ ರೀತಿಯಾಗಿ ಆಹಾರ ಸಾಮಗ್ರಿಗಳು ಮತ್ತು ಇತರ ಪದಾರ್ಥಗಳು ರೈಲಿನಲ್ಲಿ ಹೋಗದೆ ಲಾರಿಗಳಲ್ಲಿ ಕಳುಹಿಸಬೇಕಾದರೆ ಆ ಪದಾರ್ಥಗಳ ಬೆಲೆ ಜಾಸ್ತಿಯಾಗುತ್ತದೆ. ಈವಾಗ ಬೆಂಗಳೂರಿನಿಂದ ಮೀರಜ್‌ವರೆಗೂ ಮೀಟರ್‌ಗೇಜ್ ಮಾರ್ಗವಿವೆ ಇದನ್ನು ಬ್ರಾಡ್‌ಗೇಜಿಗೆ ಪರಿವರ್ತನೆ ಮಾಡಿಸಬೇಕು ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇವೆ, ನಮ್ಮ ಕರ್ನಾಟಕದಲ್ಲಿ ರೈಲು ಮಾರ್ಗಗಳ ಪ್ರಗತಿಯಾಗಬೇಕಾದುದು ಬಹು ಮುಖ್ಯ ಸಾಧನ ಸಂಪರ್ಕಗಳಿಗೆ ಮುಖ್ಯವಾಗಿ ಆದ್ಯತೆಯನ್ನು ಕೊಡಬೇಕಾಗಿವೆ ಆದುದರಿಂದ ಮುಖ್ಯವಾಗಿ ಬೆಂಗಳೂರು–ಮೀರಜ್ ಮಾರ್ಗವನ್ನು ಬ್ರಾಡ್‌ಗೇಜ್ ಮಾಡಿಸಿಕೊಡಬೇಕೆಂಬ ಯೋಜನೆಯನ್ನು ಕೇಂದ್ರಸರ್ಕಾರದ ಮುಂದೆ ಇಟ್ಟು ಅದನ್ನು ಮಾಡಿಸಿ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಬಗ್ಗೆ ಹೇಳುವುದಾದರೆ ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿ ತಾಲ್ಲೂಕು ತಿಮ್ಮನ ಹಳ್ಳಿ ಗ್ರಾಮಸ್ಥರು ಕುಡಿಯುವ ನೀರಿನ ವ್ಯವಸ್ಥೆಗಾಗಿ ಅವರ ಭಾಗದ ಹಣವನ್ನು ಕಟ್ಟಿದ್ದಾರೆ. ಅವರು ೩೦ ಸಾವಿರ ರೂಪಾಯಿಗಳನ್ನು ಕಟ್ಟಿದ್ದಾರೆ. ಹಾಗೆ ಕಟ್ಟಿದ್ದರೂ ಸಹಿತ ನೀರನ್ನು ಒದಗಿಸುವ ಪ್ರಯತ್ನವನ್ನು ಮಾಡಿಲ್ಲ. ಇದರಲ್ಲಿ ರಾಜಕೀಯ ವೇನೆಂದರೆ, ಈ ಗ್ರಾಮಸ್ಥರು ದುಡ್ಡು ಕಟ್ಟಿದ ನಂತರ ಅನೇಕ ಗ್ರಾಮಗಳಿಗೆ ನೀರಿನ ಯೋಜನೆಯನ್ನು ಮಂಜೂರು ಮಾಡಿದ್ದಾರೆ ಹೀಗಿದ್ದರೂ ಈ ಗ್ರಾಮಕ್ಕೆ ನೀರಿನ ಯೋಜನೆಗೆ ಮಂಜೂರಾತಿಯನ್ನು ಕೊಡದೆ ಇರುವುದಕ್ಕೆ ಕಾರಣವೇನು ? ಈ ರೀತಿ ತಾರತಮ್ಯ ಮನೋಭಾವವನ್ನು ಖಂಡಿತ ಮಾಡಬೇಡಿ. ಪಂಪ್ ಹಾಕಿ ನೀರನ್ನು ಒದಗಿಸುವುದಾದರೆ ೩೦ ಸಾವಿರ ರೂಪಾಯಿಗಳನ್ನು ಪಂಚಾಯಿತಿಯವರು ಕೊಡಬೇಕಾಗಿಲ್ಲ ರಿಗ್ಸ್ ಮೂಲಕ ಬಾವಿಗಳನ್ನು ತೋಡಿಸಿ ಅವರೇ ಪಂಪ್ ಹಾಕಿಕೊಳ್ಳಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ—ಪ್ರತಿಯೊಂದು ಗ್ರಾಮಕ್ಕೂ ಪೈಪ್ ವಾಟರ್ ಕೊಡತಕ್ಕ ವ್ಯವಸ್ಥೆಗೆ ಲಕ್ಷಾಂತರ ರೂಪಾಯಿ ಬೇಕಾಗುತ್ತದೆ. ಆ ಪ್ರಕಾರವಾಗಿ ಹೋದರೆ ಹತ್ತಿಪ್ಪತ್ತು ವರ್ಷವಾದರೂ ಕೂಡ ಹಳ್ಳಿಗಳಿಗೆ ನೀರು ಕೊಡುವುದಕ್ಕಾಗುವುದಿಲ್ಲ. ಶೀಘ್ರವಾಗಿ ಹೆಚ್ಚು ಹಳ್ಳಿಗಳಿಗೆ ಪೈಪ್ ವಾಟರ್ ಕೊಡತಕ್ಕದ್ದು ಒಂದು ಸ್ಟೇಜ್. ಆದರೆ ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಕೊಡಬೇಕಾದರೆ ಆಗುವ ಖರ್ಚಿನಲ್ಲಿ ಒಂದಕ್ಕೆ ಹತ್ತರಷ್ಟು ಹಳ್ಳಿಗಳಿಗೆ ನೀರನ್ನು ಕೊಡಬಹುದು. ಎರಡನೇ ಹಂತದಲ್ಲಿ ಹಣವಿದ್ದರೆ ಅವರ ಬಡಾವಣೆ ಮಾಡಿಕೊಳ್ಳಬಹುದು.

ಶ್ರೀ ಟಿ. ಎಂ. ಮಂಜುನಾಥ—ಸ್ಯಾಂಕ್ಷನ್ ಮಾಡಿದ್ದಾರೆ, ಗ್ರಾಮಸ್ಥರು ಹಣವನ್ನು ಕಟ್ಟಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ—ಹಣವನ್ನು ಕಟ್ಟಿದ ಮಾತ್ರಕ್ಕೆ ಸ್ಯಾಂಕ್ಷನ್ ಆಯಿತು ಎಂದು ತಿಳಿಯುವುದು ಸರಿಯಲ್ಲ

ಶ್ರೀ ಟಿ. ಎಂ ಮಂಜುನಾಥ್—ಹಾಗಿದ್ದಮೇಲೆ ಆದೇಶ ಏಕೆ ಕೊಡಬೇಕು ? ಈ ಗ್ರಾಮಸ್ಥರು ಹಣವನ್ನು ಕಟ್ಟಿದ್ದರೂ ಅಲ್ಲಿಗೆ ನೀರು ಸರಬರಾಜು ಯೋಜನೆಯನ್ನು ಕಾರ್ಯಗತ ಮಾಡದೆ ತಾರತಮ್ಯ ಮಾಡಿದ್ದಾರೆಂದು ನನ್ನ ವಾದ.

ಶ್ರೀ ಎಚ್. ಎಂ. ಚನ್ನಬಸಪ್ಪ ಹಣ ಇರುವುದನ್ನು ನೋಡಿಕೊಂಡು ಆದ್ಯತೆಯ ಮೇಲೆ ಮಂಜೂರು ಮಾಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್—ಹಣ ಇಟ್ಟುಕೊಂಡಿದ್ದಾರೆಯೋ ಆ ವಿಚಾರ ಬೇರೆ. ಪಂಚಾಯಿತಿ ಹಣವನ್ನು ಕಟ್ಟಿದಾಗ್ಗ ಅವರಿಗೆ ಪ್ರಾಮುಖ್ಯತೆಯನ್ನು ಕೊಡುವುದಕ್ಕೆ ಬದಲು ಬೇರೆಯವರಿಗೆ ಏಕೆ ಕೊಟ್ಟಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ—೩೫೦-೪೦೦ ಊರುಗಳಿಗೆ ನೀರು ಸರಬರಾಜು ಮಾಡಬೇಕಾದರೆ ಒಂದೆರಡು ಲಕ್ಷ ರೂಪಾಯಿ ಪ್ರತಿ ಊರಿಗೂ ಬೇಕಾಗುತ್ತದೆ. ಇದರಿಂದ ಜಾಸ್ತಿ ಹಣ ಖರ್ಚಾಗಿ ಹೆಚ್ಚು ಊರುಗಳಿಗೆ ನೀರನ್ನು ಒದಗಿಸುವುದಕ್ಕೆ ಆಗುವುದಿಲ್ಲವೆನ್ನುವ ಅಭಿಪ್ರಾಯವಿದೆ ಆದುದರಿಂದ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಮಾಡದೆ ಮೊದಲು ಫಸ್ಟ್ ಸ್ಟೇಜ್ ಕೊಡೋಣ ಎಂದು ಮಾಡಿದ್ದೇವೆ

ಶ್ರೀ ಟಿ ಎಂ. ಮಂಜುನಾಥ್—ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಈಗ ಇರುವ ಕಾನೂನನ್ನು ಬದಲಾವಣೆ ಮಾಡುವ ಬಗ್ಗೆ ಒಂದು ನೋಟೀಸ್‌ನ್ನು ಕಳುಹಿಸಿದ್ದೇವೆ. ಅಭಿವೃದ್ಧಿ ಆಗಿರ ತಕ್ಕ ರೆಗ್ಯುಲೇಟೆಡ್ ಮಾರ್ಕೆಟ್ಸ್ ಏನಿವೆ ಅದರಲ್ಲಿ ಬೇಕಾದಷ್ಟು ಹಣವಿದೆ ಅದೂ ಸಾರ್ವಜನಿಕರ ಹಣವೇ ಗ್ರಾಮಾಂತರ ಪ್ರದೇಶಗಳಿಂದ ಸಾಮಗ್ರಿಗಳನ್ನು ತರತಕ್ಕ ಲಿಂಕ್ ರೋಡ್ಸ್ ಎಂದರೆ ಸಂಪರ್ಕ ರಸ್ತೆಗಳೇನಿವೆ ಅವುಗಳನ್ನು ಅಭಿವೃದ್ಧಿಪಡಿಸಬೇಕು ಎನ್ನುವ ಮೂಲ ಉದ್ದೇಶವಿದೆ. ಆದರೆ ಆ ಹಣವನ್ನು ಇಲಾಖೆಗೆ ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಅದನ್ನು ಬದಲಾವಣೆ ಮಾಡ ಬೇಕು. ಡೆವಲಪ್ಡ್ ಮಾರ್ಕೆಟ್‌ನಲ್ಲಿ, ಪೂರ್ಣವಾಗಿ ಅಭಿವೃದ್ಧಿ ಆಗಿರತಕ್ಕ ರೈತರಿಗೆ ಸಕಲ ಸೌಕರ್ಯಗಳನ್ನೂ ಕೊಟ್ಟ ಮೇಲೆ ಉಳಿದಿರತಕ್ಕ ಹಣದಲ್ಲಿ ಇಂಥ ಸಂಪರ್ಕ ರಸ್ತೆಗಳನ್ನು ಮಾಡತಕ್ಕದ್ದು ಮತ್ತು ಅಲ್ಲಿರತಕ್ಕ ಆರ್ಥಿಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಆಸ್ಪತ್ರೆಗಳಿಗೆ ಹಣವನ್ನು ಕೊಡತಕ್ಕದ್ದು, ಇನ್ನು ಯಾವುದಾದರೂ ಸಾರ್ವಜನಿಕ ಕೆಲಸಗಳಿಗೆ ಹಣವನ್ನು ಕೊಡತಕ್ಕ ಅವಕಾಶವನ್ನು ಕಾನೂನಿನಲ್ಲಿ ಮಾಡಿ ಕೊಡಬೇಕು ಎಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ—ಒಂದೊಂದು ಮಾರುಕಟ್ಟೆಯಲ್ಲಿ ಹೆಚ್ಚು ಹಣ ಇರುತ್ತದೆ. ಒಂದೊಂದು ಕಡೆ ಇರುವುದಿಲ್ಲ, ಅವು ಡೆವಲಪ್ ಆಗಿರುವುದಿಲ್ಲ. ತಿಪಟೂರು ಮಾರ್ಕೆಟ್ಟಿನ ಉದಾಹರಣೆ ತೆಗೆದುಕೊಂಡು ಬೇಕಾದಷ್ಟು ಹಣವಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ರೂರಲ್ ಕಮ್ಯೂನಿಕೇಷನ್ ರಸ್ತೆಗಳ ಕೆಲಸವಾಗಬೇಕು. ಅದಕ್ಕೂ ಹಣವನ್ನು ವ್ಯವಸ್ಥೆ ಮಾಡಿಕೊಳ್ಳಬೇಕಾಗು ತ್ತದೆ. ಮಾರ್ಕೆಟ್ ಕಮಿಟಿಯಲ್ಲಿ ದುಡ್ಡು ಉಳಿದಿದೆ ಎಂದು ಈ ವರ್ಷ ತೆಗೆದುಕೊಂಡರೆ ಮುಂದಿನ ವರ್ಷ ಅವರಿಗೆ ದುಡ್ಡು ಇರುತ್ತದೆಯೋ ? ಆದುದರಿಂದ ಕೆಲಸ ಶುರು ಮಾಡಿದ ಮೇಲೆ ಯಥಾ ಪ್ರಕಾರವಾಗಿ ಮುಂದೆ ನಿಂತು ಹೋಗುತ್ತದೆ. ಅದಕ್ಕೋಸ್ಕರವೇ ನಾನು ಒಂದು ಸಲಹೆ ಮಾಡಿದೆ. ಏನೆಂದರೆ ರೆಗ್ಯುಲೇಟೆಡ್ ಮಾರ್ಕೆಟ್ ಏನಿದೆ ಅಲ್ಲಿ ಅರ್ಧ ಅಥವಾ ಒಂದು ಪರ್ಸೆಂಟ್ ತೆರಿಗೆ ರೂಪ ದಲ್ಲಿ ವಸೂಲು ಮಾಡಿ, ಗ್ರಾಮಾಂತರ ಜನರ ಉಪಯೋಗಕ್ಕೆ ರೆಗ್ಯುಲೇಟೆಡ್ ಮಾರುಕಟ್ಟೆ ಇರುವುದ ರಿಂದ, ಅಲ್ಲಿ ಬರತಕ್ಕ ಉತ್ಪನ್ನವನ್ನು ಗ್ರಾಮಾಂತರ ಜನಗಳಿಗಾಗಿ ಉಪಯೋಗಮಾಡಬೇಕು ಎನ್ನುವ ಅಭಿಪ್ರಾಯವಿದೆ.

1-00 P.M.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದಕೋಸ್ಕರವೇ ರೂರಲ್ ಕಮ್ಯುನಿಕೇಷನ್ ರೋಡ್ಸ್ ಮಾಡುತ್ತಿದ್ದೇವೆ. ಇದರಿಂದ ಗ್ರಾಮಾಂತರ ಪ್ರದೇಶದ ಜನರು ತಾವು ಬೆಳೆದ ದವಸ ಧಾನ್ಯಗಳನ್ನು ಮಾರುಕಟ್ಟೆಗೆ ತರುವುದಕ್ಕೆ ಅನುಕೂಲವಾಗುತ್ತದೆ. Infra structure is a legitimate part of development.

ಶ್ರೀ ಟಿ ಎಂ. ಮಂಜುನಾಥ.—ತಮ್ಮ ನೀತಿ, ಧೋರಣೆ ಮತ್ತು ತತ್ವವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಅದು ಕಾರ್ಯಕ್ರಮದಲ್ಲಿ ಬರುತ್ತಿಲ್ಲ.

ಶ್ರೀ ಡಿ ದೇವರಾಜ ಅರಸ್.—ರೂರಲ್ ಕಮ್ಯುನಿಕೇಷನ್ ರೋಡ್ಸ್ ಮಾಡಿಸುವ ವಿಚಾರದಲ್ಲಿ ಅದಕ್ಕೆ ಒಂದು ಫಂಡ್ ರಚನೆ ಮಾಡಿ ಆ ಹಣವನ್ನು ಅದಕ್ಕೇ ಖರ್ಚು ಮಾಡಬೇಕೆಂದಿದ್ದೇವೆ. ಅದಕಾರಣ ಆ ಫಂಡ್‌ಗೆ ಹಣವನ್ನು ಯಾವ ರೂಪದಲ್ಲಿ ತೆಗೆದುಕೊಂಡರೂ ತಮ್ಮ ಅಭ್ಯಂತರವಿಲ್ಲ ತಾನೆ ?

ಶ್ರೀ ಟಿ. ಎಂ ಮಂಜುನಾಥ್.—ಆಗಬಹುದು. ಮತ್ತೊಂದು ಮುಖ್ಯವಾದ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಅದೇನೆಂದರೆ, ನಮ್ಮ ರಾಜ್ಯದಲ್ಲಿ ೮ ಲಕ್ಷಕ್ಕಿಂತ ಜಾಸ್ತಿ ತೆಂಗಿನ ಬೆಳೆಗಾರರಿದ್ದಾರೆ. ಇಂದು ಅವರ ಪರಿಸ್ಥಿತಿ ಶೋಚನೀಯವಾಗಿದೆ. ಆದಕಾರಣ ಅವರ ರಕ್ಷಣೆಗೆ ಸರ್ಕಾರದವರು ಬರಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮುಖ್ಯವಾಗಿ ಕೊಕನಟ್ ಪಿಕಪ್ಸ್ ಆಗಬೇಕಾಗಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದನ್ನು ಮಾಡಿಸಿದರೆ ಯಾರು ಯಾರು ಅದರಿಂದ ಅನುಕೂಲ ಪಡೆದುಕೊಳ್ಳುತ್ತಾರೋ, ಅವರುಗಳು ತಮ್ಮ ಭಾಗದ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಬರೆದು ಕೊಟ್ಟರೆ ಮಾಡಿಕೊಡುತ್ತೇನೆಂದು ನಾನು ತಮಗೆ ತಿಳಿಸಿದ್ದೇನೆ ಆ ಒಂದು ಜವಾಬ್ದಾರಿಯನ್ನು ತಮಗೇ ವಹಿಸಿದ್ದೇನೆ ಅದನ್ನು ತಾವು ಮಾಡಿದ್ದೀರಾ ?

ಶ್ರೀ ಟಿ ಎಂ. ಮಂಜುನಾಥ್.— ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಆದರೆ ತಿಪಟೂರಿನಲ್ಲಿ ಮಾತ್ರ ತೆಂಗಿನಕಾಯಿಯನ್ನು ಬೆಳೆಯುತ್ತಿಲ್ಲ ; ರಾಜ್ಯದ ಅನೇಕ ಭಾಗಗಳಲ್ಲಿ ಬೆಳೆಯಲಾಗುತ್ತಿದೆ. ೮ ಲಕ್ಷಕ್ಕೂ ಹೆಚ್ಚು ಜನರು ಈ ಬೆಳೆಯನ್ನು ಅವಲಂಬಿಸಿದ್ದಾರೆ. ಇದು ಅವರ ಜೀವನ್ಮರಣದ ಪ್ರಶ್ನೆಯಾಗಿದೆ ಆದಕಾರಣ ಕೊಕನಟ್ ಪಿಕಪ್ಸ್ ಕೆಲಸವನ್ನು ಸರ್ಕಾರದವರು ಜಾಗ್ರತೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಾಸನಹಳ್ಳಿ ಕಾಸ್-ವೇ ಕೆಲಸವನ್ನು ಸರ್ಕಾರದವರು ಜಾಗ್ರತೆ ಮಾಡಿಸಿಕೊಡಬೇಕು. ಅದು ೮೦ ಸಾವಿರ ರೂಪಾಯಿಗಳಿಗಿಂತಲೂ ಕಡಿಮೆ ಖರ್ಚಿನ ಕೆಲಸವಾಗಿದೆ. ಅದೇ ರೀತಿ ನಮ್ಮ ತಿಪಟೂರಿನಲ್ಲಿ ಒಂದು ಬೈ-ಪಾಸ್ ರೋಡ್ ಆಗಬೇಕಾಗಿದೆ. ಅಲ್ಲಿಯ ಟ್ರಾಫಿಕ್ ಎಷ್ಟು ಹೆಚ್ಚಾಗಿದೆ ಎಂಬುದು ತಮಗೂ ಗೊತ್ತಿದೆ. ಆದಕಾರಣ ಈ ಕೆಲಸವನ್ನು ತಮ್ಮ ಕಾಲದಲ್ಲಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಗುಬ್ಬಿ ತಾಲ್ಲೂಕ್‌ನ ಹರೇನಹಳ್ಳಿಯಲ್ಲಿರುವ ಸಣ್ಣ ಕೆರೆ ಬ್ರೀಚ್ ಆಗಿದೆ ೩೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಅದರ ಕೆಲಸವನ್ನು ಮುಗಿಸಬಹುದು. ಆ ರೀತಿ ಮಾಡುವುದರಿಂದ ೫೦-೬೦ ಸಾವಿರ ಎಕರೆ ಪ್ರದೇಶಕ್ಕೆ ನೀರು ಸಿಗುತ್ತದೆ ಈಗ ಯಾವ ತರಹದ ಕೆಲಸವನ್ನೂ ಮಾಡದಿರುವುದರಿಂದ ರೈತರಿಗೆ ತೊಂದರೆಯಾಗಿದೆ. ಅದನ್ನು ಹೋಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ತಾವು ಈಗ ಏನು ೬೮ ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದೀರಿ, ಅದು ದೇಶದ ಜನರ ಹಾಗೂ ರೈತರ ಕಷ್ಟಸುಖಗಳಿಗೆ ಖರ್ಚು ಮಾಡುವ ಹಣವಾಗಿದೆ. ಅದು ಸದ್ವಿನಿಯೋಗವಾಗಬೇಕಾದರೆ ಈಗಿರತಕ್ಕಂಥ ಅಧಿಕಾರಿಗಳಲ್ಲಿ ಪ್ರಾಮಾಣಿಕತೆ, ದಕ್ಷತೆ ಮತ್ತು ಕಾರ್ಯತತ್ಪರತೆ ಇರಬೇಕು. ತಮಗೆ ತಿಳಿದಿರುವಂತೆ ಅನೇಕ ಸಂದರ್ಭಗಳಲ್ಲಿ ಅನೇಕ ಅವ್ಯವಹಾರಗಳಾಗಿವೆ ಈ ರೀತಿ ಇನ್ನು ಮುಂದೆ ಆಗದಂತೆ ತಾವು ನೋಡಿಕೊಳ್ಳಬೇಕು ಮತ್ತು ಕೆಲಸ ಮಾಡಿದಂತಹ ಕಂಟ್ರಾಕ್ಟರ್‌ಗಳು ಹಣಕ್ಕಾಗಿ ಎಕ್ಸಿಕ್ಯೂಟೀವ್ ಇಂಜಿನಿಯರ್ ಅವರ ಮನೇ ಬಾಗಿಲಿಗೆ ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಅವರ ಮನೇ ಬಾಗಿಲಿಗೆ ಅಲೆಯುವಂತೆ ಮಾಡದೆ ಅವರಿಗೆ ಕೂಡಲೇ ಹಣವನ್ನು ಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಕೃಷ್ಣರಾವ್ (ಗೌರೀಬಿದನೂರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ನಮ್ಮ ಮುಂದೆ ಮಂಡಿಸಿರತಕ್ಕಂಥ ೧೮, ೧೯, ೨೭, ೫೩, ೫೪ ಹಾಗೂ ೪೦ನೇ ಡಿಮ್ಯಾಂಡ್‌ಗಳನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡಿ ಕೆಲವಾರು ಸಲಹೆಗಳನ್ನು ಕೊಡಲು ನಿಂತಿದ್ದೇನೆ. ಈ ಲೋಕೋಪಯೋಗಿ ಇಲಾಖೆಯ ಕೆಲಸ ಬಹುಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿಯೇ ಇರುವುದು, ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಕೆಲಸ ಹಾಗೂ ಕೆರೆಯ ಕೆಲಸ ಅತಿ ಮುಖ್ಯವಾಗಿ ಆಗಬೇಕಾಗಿದೆ. ಕಳೆದ ಮೂರು ವರ್ಷಗಳಿಂದಲೂ ಕೂಡ ಅನೇಕ ಕಾರಣಗಳಿಂದ ಬಹು ಮುಖ್ಯವಾಗಿ ಆರ್ಥಿಕ ಮುಗ್ಗಟ್ಟಿನಿಂದ ನಾವು ನಿರೀಕ್ಷೆ ಮಾಡಿದಷ್ಟು ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈ ಕೆಲಸಗಳನ್ನು ಮಾಡಬೇಕೆಂಬ ಉತ್ಸಾಹ ಮಾನ್ಯ ಚೆನ್ನಬಸಪ್ಪನವರ ಮನಸ್ಸಿನಲ್ಲಿತ್ತು ಮತ್ತು ಇದೆ. ಅದಕ್ಕಾಗಿಯೇ ಈಗ ಸ್ವಲ್ಪ ದುಡ್ಡು ಖರ್ಚು ಮಾಡಿದ್ದಾರೆ. ಆದಷ್ಟು ಜಾಗ್ರತೆ ಇನ್ನೂ ಸ್ವಲ್ಪ ಹಣವನ್ನು ಗ್ರಾಮಾಂತರ ಪ್ರದೇಶಗಳ ರಸ್ತೆಗಳಿಗಾಗಿ ಖರ್ಚು ಮಾಡುವುದಾದರೆ ಬಹುಮಟ್ಟಿಗೆ ದೇಶಕ್ಕೂ ಹಾಗೂ ಗ್ರಾಮಾಂತರ ಪ್ರದೇಶಕ್ಕೂ ಒಳ್ಳೆಯದಾಗುತ್ತದೆಂದು ನನ್ನ ಭಾವನೆ.

ಇನ್ನು ಸಾಲುಮರಗಳೂ ಸಹ ರಸ್ತೆಯಷ್ಟೇ ಮುಖ್ಯವಾದುದು. ನಮ್ಮ ದೇಶದ ಆಸ್ತಿಯಾಗಿರುವಂತಹ ಸಾಲುಮರಗಳನ್ನು ಎಲ್ಲ ಕಡೆಯೂ ಕಡಿಯುತ್ತಿದ್ದಾರೆ. ಅಪ್ಪ ಹಾಕಿದ ಮರವನ್ನು ಮಗ ಕಡಿದ ಎಂಬಂತೆ ಯಾರೋ ಪುಣ್ಯಾತ್ಮರು ಬೆಳೆಸಿದ್ದ ಮರಗಳನ್ನು ಕೆಲವರು ನಿರ್ನಾಮ ಮಾಡುವುದಕ್ಕೆ ಹೊರಟಿದ್ದಾರೆ. ಇದನ್ನು ತಪ್ಪಿಸಲು ಸರ್ಕಾರದವರು ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಮರ ಕಡಿದವರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಹಿಂದೆ ಸಾಲುಮರಗಳನ್ನು ರೆವಿನ್ಯೂ ಇಲಾಖೆಯವರು ನೋಡಿಕೊಳ್ಳುತ್ತಿದ್ದರು. ಆಗ ಈ ರೀತಿ ಆಗುತ್ತಿರಲಿಲ್ಲ. ನಂತರ ಅವರ ಕೈಯಿಂದ ತೆಗೆದು ಅರಣ್ಯ ಇಲಾಖೆಯವರಿಗೆ ವಹಿಸಿದರು. ಈಗ ಮತ್ತೆ ಲೋಕೋಪಯೋಗಿ ಇಲಾಖೆಯ ಅಧೀನಕ್ಕೆ ಬಂದಿದೆ ಎಂದು ನಾನು ಕೇಳಿದೆ. ಇಲ್ಲಿ ಇಲಾಖೆ ಮುಖ್ಯವಲ್ಲ, ಸಾಲುಮರಗಳು ಉಳಿಯಬೇಕು, ರಾತ್ರಿ ಸಂಚಾರ ಮಾಡಿ ನೋಡಿದರೆ ತಿಳಿಯುತ್ತದೆ. ಎಷ್ಟೊಂದು ಕಡೆ ಮರಗಳನ್ನು ಕಡಿಯುತ್ತಿದ್ದಾರೆಂಬುದು, ಆದಕಾರಣ ಇದರ ಕಡೆಗೆ ಜರೂರು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ರಸ್ತೆ ಪಕ್ಕದಲ್ಲಿರುವ ಹಿಡುವಳಿದಾರರಿಗೆ ಆ ಒಂದು ಜವಾಬ್ದಾರಿಯನ್ನು ವಹಿಸಿದರೆ ಆ ಮರಗಳ ರಕ್ಷಣೆಯಾಗುವುದಿಲ್ಲವೇ ?

ಶ್ರೀ ವಿ. ಕೃಷ್ಣರಾವ್ —ಅದೂ ಆಗಬಹುದು. ಯಾವುದೇ ರೂಪದಲ್ಲಿಯಾದರೂ ದೇಶದ ಆಸ್ತಿಯನ್ನು ಕಾಪಾಡಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆಮೇಲೆ ದೇಶದ ಪ್ರಗತಿಯನ್ನು ಅಳತೆ ಮಾಡತಕ್ಕಂಥ ಅಳತೆಗೋಲು ಎಂದರೆ ಈ ಲೋಕೋಪಯೋಗಿ ಇಲಾಖೆ. ಆದರೆ ಇಂದು ಈ ಇಲಾಖೆ ಸ್ಥಗಿತವಾಗಿದೆ. ಅನೇಕ ಕೆಲಗಳನ್ನು ಮಾಡುವುದಕ್ಕೆ ಇಂದು ಈ ಇಲಾಖೆಗೆ ಆಗುತ್ತಿಲ್ಲ; ಬಹುಮುಖ್ಯವಾಗಿ ನಮ್ಮ ಕೋಲಾರ ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ, ಅಲ್ಲಿ 16 ರಿಂದ 24 ಇಂಚ್‌ವರೆಗೆ ಮಾತ್ರ ಮಳೆಯಾಗುತ್ತದೆ ಅಲ್ಲಿ ವ್ಯವಸಾಯಕ್ಕೆ ಪ್ರತಿಯೊಬ್ಬರೂ ಕೆರೆಯ ನೀರನ್ನು ಅವಲಂಬಿಸಿದ್ದಾರೆ. ಆದರೆ ಇತ್ತೀಚೆಗೆ ಮಳೆಯಿಲ್ಲದೆ ಎಲ್ಲ ಕೆರೆಗಳೂ ಸಂಪೂರ್ಣವಾಗಿ ಮುಚ್ಚಿಹೋಗಿವೆ.

ಒಂದು ಬೆಳೆ ಪೂರ್ತ ಆಗುತ್ತಾ ಇಲ್ಲ. ಒಂದು ಕೆರೆ ತುಂಬಿದರೂ ಕೂಡ ಒಂದು ಫಸಲು ಬೆಳೆಯುಂದೇ ಇರತಕ್ಕ ಕೆರೆಗಳಲ್ಲಿ ಜೀವನ ಮಾಡತಕ್ಕ ಪರಿಸ್ಥಿತಿಯಲ್ಲಿ ಇಂದು ಇದ್ದಾರೆ. ಆದುದರಿಂದ, ಈ ಕೆರೆಗಳನ್ನು ದುರಸ್ತು ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಕೆರೆಗಳಲ್ಲಿ ತೂಬು ಹೋಗಿದೆ, ಇನ್ನೊಂದು ಕಡೆ ಮರವೇ ಹೋಗಿದೆ, ಇನ್ನೊಂದು ಕಡೆ ಫೀಡರ್ ಚಾನಲ್ ಮುಚ್ಚಿ ಹೋಗಿದೆ. ಇಂತಹ ಕಡೆಗಳಲ್ಲಿ ಹೆಚ್ಚಿನ ಆದ್ಯತೆ ಕೊಟ್ಟು ಕೆರೆಗಳನ್ನು ಜೀರ್ಣೋದ್ಧಾರ ಮಾಡತಕ್ಕ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೋಲಾರ ಜಿಲ್ಲೆ; ಬೆಂಗಳೂರು ಜಿಲ್ಲೆ; ತುಮಕೂರು ಜಿಲ್ಲೆ; ಚಿತ್ರದುರ್ಗ ಜಿಲ್ಲೆ; ಬಳ್ಳಾರಿ ಜಿಲ್ಲೆ ಮತ್ತು ಬಿಜಾಪುರ ಜಿಲ್ಲೆಗಳನ್ನೊಳಗೊಂಡಂತಹ ಒಂದು ಮೈದಾನ ಏರಿಯಾ ಒಂದನ್ನು ಮಾಡಿ ಎಂದು ಹೇಳುತ್ತೇನೆ —ಈ ಮಾತನ್ನು ನಾನು ಹೋದ ವರ್ಷವೂ ಹೇಳಿದ್ದೇನೆ. ಈಗಾಗಲೇ ಮಲೆನಾಡು ಏರಿಯಾ ಒಂದು ಇದೆ ಆದುದರಿಂದ, ಮೈದಾನ ಏರಿಯಾ ಎಂದು ಒಂದು ಮಾಡಿ, ನೀರಾವರಿ ವಸತಿಗಳನ್ನು ಯಾವರೀತಿ ಕಂಡುಹಿಡಿಯಬೇಕು ; ಯಾವರೀತಿ ನೀರಾವರಿ ವ್ಯವಸ್ಥೆಯನ್ನು ಮಾಡಬೇಕೆಂಬುದನ್ನು ಕಂಡುಹಿಡಿಯಲು ಇದು ಅವಶ್ಯಕವೆಂದು ಹೇಳಿ, ಇದನ್ನು ಸರ್ಕಾರದವರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಆಂಧ್ರಪ್ರದೇಶದಲ್ಲಿ ಕೂಡ ರಾಯುಲ್ ಸೀಮಾ ಪ್ರದೇಶ ಎಂದು ಇವೆ. ಗುಂಟೂರು, ಚಿತ್ತೂರು ಮೊದಲಾದ ಜಿಲ್ಲೆಗಳನ್ನು ತೆಗೆದುಕೊಂಡು ರಾಯಲ್ ಸೀಮಾ ಪ್ರದೇಶ ಎಂದು ಮಾಡಿ ಅದಕ್ಕೆ ಯಾವ ಯಾವ ವಿಧವಾದ ಕೆರೆಗಳನ್ನು ಮಾಡಬೇಕೆಂದು ಆಂಧ್ರ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ, ನಮ್ಮ ಕರ್ನಾಟಕ ರಾಜ್ಯದಲ್ಲೂ ಕೂಡ ಮೈದಾನ ಡೆವಲಪ್‌ಮೆಂಟ್ ಬೋರ್ಡ್ ಎಂಬುದಾಗಿ ದಯವಿಟ್ಟು ಯೋಜನೆಯೊಂದನ್ನು ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಸ್ವಾಮಿ, ನಮ್ಮ ಕೋಲಾರ ಜಿಲ್ಲೆಯ ಬಾಗೇಪಲ್ಲಿ ಮುಂತಾದ ಕಡೆಗಳಿಗೆ ಅಪ್ಪರ್ ಭದ್ರಾ ನಾಲೆಯಿಂದ ನೀರನ್ನು ತರಿಸಲಿಕ್ಕೆ ಅವಕಾಶ ಇದೆ ಎಂದು ಕೇಳಿದ್ದೇನೆ ಇದರ ಬಗ್ಗೆ ಸರ್ವೆ ಮಾಡಿಸಿ, ಇದು ಆಗುವ ಪಕ್ಷದಲ್ಲಿ ದಯವಿಟ್ಟು ಈ ಒಂದು ಕಾರ್ಯವನ್ನು ಮಾಡಿಸಿಕೊಡಬೇಕೆಂದು ವಿನಯದಿಂದ ಸರ್ಕಾರದಲ್ಲಿ ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇನ್ನು ಗೌರೀಬಿದನೂರು ತಾಲ್ಲೂಕು ವಿಷಯ ಹೇಳ

ಬೇಕೆಂದರೆ, ಸಣ್ಣ ನೀರಾವರಿ ವಿಷಯದಲ್ಲಿ ೧೦–೨೦ ವರ್ಷಗಳ ಹಿಂದೆ, ಹಿಂದಿನ ಸರ್ಕಾರ ಅಲ್ಲಿ ಮಾಡಿದ ತಕ್ಕ ಪಾಪವನ್ನು ತಾವು ಇವತ್ತು ತೊಳೆಯಬೇಕಾಗಿದೆ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅಲ್ಲಿ ಏನು ಮಾಡಿದ್ದಾರೆ ಎಂದರೆ, ಅನೇಕ ಫೀಡರ್ ಚಾನೆಲ್‌ಗಳನ್ನು ಪ್ರಾರಂಭ ಮಾಡಿದ್ದರೂ, ಇವತ್ತಿನವರಿಗೂ ಅವು ಪೂರ್ತಿ ಆಗಿಲ್ಲ. ಅನೇಕ ಫೀಡರ್ ಚಾನೆಲ್‌ಗಳು ಎಸ್ಟಿಮೇಟ್ ಆಗಿ ಅರ್ಧಂಬರ್ಧ ಕೆಲಸವಾಗಿದೆ. ಸಾಮಾನ್ಯವಾಗಿ ನದಿಯಿಂದ ಕೆರೆಗೆ ನೀರು ಬರುವುದು ಉಂಟು. ಆದರೆ ಅಲ್ಲಿ ಕೆರೆಯಿಂದ ನದಿಗೆ ನೀರನ್ನು ಬಿಡತಕ್ಕ ವ್ಯವಸ್ಥೆ ಮಾಡಿ, ಅವ್ಯವಸ್ಥೆ ಮಾಡಿದ್ದಾರೆ. ಫೀಡರ್ ಚಾನಲ್ ಯೋಜನೆಗಳನ್ನು ಮಾಡಿ, ಅರ್ಧಂಬರ್ಧ ಕೆಲಸವನ್ನು ಮುಗಿಸಿದ್ದಾರೆ ಅಷ್ಟೆ. ಒಂದೂ ಸರಿಯಾಗಿ ಮುಗಿದಿಲ್ಲ. ಹೊಸೂರು ಕನ್ನೀಕೆರೆ, ಕಲ್ಲೂಡಿ, ದೊಡ್ಡಮಲ್ಲೇಕೆರೆ, ಸೂನಗಾನಹಳ್ಳಿ ಪೂರ್ಣಾಂಬುಧಿ ಕೆರೆ ಹುದುಗೂರು ಚಿಕ್ಕೇರಿ, ಗದರೆ, ವೈಯಜಕೂರುಹಳ್ಳಿ, ತೊಂಡೇಬಾವಿ ಮತ್ತು ಚಂದಣದೂರು — ಈ ಗ್ರಾಮಗಳಿಗೆ ಸಂಬಂಧಪಟ್ಟ ಹಾಗೆ ಫೀಡರ್ ಚಾನಲ್ ಯೋಜನೆಯನ್ನು ಅನ್ವಯಿಸಿದ್ದು, ಪಂಚಾಯತಿಯವರು ಸಂಪೂರ್ಣ ಹಣ ಕಟ್ಟಿ ಮೂರು ವರ್ಷಗಳಾಯಿತು. ಆದರೆ ಇಲ್ಲಿಯವರೆಗೂ ಸರ್ಕಾರದವರು ಇದರ ಬಗ್ಗೆ ಯಾವುದೇ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಮಾನ್ಯ ಮಂತ್ರಿಗಳು ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಲು ಭರವಸೆ ಕೊಟ್ಟಿರುವುದು ಬಹಳ ಸಂತೋಷದಾಯಕ ವಿಚಾರ. ತಾವುಗಳು ಅವುಗಳನ್ನು ಪೂರ್ತಿ ಮಾಡಿ ಹಿಂದಿನವರು ಮಾಡಿದ ಪಾಪವನ್ನು ತಾವು ವಿಮೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಎರಡನೆಯದಾಗಿ ರಸ್ತೆಗಳು. ಈ ರಸ್ತೆಗಳು ಮತ್ತು ಸೇತುವೆಗಳ ವಿಚಾರ ಒಂದು ದೊಡ್ಡ ಕಥೆ ಇದ್ದಹಾಗೆ. ಮಾನ್ಯ ಚನ್ನಬಸಪ್ಪನವರು ಗೌರೀಬಿದನೂರು ತಾಲ್ಲೂಕಿನಲ್ಲಿ ಒಂದು ದಿವಸ ಪೂರ್ತ ಪ್ರವಾಸ ಮಾಡಿದರು. ಚಿಕ್ಕಬಳ್ಳಾಪುರದಲ್ಲಿ ಸಬ್-ಡಿವಿಜನ್ ಆಫೀಸ್ ಇದೆ; ಒಂದು ಮ್ಯಾಜಿಸ್ಟ್ರೇಟ್ ಕೋರ್ಟ್ ಇದೆ; ಮುನ್ಸಿಫ್ ಕೋರ್ಟ್ ಇದೆ; ಎಲೆಕ್ಟ್ರಿಸಿಟಿ ಬೋರ್ಡ್ ಆಫೀಸ್ ಇದೆ. ಇಷ್ಟು ಆಫೀಸುಗಳಿದ್ದೂ, ಸುಮಾರು ೫೦–೬೦ ಬಸ್ಸುಗಳು ಓಡಾಡತಕ್ಕ ರಸ್ತೆ-ಗೌರೀಬಿದನೂರು ಮತ್ತು ಚಿಕ್ಕಬಳ್ಳಾಪುರ ರಸ್ತೆ. ಇದು ಹಿಂದಿನ ಕಾಲದಿಂದ ಇರತಕ್ಕ ರಸ್ತೆ. ಇಲ್ಲಿ ಏನಾಗುತ್ತದೆ ಎಂದರೆ ಒಂದು ದಿವಸ ಮಳೆ ಬಂದರೆ, ಈ ರಸ್ತೆಯಲ್ಲಿ ಇನ್ನು ಮೂರು ತಿಂಗಳು ಪ್ರಯಾಣ ಮಾಡುವುದಕ್ಕೆ ಆಗುವುದಿಲ್ಲ. ಇದರಿಂದ ಏನಾಗಿದೆ ಎಂದರೆ ಚಿಕ್ಕಬಳ್ಳಾಪುರಕ್ಕೆ ಹೋಗಬೇಕಾದರೆ, ಬಳಸಿಕೊಂಡು ಹೋಗಬೇಕಾಗುತ್ತದೆ. ೨೩ ಮೈಲಿ ಇರತಕ್ಕ ಈ ರಸ್ತೆಯಲ್ಲಿ ಮಳೆ ಬಂದರೆ, ೬೦ ಮೈಲಿ ಸುತ್ತುಕೊಂಡು ಚಿಕ್ಕಬಳ್ಳಾಪುರಕ್ಕೆ ಹೋಗಬೇಕಾಗಿದೆ. ಇದೇ ರೀತಿ ಇನ್ನೂ ಅನೇಕ ರಸ್ತೆಗಳು ಬಹಳ ಕಠಿಣ ಪರಿಸ್ಥಿತಿಯಲ್ಲಿವೆ; ಪ್ರಯಾಣದ ಸೌಕರ್ಯವಿಲ್ಲದೆ ಅಲ್ಲಿನ ಜನಗಳಿಗೆ ತೊಂದರೆಯಾಗಿದೆ; ಕೆಲವು ಸಮಯಗಳಲ್ಲಿ ಪ್ರಯಾಣ ಸಂಪೂರ್ಣ ಸ್ಥಗಿತವಾಗುತ್ತದೆ. ಆದುದರಿಂದ, ಆದಷ್ಟು ಜಾಗ್ರತೆ, ಅಲ್ಲಿ ಮೋರಿಗಳನ್ನು ಮಾಡಿಸತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಕಳಕಳಿಯಿಂದ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಗುಯ್ಯಾಲಹಳ್ಳಿ ಹೊಸ ಕೆರೆ ಬಗ್ಗೆ ಹೋದ ವರ್ಷ ಹೊಸದಾಗಿ ಬಡ್ಜೆಟ್‌ನಲ್ಲಿ ಸೇರಿಸಿದ್ದರೂ ಕೂಡ, ಆದರ ಬಗ್ಗೆ ಇವತ್ತಿನವರೆಗೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇದನ್ನು ಆದಷ್ಟು ಜಾಗ್ರತೆ ಮಾಡಿಸಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಹೆಣ್ಣು ಮಕ್ಕಳ ವೃತ್ತಿ ವಿದ್ಯಾ ಸಂಸ್ಥೆ ವಿಚಾರ. ಇದನ್ನು ಮೂರು ವರ್ಷದ ಹಿಂದೆಯೇ ಬಡ್ಜೆಟ್‌ನಲ್ಲಿ ಸೇರಿಸಿದ್ದು; ಅದು ಬಡ್ಜೆಟ್ ಪುಸ್ತಕದಲ್ಲೇ ಇದೆಯೇ ವಿನಹ ಇವತ್ತಿನವರಿಗೂ ಯಾವ ವಿಧವಾದಂಥ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಅದಕ್ಕಾಗಿ ನಿವೇಶನ ಇದೆ; ದುಡ್ಡು ಇದೆ; ಆದರೂ ಆ ಬಗ್ಗೆ ಕೆಲಸ ನಡೆದಿಲ್ಲ. ಇದರ ಬಗ್ಗೆ ಈ ವರ್ಷದ ಬಡ್ಜೆಟ್‌ನಲ್ಲೂ ಸೇರಿಸಿದ್ದಾರೆ, ಆದರೆ, ಈ ರೀತಿ ಸುಮ್ಮನೆ ಬಡ್ಜೆಟ್ ಪುಸ್ತಕವನ್ನು ನೋಡಿಕೊಂಡು ಸಂತೋಷಪಟ್ಟುಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಇಂದು ನಾವು ಇದ್ದೇವೆಯೇ ವಿನಹ, ಇನ್ನೇನು ಇಲ್ಲ ಎಂದು ಹೇಳುತ್ತೇನೆ. ಆದುದರಿಂದ, ಈ ಒಂದು ಕಾರ್ಯಕ್ರಮವನ್ನು ಜಾಗ್ರತೆಯಾಗಿ ತೆಗೆದುಕೊಳ್ಳತಕ್ಕ ಕಾರ್ಯಕ್ಕೆ ಸರಕಾರದವರು ಹೊರಡಬೇಕೆಂದು ಕಳಕಳಿಯಿಂದ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ,

ಇನ್ನು ಮೂರನೆಯದಾಗಿ ಗ್ರಾಮಾಂತರ ನೀರು ಸರಬರಾಜು ಯೋಜನೆ. ಗೌರಿಬಿದನೂರು ತಾಲ್ಲೂಕಿನಲ್ಲಿ ಹುದುಗೂರು, ದಾರಿನಾಯಕನಪಾಳ್ಯ, ಹೊಸೂರು ಈ ಗ್ರಾಮಗಳಿಗೆ ನೀರು ಸರಬರಾಜು ಕೆಲಸ ಮುಗಿದಿದೆ; ಇದು ಮಂಜೂರು ಆಗಿ ಸುಮಾರು ೮ ವರ್ಷಗಳಾಯಿತು. ಆದರೆ ನೀರೇ ಬರುವುದಿಲ್ಲ! ಟ್ಯಾಂಕಿನಿಂದ ನೀರೆಲ್ಲಾ ಈಚೆಗೆ ಬಂದು ಬಿಡುತ್ತದೆ. ಇದರ ಬಗ್ಗೆ ಸರಕಾರಕ್ಕೆ ಈಗಾಗಲೇ ಮನವಿ ಮಾಡಿದ್ದೇವೆ; ಮತ್ತು ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ ಹೇಳಿಕೊಂಡದ್ದೂ ಆಯಿತು. ಸುಮಾರು ೮ ವರ್ಷಗಳ ಹಿಂದೆ ಸರ್ವಿಸ್ ಕೊಟ್ಟಂಥ ಲೋಕೋಪಯೋಗಿ ಇಲಾಖೆಯು ಈ ಯೋಜನೆಯಿಂದ ಅಲ್ಲಿನ ಜನರು ಒಂದು ಲೋಟ ನೀರು ಕುಡಿದು ಯಾರೂ ಪಾವನರಾಗಿಲ್ಲ; ಒಂದು ಲೋಟ ನೀರು ಯಾರೂ ಕುಡಿಯಲಿಲ್ಲ. ಇದಕ್ಕಾಗಿ ಎಲೆಕ್ಟ್ರಿಸಿಟಿ ಬೋರ್ಡಿನವರು ೪–೫ ಸಾವಿರ ರೂಪಾಯಿಗಳು ಮೀರಿ ಖರ್ಚು

ಮಾಡಿರತಕ್ಕದು ಇವೆ. ಆದುದರಿಂದ, ಈ ಒಂದು ಯೋಜನೆಯಲ್ಲಿ ಆ ಬಿನ ಗ್ರಾಮನಿವಾಸಿಗಳಿಗೆ ನೀರನ್ನು ಒದಗಿಸಲು ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ನಗರಗೆರೆ ಎಂಬಲ್ಲಿ ನೀರಿನ ಅಭಾವದಿಂದ ಒಂದು ಬಕೆಟ್ಟಿಗೆ ೫೦ ಪೈಸೆ ಕೊಟ್ಟು ನೀರು ಪಡೆದದ್ದು ಉಂಟು. ಇಂತಹ ಊರುಗಳಲ್ಲಿ ಈ ಒಂದು ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಿ ನೀರನ್ನು ಒದಗಿಸುವ ಏರ್ಪಾಡು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಈಗಾಗಲೇ ಇದರ ಬಗ್ಗೆ ಮೂರು ಸಲ ಎಸ್ಟಿಮೇಟ್ ರೀವೈಜ್ ಆಗಿದೆ. ಮೊದಲು ಇದಕ್ಕಾಗಿ ಎಂಟು ಸಾವಿರ ಕೊಡಿ ಎಂದು ಕೇಳಿದರು ; ಪುನಃ ಕೊಡಿ ಎಂದರು; ಅಂತೂ ಹೀಗೆಯೇ ಅದು ಮುಂದುವರಿದುಕೊಂಡು ಬರುತ್ತಿದೆಯೇ ಹೊರತು ಇದುವರೆಗೂ ಎಸ್ಟಿಮೇಟ್ ಸ್ಯಾಂಕ್ಷನ್ ಆಗಿಲ್ಲ, ಕಂಪ್ಲೀಟ್ ಆಗಿಲ್ಲ, ಇದು ಅತ್ಯಂತ ಶೋಚನೀಯವಾದ ವಿಚಾರ. ನಗರಕೆರೆ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ ತಕ್ಷಣ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ರೋಟರಿ, ಆಸ್ಟ್ರೇಲಿಯದಿಂದ ಗವರೆ ಬಿನ್ನಸಂದ್ರ ರೂರಲ್ ವಾಟರ್ ಸಪ್ಲೈ ಸ್ಕೀಮಿಗೆ ೩-೪ ಸಾವಿರ ರೂಪಾಯಿ ನೆರವಾಗಿ ಬಂದಿದೆ. ಬೇರೆ ದೇಶದವರಾದರೂ ಅವರು ೪ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವರಿಗೆ ಈ ವಾಟರ್ ಸ್ಕೀಮ್ ಆಯಿತೇ ಎಂದು ಕೇಳಿದರೆ ಜವಾಬು ಕೊಡುವುದಕ್ಕೆ ಇದುವರೆಗೂ ಆಗಿಲ್ಲ. ಮ್ಯಾಚಿಂಗ್ ಗ್ರಾಂಟ್ ಆದಷ್ಟು ಜಾಗ್ರತೆ ಕೊಟ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಜಾಗ್ರತೆ ಮಾಡಿಸಬೇಕು. ಎಸ್ಟಿಮೇಟ್ ಎಲ್ಲಾ ಹಂತವಲ್ಲೂ ವಿಳಂಬ ಆಗತಕ್ಕಂಥದ್ದು ತಪ್ಪಿಸಿ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ತಾಲ್ಲೋಕು ಬೋರ್ಡ್ ವಿಷಯ ಹೇಳುತ್ತೇನೆ. ಮೈನರ್ ಇರಿಗೇಷನ್ ಲಂಪ್‌ಸಂ ೨ ಸಾವಿರ ರೂಪಾಯಿ ಕೊಟ್ಟಿದ್ದಾರೆ. ೩೦-೪೦ ಕೆರೆಗಳಿಗೆ ಸಾವಿರ ರೂಪಾಯಿ ಕೊಟ್ಟು ಮೈನ್‌ಟೈನ್ ಮಾಡಿ ಎಂದರೆ ಹೇಗೆ ಮಾಡುವುದಕ್ಕೆ ಸಾಧ್ಯ ಇದೆ ? ಇಲ್ಲದೆ ಹೋದರೆ ಸರ್ಕಾರ ನೇರವಾಗಿ ಜವಾಬಾರಿ ತೆಗೆದುಕೊಳ್ಳಿ, ಇಲ್ಲದೆ ಹೋದರೆ ಎಷ್ಟು ಬೇಕಾಗುತ್ತದೆ ಅಷ್ಟನ್ನು ಕೊಡಿ, ಈ ಎರಡರಲ್ಲಿ ಯಾವುದಾದರೂ ಒಂದು ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳುತ್ತೇನೆ. ಈಗಾಗಲೇ ಮಾನ್ಯ ದೇವೇಗೌಡರು ಹೇಳಿದ್ದಾರೆ. ಇದು ಮಾತ್ರ ಖಂಡಿತ ವಾಟರ್ ಚಾರ್ಜಸ್ ೧೦೦ ಎಕರೆಗೆ ಕಡಿಮೆ ಇರತಕ್ಕವರಿಗೂ ನೋಟೀಸ್‌ಗಳು ಬರುತ್ತಿವೆ. ಎಲ್ಲರಿಗೂ ಬಂದಿವೆ, ನನಗೂ ಬಂದಿದೆ. ಇದನ್ನು ಪರಿಶೀಲನೆ ಮಾಡಬೇಕು. ೩೦೦ ಎಕರೆ ಕಡಿಮೆ ಇರತಕ್ಕ ಅಚ್ಚುಕಟ್ಟುದಾರರಿಗೆ ವಾಟರ್ ಚಾರ್ಜಸ್‌ನಲ್ಲಿ ರಿಯಾಯಿತಿ ತೋರಿಸಬೇಕು. ಸಂಪೂರ್ಣವಾಗಿ ಬಿಟ್ಟುಬಿಡಬೇಕು ಎಂಬ ಮಾತನ್ನು ತಮ್ಮ ಮುಂದೆ ಹೇಳಿ ಮಾನ್ಯ ಚನ್ನಬಸಪ್ಪನವರು ಇಟ್ಟಿರತಕ್ಕ ಪಿ.ಡಬ್ಲ್ಯು.ಡಿ. ಡಿಮ್ಯಾಂಡನ್ನು ಸಂಪೂರ್ಣವಾಗಿ ಸ್ವಾಗತಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಹೆಚ್ ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳು ಸಭೆ ಮುಂದೆ ಇಟ್ಟಿರತಕ್ಕ ಬೇಡಿಕೆಗಳಿಗೆ ಅಂಗೀಕಾರವನ್ನು ನಿರಾಕರಿಸಿ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ದಿವಸ ಲೋಕೋಪಯೋಗಿ ಇಲಾಖೆಯಲ್ಲಿ ಕೆಲವೇ ಜನ ದಕ್ಷರಾದಂಥ, ಪ್ರಾಮಾಣಿಕರಾದಂಥ ಅಧಿಕಾರಿಗಳು ಇದ್ದಾರೆ. ಅವರು ಒಂದು ಸ್ವತಂತ್ರವಾದಂಥ ವಾತಾವರಣದಲ್ಲಿ ತಮ್ಮ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗುವುದಕ್ಕೆ ಧಕ್ಕೆ ಉಂಟಾಗಿದೆ. ಕಾರಣ ಇಷ್ಟೇ, ಜಿಲ್ಲಾ ಮಟ್ಟದಲ್ಲಿ ಮತ್ತು ವಿಭಾಗ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಮತ್ತು ವಿಭಾಗಾಧಿಕಾರಿಗಳನ್ನು ತಾಂತ್ರಿಕ ಪರಿಣತೆ ಹೊಂದಿರತಕ್ಕ ಅಧಿಕಾರಗಳ ಮೇಲೆ ಉಸ್ತುವಾರಿ ಮಾಡತಕ್ಕಂಥ, ಮೇಲ್ವಿಚಾರಣೆ ಮಾಡತಕ್ಕಂಥ ಒಂದು ಅಧಿಕಾರವನ್ನು ಸರ್ಕಾರದವರು ಕೊಟ್ಟಿದ್ದಾರೆ. ಇದರಿಂದ ಅನಾವಶ್ಯಕವಾಗಿ ಬಿನ್ನಾಭಿಪ್ರಾಯಗಳು ಉಂಟಾಗುವುದಕ್ಕೆ ಮತ್ತು ಅಂತಃಕಲಹಗಳು ಬೆಳೆಯುವುದಕ್ಕೆ ಮತ್ತು ತಾಂತ್ರಿಕ ಸಿಬ್ಬಂದಿ ದಕ್ಷತೆ ಕುಗ್ಗುವುದಕ್ಕೆ ಅವಕಾಶ ನೀಡಿದೆ. ನಾನು ಉತ್ಪ್ರೇಕ್ಷೆ ಮಾಡಿ ಹೇಳಲಿಲ್ಲ ಎಂದು ತಾವು ತಿಳಿದುಕೊಳ್ಳಬೇಕು. ಬಹುಶಃ ಅವರ ಆಡಳಿತದಲ್ಲಿ ಎಷ್ಟುಮಟ್ಟಿನ ಒಂದು ಜಿಗುಪ್ಸೆ ಉಂಟಾಗಿದೆ ಎನ್ನುವುದನ್ನು ನೀವು ತಿಳಿದುಕೊಳ್ಳಬೇಕಾದರೆ ಜೊತೆಗೆ ಇನ್ನೊಂದು ಕೆಲಸ ಆಗಿದೆ.

SRI H. D. DEVE GOWDA.—The Revenue sub-divisional Officer will go and sit in the Executive Engineer's office for inspection. This has created a very bad demoralisation.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಜೊತೆಗೆ ಅಧಿಕಾರಿಗಳ ಮೇಲೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಬರೆಯತಕ್ಕ ಅಧಿಕಾರ ಸಹ ಐ. ಎ. ಎಸ್. ಅಧಿಕಾರಿಗಳಿಗೆ ಅಂದರೆ ಡೆಪ್ಯುಟಿ ಕಮಿಷನರ್ ಮತ್ತು ವಿಭಾಗಾಧಿಕಾರಿಗಳಿಗೆ ತಾವು ಕೊಟ್ಟಿದ್ದೀರಿ. ಅವರಿಗೆ ತಾಂತ್ರಿಕ ಜ್ಞಾನ ಇಲ್ಲದೇ ಇದ್ದಮೇಲೆ ಕಾರ್ಯನಿರ್ವಹಣೆ ಎಷ್ಟುಮಟ್ಟಿಗೆ ನಡೆದಿದೆ ಎನ್ನುವ ಪರಿಜ್ಞಾನ ಇಲ್ಲದೆ ಇರುವಾಗ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಬರೆಯತಕ್ಕ ಶಕ್ತಿ ಹೇಗೆ ಬರುತ್ತದೆ? ಆದ್ದರಿಂದ ಇದು ವಿವೇಕಯುತವಾದಂಥ ವ್ಯವಸ್ಥೆ

ಇಲ್ಲ. ಕೂಡಲೇ ಬದಲಾವಣೆ ಮಾಡಬೇಕು ಎಂದು ಒತ್ತಾಯ ಪೂರ್ವಕವಾಗಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ದೇವೇಗೌಡರು ಅವರ ಭಾಷಣದಲ್ಲಿ ವಿವರವಾಗಿ ಹೇಳಿದ್ದಾರೆ. ತಪ್ಪುಮಾಡಿದಂತ ಅಧಿಕಾರಿಗಳಿಗೆ ಶಿಕ್ಷೆ ಕೊಡದೆ ರಕ್ಷಣೆ ಮಾಡತಕ್ಕಂಥ ಒಂದು ಸರ್ಕಾರದ ನೀತಿ ಏನಿದೆ. ಇದು ನಿಜವಾಗಿ ಶೋಚನೀಯ ಮತ್ತು ಖಂಡನಾರ್ಹವಾದುದು. ಈ ಸಮಯದಲ್ಲಿ ಅವರ ಜೊತೆಗೆ ಧ್ವನಿಗೂಡಿಸಬೇಕಾಗುತ್ತದೆ. ಈಗ ಜಾಗೃತ ಆಯೋಗದವರು ಸರ್ಕಾರಕ್ಕೆ ವರದಿ ಕೊಟ್ಟಮೇಲೆ ಕೆಲವು ಅಧಿಕಾರಿಗಳ ವಿಚಾರದಲ್ಲಿ ಒಂದು ವಿಧವಾದ ನೀತಿಯನ್ನು ಅನುಸರಿಸಿ ಮತ್ತೆ ಕೆಲವು ಅಧಿಕಾರಿಗಳ ವಿಚಾರದಲ್ಲಿ ಬೇರೊಂದು ನೀತಿಯನ್ನು ಅನುಸರಿಸತಕ್ಕ ಮಾರ್ಗ ಇದೆ, ಇದನ್ನು ಪ್ರಶ್ನೆ ಮಾಡತಕ್ಕದ್ದು. ಈಗ ಕೆಲವು ಅಧಿಕಾರಿಗಳ ಹೆಸರನ್ನು ಹೇಳುವುದಿಲ್ಲ. ಹೆಸರು ಬೇಡಿ. ಅದು ಮಾನ್ಯ ದೇವೇಗೌಡರ ಹತ್ತಿರ ಇದೆ. ಇಷ್ಟು ಮಾತ್ರ ಹೇಳಬಲ್ಲೆ. ಒಬ್ಬ ಅಧಿಕಾರಿಯನ್ನು ಡಿಸ್‌ಮಿಸ್ ಮಾಡಿ ಎಂದು ಜಾಗೃತ ಆಯೋಗದಿಂದ ವರದಿ ಬಂದರೆ ಸಸ್ಪೆನ್‌ಷನ್‌ನಲ್ಲಿ ಇಟ್ಟು ಎನ್‌ಕ್ವಯಿರಿ ನಡೆಸಬೇಕು ಎಂದು ವರದಿ ಬಂದರೆ, ಆತನನ್ನು ಕೇವಲ ವರ್ಗಾಯಿಸುವುದು ಒಂದು ಕಡೆಯಿಂದ ಮತ್ತೊಂದು ಕಡೆಗೆ. ಈ ವಿಷಯವನ್ನು ಜಾಗೃತ ಆಯೋಗಕ್ಕೆ ಪರಿಶೀಲನೆಗೆ ಕಳುಹಿಸುವುದರ ಉದ್ದೇಶ ಏನು ಅದನ್ನು ತಿಳಿಸಬೇಕಾಗುತ್ತದೆ ಅವರು ಏನು ಶಿಫಾರಸ್ಸು ಮಾಡುತ್ತಾರೆ ಅದನ್ನು ನಾವು ಪೂರ್ಣವಾಗಿ ಅಂಗೀಕರಿಸಬೇಕು ಎಂದು ಹೇಳುವುದಿಲ್ಲ. ನಾವು ಯಾವ ಒಬ್ಬ ವ್ಯಕ್ತಿ ವಿಚಾರದಲ್ಲಿ ಯಾವ ಒಂದು ನಿಲುವನ್ನು ತಾಳುತ್ತೇವೆ, ಯಾವ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಅದನ್ನು ಎಲ್ಲಾ ಅಧಿಕಾರಿಗಳಿಗೂ ಅನ್ವಯಿಸಬೇಕಾಗುತ್ತದೆ. ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಹಾಕುವ ನೀತಿಯನ್ನು ಅನುಸರಿಸುತ್ತಿದ್ದಾರೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಸರ್ವೇ ಸಾಧಾರಣವಾಗಿ ವಿಜಿಲೆನ್ಸ್ ಕಮಿಷನ್ನವರು ಏನು ಶಿಫಾರಸ್ಸು ಮಾಡುತ್ತಾರೆ ಅದನ್ನು ನಾವು ಸರ್ವೇ ಸಾಧಾರಣವಾಗಿ ಒಪ್ಪಿಕೊಳ್ಳುತ್ತೇವೆ The concerned Minister will have to put it to the Cabinet. That is the rules of procedure.

ಶ್ರೀ ಡಿ. ದೇವರಾಜ್ ಅರಸ್.—ಅದನ್ನು ಕಡೆಗಣಿಸಬೇಕಾದರೆ ಕ್ಯಾಬಿನೆಟ್ ತೀರ್ಮಾನ ಆಗಬೇಕು

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಒಂದೆರಡು ಅಧಿಕಾರಿಗಳು ಅವರು ಇರಬಹುದು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಹೆಚ್ಚು ಹಣವನ್ನು ಯಾವುದೋ ಕಾಮಗಾರಿ ಕೆಲಸಕ್ಕೆ ಕೊಟ್ಟಿರತಕ್ಕದ್ದು ರುಜುವಾತಾಗಿ ಮಳವಳ್ಳಿ ಅಸಿಸ್ಟೆಂಟ್ ಇಂಜಿನಿಯರ್ ಅವರು ಸ್ವಲ್ಪ ಹಣ ದುರುಪಯೋಗ ಮಾಡಿದ್ದಾರೆ ಎಂದು ಅವರನ್ನು ವರ್ಗಮಾಡಿದ್ದಾರೆ. ಇದು ಈ ವರ್ಷ ನಡೆದಿರತಕ್ಕ ಘಟನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅಸಿಸ್ಟೆಂಟ್ ಇಂಜಿನಿಯರ್ ಇರಿಗೇಷನ್‌ಗೆ ಒಬ್ಬರು ಇದ್ದಾರೆ. ಪಿ.ಡಬ್ಲ್ಯೂ.ಡಿ. ನಿರ್ಮಾಣಕ್ಕೆ ಒಬ್ಬರು ಇದ್ದಾರೆ ತಾವು ಯಾರು ಎಂದು ತಿಳಿಸಿದರೆ ನಾಳೆ ಹೇಳುತ್ತೇನೆ

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನೀವು ಉತ್ತರ ಕೊಡುವುದರಲ್ಲಿ ತಿಳಿಸುತ್ತೇನೆ,

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈ ಎರಡು ತಿಂಗಳ ಹಿಂದೆ ಬದಲಾವಣೆ ಮಾಡಿದೆ, ಯಾರು ಎಂದು ಗೊತ್ತಾಗಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇನ್ನೊಂದು ವಿಚಾರ ಕಳೆದ ಸಾರಿ ಮಾತನಾಡುತ್ತಾ ಹೇಳಿದ್ದೆ ನೀರಾವರಿ ಕಾಮಗಾರಿಗಳನ್ನು ನೀವು ಮಾಡುವದರ ಜೊತೆಗೆ ಈಗಾಗಲೇ, ಇರತಕ್ಕಂಥ ಕೆರೆಕಟ್ಟೆಗಳಲ್ಲಿ ಶೇಖರಣೆಯಾದ ನೀರು ಸರಿಯಾದ ನಿಯಂತ್ರಣ ಇಲ್ಲದೆ, ಸರಿಯಾದ ರೀತಿಯಲ್ಲಿ ಅದನ್ನು ಉಪಯೋಗಿಸಿಕೊಳ್ಳುವದಕ್ಕೆ ಅವಕಾಶಗಳನ್ನು ವ್ಯವಸ್ಥೆಯನ್ನು ಕಲ್ಪನೆ ಮಾಡದೆ ಇರುವುದರಿಂದ ನೀರು ಪೋಲು ಆಗುತ್ತಾ ಇದೆ. ದೊಡ್ಡ ದೊಡ್ಡ ಕೆರೆಗಳಿಗೆ ಸವಡಿಗಳನ್ನು ನೇಮಕ ಮಾಡಬೇಕು. ಪ್ರಭಾವಶಾಲಿಗಳು ಬಹಳ ಶಕ್ತಿ ಇರುವವರು ಎಲ್ಲಾ ನೀರನ್ನು ಉಪಯೋಗಿಸುತ್ತಾರೆ. ತಮಗೆ ಯಾವ ಕಾಲಕ್ಕೆ ನೀರು ಬೇಕು ಆ ಕಾಲಕ್ಕೆ ತೂಬು ತೆಗೆಸುತ್ತಾರೆ. ಯಾವಾಗ ಬೇಕಾಗುವುದಿಲ್ಲ ಆಗ ತೂಬು ಮುಚ್ಚಿಸುತ್ತಾರೆ. ಹಳ್ಳಿಗಳಲ್ಲಿ ಈಗಲೂ ಸಹ ಹೆಚ್ಚಿಗೆ ಜಮೀನು ಇಟ್ಟುಕೊಂಡಿರತಕ್ಕವರು ಸಮಾಜದಲ್ಲಿ ಪ್ರತಿಷ್ಠೆ, ಪ್ರಭಾವಿ ವ್ಯಕ್ತಿ ಜನ ತಮ್ಮ ಗದ್ದೆಗಳಿಗೆ ಬೇಕಾದಾಗ ನೀರು ಬಿಟ್ಟುಕೊಳ್ಳುತ್ತಾರೆ.

1-30 P.M.

ಹೋದ ಸಾರಿ ತಾವು ಭರವಸೆ ಕೊಟ್ಟಿದ್ದೀರಿ.

Sri D. Devaraj Urs.— What the hon member says is correct. We are thinking seriously of appointing these neeragantıes, at least take some of them who are already there as gangmen.

ಶ್ರೀ ಎಚ್ ಟಿ. ಕೃಷ್ಣಪ್ಪ — ಕೆಲವು ತಾಲ್ಲೂಕು ಮಟ್ಟದಲ್ಲಿ ೩ನೇ ದರ್ಜೆ ಕಂಟ್ರಾಕ್ಟರ್‌ಗಳು ಹೆಚ್ಚಾಗಿದ್ದಾರೆ. ಯಾವುದೋ ಕಾಲದಲ್ಲಿ ಇಷ್ಟು ಹಣ ತೆಗೆದುಕೊಂಡು ಕಾಮಗಾರಿಗಳನ್ನು ಮಾಡತಕ್ಕ ಅವಕಾಶ ಇತ್ತು. ಫೈನಾನ್‌ಷಿಯಲ್ ಲಿಮಿಟ್ ಗೊತ್ತು ಮಾಡಿದ್ದರು. ಈಗ ೨ನೆ ದರ್ಜೆ ಕಟ್ರಾಕ್ಟರ್ಸ್ ಮಾಡತಕ್ಕ ಕೆಲಸವನ್ನು ಹಿಂದೆ ೩ನೇ ದರ್ಜೆ ಕಂಟ್ರಾಕ್ಟರ್ಸ್ ಮಾಡುತ್ತಿದ್ದರು. ಈಗ ಷೆಡ್ಯೂಲ್ ರೇಟ್ ಜಾಸ್ತಿಯಾದುದರಿಂದ ಹೊರಗಡೆಯಿಂದ ಕಂಟ್ರಾಕ್ಟರ್ಸ್‌ನ್ನು ತೆಗೆದುಕೊಂಡು ಬರಬೇಕಾಗಿದೆ. ಹೊರಗಡೆಯಿಂದ ಬಂದ ಕಂಟ್ರಾಕ್ಟರ್ಸ್ ಸಕಾಲದಲ್ಲಿ ಕೆಲಸವನ್ನು ಮಾಡುವುದಿಲ್ಲ. ಅವರಿಗೆ ಏನೇನೋ ತೊಂದರೆಗಳು ಇರುತ್ತವೆ. ಹೊರಗಡೆಯಿಂದ ಕೂಲಿಕಾರರನ್ನು ಕರೆದುಕೊಂಡು ಬರಬೇಕು. ಅಲ್ಲೇ ನಿಂತು ಉಸ್ತುವಾರಿಯನ್ನು ನೋಡಿಕೊಳ್ಳಬೇಕು. ಮುಂತಾದ ತೊಂದರೆಗಳು ಇರುತ್ತವೆ.

Sri H. M. Channabasappa.— The present policy is that as far as possible we will give on piece-work system so that the local contractors and local people might also get employed. ಆದುದರಿಂದ ಏನಾದರೂ ಸ್ಪೆಷಲ್ ಟೆಕ್ನಿಕಲ್ ನಾಲೆಡ್ಜ್ ಇದ್ದು ದೊಡ್ಡ ಕೆಲಸಗಳನ್ನು ಮಾಡುವ ಹಾಗಿದ್ದರೆ ಆಗ ಟೆಂಡರ್ ಕಾಲ್ ಮಾಡುತ್ತೇವೆ. ಇತರ ಸಣ್ಣಪುಟ್ಟ ಕೆಲಸಗಳಲ್ಲಿ ಸ್ಥಳದ ಜನಗಳಿಗೆ ಕೆಲಸ ಕೊಡಬೇಕು ಮತ್ತು ಸ್ಥಳದ ಸಣ್ಣಪುಟ್ಟ ಕಂಟ್ರಾಕ್ಟರ್ಸ್ ಡೆವಲಪ್ ಆಗಬೇಕು ಎನ್ನುವ ಉದ್ದೇಶದಿಂದ ಆ ರೀತಿ ಮಾಡಿದ್ದೇವೆ. ಮೈನರ್ ಇರಿಗೇಷನ್‌ಗೂ ಕೂಡ ಈ ರೀತಿ ಮಾಡಬೇಕು ಎಂದು ಆರ್ಡರ್ ಕೊಟ್ಟಿದ್ದೇವೆ. ಮತ್ತೆ ಅದರಲ್ಲೂ ರಸ್ತೆ ಕಾಮಗಾರಿಗಳನ್ನೂ ಕೂಡ ಸರ್ವೇಸಾಧಾರಣವಾಗಿ ಲೋಕಲ್ ಕಂಟ್ರಾಕ್ಟರ್ಸ್ ಮಾಡುತ್ತಿದ್ದಾರೆ. I agree in principal with the hon. member and we will encourage our local contractors and local people.

ಶ್ರೀ ಡಿ. ದೇವರಾಜ್ ಅರಸ್.— ನಾವು ಹೀಗೆ ಮಾಡಬೇಕು ಎಂದು ಹೊರಡುವಾಗ ಹಿಂದೆ ಮಾಡಿದ ರೂಲ್ ಹಾಗೇ ಉಳಿದು ಬಿಟ್ಟಿರುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಆ ರೂಲನ್ನು ಚೇಂಜ್ ಮಾಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—'ಫಸ್ಟ್ ಕ್ಲಾಸ್, ಸೆಕೆಂಡ್ ಕ್ಲಾಸ್, ತರ್ಡ್ ಕ್ಲಾಸ್' ಏಕೆ ಬಂತು ಎಂದರೆ, ಕೆಪಾಸಿಟಿ ಇಲ್ಲದೇ ಎಲ್ಲೋ ಒಂದಿಷ್ಟು ದುಡ್ಡು ತಂದುಕೊಟ್ಟು, ಲೋಯಸ್ಟ್ ಯಾರು ಕೊಟ್ಟಿರುತ್ತಾರೋ ಅವರಿಗೆ ಕೊಟ್ಟು ಆಮೇಲೆ ಹಣ ಇಲ್ಲದೆ ಮಾಡತಕ್ಕ ಪರಿಸ್ಥಿತಿ ಬಂತು. ಕೆರೆಕಟ್ಟೆ, ಕುಂಟೆ ರಸ್ತೆಗಳ ಕೆಲಸಗಳನ್ನು ಸ್ಥಳೀಯ ಜನಗಳಿಗೆ ಕೊಡಬೇಕು ಎಂದು ಆರ್ಡರ್ ಇಷ್ಯೂ ಮಾಡಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ — ಅನಂತರ, ಮಾಡಿದಂಥ ಕೆಲಸಗಳಿಗೆ ಹಣ ಕೊಡುವ ವಿಚಾರದಲ್ಲಿ ಸರ್ಕಾರ ಬಹಳ ನಿಧಾನ ಮಾಡುತ್ತಿದೆ. ಕೆಲವು ಕಂಟ್ರಾಕ್ಟರ್ಸ್ ವಿಚಾರದಲ್ಲಿ ಹೇಳಬೇಕಾದರೆ ೬ ತಿಂಗಳು, ೮ ತಿಂಗಳು ಒಂದು ವರ್ಷದ ತನಕ ಕಾಯುವಂಥ ಸಂದರ್ಭಗಳು ಬಂದಿವೆ. ನಾನು ಬೆಂಗಳೂರು ಕಂಟ್ರಾಕ್ಟರ್ಸ್ ಬಗ್ಗೆ ಹೇಳುವುದಿಲ್ಲ. ತಾಲ್ಲೂಕು ಮಟ್ಟದಲ್ಲಿ ಕೆಲಸಮಾಡತಕ್ಕ ಕಂಟ್ರಾಕ್ಟರ್ಸ್ ದುಬಾರಿ ಬಡ್ಡಿ ಕೊಟ್ಟು ಹಣ ತೆಗೆದುಕೊಂಡು ಬಂದು ಕೆಲಸಮಾಡುತ್ತಾರೆ. ಆ ಕಂಟ್ರಾಕ್ಟರ್ಸ್ ಏನು ಲಾಭ ಬರುತ್ತದೆ ಎಂದು ಅಂದಾಜು ಮಾಡಿಕೊಂಡಿರುತ್ತಾರೋ ಅದಕ್ಕಿಂತ ಎರಡರಷ್ಟು ಬಡ್ಡಿ ತೆತ್ತು, ಇರತಕ್ಕ ಆಸ್ತಿಪಾಸ್ತಿಗಳನ್ನು ಮಾರಿಕೊಂಡು ಬೀದಿ ಪಾಲು ಆಗುವಂಥ ಸಂದರ್ಭಗಳು ಉಂಟು. ಆದುದರಿಂದ ಅವರಿಗೆ ಹಣ ಪಾವತಿ ಮಾಡುವ ಬಗ್ಗೆ ವಿಳಂಬವಾಗುತ್ತಿದೆ. ಇದನ್ನು ಕಡಿಮೆ ಮಾಡಬೇಕು.

ಆಮೇಲೆ ಲೋಕೋಪಯೋಗಿ ಇಲಾಖೆಯಲ್ಲಿ ಇರತಕ್ಕ ಅನಾಥ ಸಿಬ್ಬಂದಿ, ವರ್ಕ್ ಚಾರ್ಜ್‌ಡ್ ಎಂಪ್ಲಾಯಿಸ್ ಶಾಪಗ್ರಸ್ತ ಜನ ಏನಿದ್ದಾರೆ ಅವರನ್ನು ಇಲಾಖೆಯವರು ಸ್ವಲ್ಪ ಸಹಾನುಭೂತಿಯಿಂದ ಇಟ್ಟುಕೊಳ್ಳಬೇಕಾದುದು ಬಹಳ ಮುಖ್ಯ. ಈ ಸಿಬ್ಬಂದಿಯನ್ನು ಮಿತವ್ಯಯದ ಹೆಸರಿನಲ್ಲಿ ಕಡಿಮೆಮಾಡಬೇಕು ಎಂದು ಸರ್ಕಾರದವರು ಆದೇಶವನ್ನು ಕಳಿಸಿದರು. ೨೦-೩೦ ವರ್ಷಗಳಿಂದ ಕೆಲಸಮಾಡಿ ಇದನ್ನೇ ನಂಬಿ ಬದುಕುತ್ತಿರುತ್ತಾರೆ. ಇದನ್ನೇ ಪೂರ್ಣವಾಗಿ ಆಶ್ರಯಿಸಿರತಕ್ಕ ಜನಗಳನ್ನು ನಾವು ಕೈ ಬಿಡುವುದಕ್ಕೆ ಆಗುವುದಿಲ್ಲ. ಸರ್ಕಾರ ಇವರ ಬಗ್ಗೆ ಯೋಚನೆ ಮಾಡಬೇಕು. ಅವರಿಗೆ ಪೆನ್‌ಷನ್ ಕೊಡುವುದಿಲ್ಲ. ಮತ್ತೆ ಬೇರೆ ಸಿಬ್ಬಂದಿ ವರ್ಗಕ್ಕೆ ಇರತಕ್ಕ ಡಿ ಎ ವಗೈರೆ ಸೌಲಭ್ಯ ಇವರಿಗೆ ಕೊಡುವುದಿಲ್ಲ. ಇಂಥವರಿಗೆ ಕೊನೇಪಕ್ಷ ಸೇವಾಭದ್ರತೆಯಾದರೂ ಕೊಡದೇ ಹೋದರೆ ಅವರ ಗತಿ ಏನು? ಅವರನ್ನು ತೆಗೆದುಹಾಕುವುದಿಲ್ಲ ಎನ್ನುವ ಭರವಸೆಯನ್ನು ಕೊಡಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಆಮೇಲೆ ಮೆಕಾನಿಕಲ್ ಸ್ಟಾಫ್, ಡ್ರೈವರ್ಸ್, ಕ್ಲೀನರ್ಸ್ ಕೆಲಸಮಾಡಿಕೊಂಡಿದ್ದಾರೆ. ಅವರ ಹಿತರಕ್ಷಣೆ ಮಾಡತಕ್ಕದ್ದು ನಿಮ್ಮ ಆದ್ಯಕರ್ತವ್ಯವಾಗಿದೆ. ಆದರೆ ಇತ್ತೀಚೆಗೆ ಏನಾಗಿದೆ ಎಂದರೆ ಅವರಿಗೆ ಸಂಬಳ ಕೊಡುವಾಗ ಲೆಟರ್ ಆಫ್ ಕ್ರೆಡಿಟ್ ಇಷ್ಯು ಮಾಡತಕ್ಕದ್ದು ಡಿಲೇ ಆಗುತ್ತಿದೆ. ಅವರಿಗೆ ೧೫ನೇ ತಾರೀಖು, ೨೦ನೇ ತಾರೀಖು ಮತ್ತು ೨೫ನೇ ತಾರೀಖಿನವರೆಗೂ ಸಂಬಳ ಕೊಡುವುದಿಲ್ಲ. ದೊಡ್ಡ ದೊಡ್ಡ ಅಧಿಕಾರಿಗಳು, ಹೆಚ್ಚು ಸಂಭಾವನೆ ಪಡೆಯತಕ್ಕ ಅಧಿಕಾರಿಗಳು ಒಂದನೇ ತಾರೀಖು ಸಂಬಳ ತೆಗೆದುಕೊಂಡರೆ, ಕಡಿಮೆ ಸಂಬಳ ಪಡೆಯತಕ್ಕ ಜನ ೨೫ನೇ ತಾರೀಖಿನವರೆಗೂ ಕಾಯಬೇಕು ಈ ತಾರತಮ್ಯ ಇದೆ ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಕಡಿಮೆ ಸಂಬಳ ತೆಗೆದುಕೊಳ್ಳತಕ್ಕ ಜನಗಳ ಬಗ್ಗೆ ತಮಗೆ ಕಾಳಜಿ ಇರಬೇಕು. ಈ ರೀತಿ ವಿಳಂಬವಾಗುವುದನ್ನು ತಾವು ದಯವಿಟ್ಟು ತಡ ಮಾಡತಕ್ಕ ಪ್ರಯತ್ನ ಮಾಡಬೇಕಾಗುತ್ತದೆ.

ಇನ್ನು ಕೆಲವು ಕಡೆ ಕ್ಷಾಮಪರಿಹಾರ ಕಾಮಗಾರಿಗಳನ್ನು ನೀವು ಮಾಡಿಸಿದಿರಿ ಹೆಚ್ಚು ಪ್ರಮಾಣದಲ್ಲಿ ಮಾಡಿಸದೇ ಹೋದರೂ ಕೂಡ ತಾವು ಕೊಟ್ಟ ಆಶ್ವಾಸನೆಯನ್ನು ಸ್ವಲ್ಪ ಮಟ್ಟಿಗಾದರೂ ಈಡೇರಿಸಿದಿರಿ. ಆದರೆ ಹಣ ಹೇಗೆ ಕೊಟ್ಟಿರಿ, ನಾರ್ಮಲ್ ರೋಲ್ ಕೆಲಸಮಾಡತಕ್ಕದ್ದು ಒಬ್ಬ ಕೂಲಿಗಾರನಿಗೆ ಅಂದಿನ ಸಂಜೆ ಅವನು ಮಾಡಿದಂಥ ಕೆಲಸಕ್ಕೆ ಏನು ಸಂಭಾವನೆಯನ್ನು ಗೊತ್ತುಮಾಡಿದ್ದಾರೋ ಅದು ತಲುಪಬೇಕು. ಕನಿಷ್ಠ ಪಕ್ಷ ವಾರಕ್ಕೊಂದಾವರ್ತಿ ಆದರೂ ಅವರ ಸಂಭಾವನೆಯನ್ನು ಪಾವತಿ ಮಾಡತಕ್ಕ ವ್ಯವಸ್ಥೆ ಇರಬೇಕು. ಆದರೆ ಮಂಡ್ಯ ಜಿಲ್ಲೆಯಲ್ಲಿ ೬ ತಿಂಗಳಾದರೂ ಪಾವತಿಯಾಗಿಲ್ಲ. ಈಗ ಪಾವತಿಯಾಗಿದೆ. ಕಳೆದ ಪಿತೃಪಕ್ಷದ ಒಂದು ಸಂದರ್ಭ, ಕೂಲಿಗಾರರು ತಂಡತಂಡವಾಗಿ ಲೋಕೋಪಯೋಗಿ ಇಲಾಖೆ ಮುಂದೆ ಕುಳಿತುಕೊಂಡರು. ನಾಗಮಂಗಲದಲ್ಲಿ ಪೇಮೆಂಟ್ ಮಾಡಿಸಬೇಕಾದರೆ ಧಾರಣಿ, ಘೇರಾವೋ ಮಾಡಿಸಬೇಕಾಯಿತು. ಧಾರಣಿ ಉಪವಾಸ ಸತ್ಯಾಗ್ರಹ ಮಾಡಿ ನಿಮ್ಮಿಂದ ಹಣ ಪಡೆಯತಕ್ಕ ಒಂದು ನೀತಿಯನ್ನು ನೀವು ಅನುಸರಿಸಬೇಡಿ. ಯಾರು ಶ್ರಮಜೀವಿಗಳು ಇದ್ದಾರೋ, ಯಾರು ಕೆಲಸಮಾಡಿದ್ದಾರೋ ಅವರ ಕೆಲಸಕ್ಕೆ ತಕ್ಕ ಪ್ರತಿಫಲವನ್ನು ಆ ದಿವಸವೇ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ತಮ್ಮನ್ನು ಅಗ್ರಹಪೂರ್ವಕವಾಗಿ ಕೇಳಿಕೊಂಡು ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER — The discussion will continue on Monday. Now the House stands adjourned to meet on Monday at 1 P.M.

The House adjourned at forty minutes past One of the clock to meet again at One of the Clock on Monday, the 3rd March 1975.